ॐ

॥ ಶ್ರೀ ವಿಘ್ನೇಶ್ವರಾಯ ನಮಃ ॥ ॥ ಶ್ರೀ ವಾಸುಕೀ ನಾಗರಾಜ ಪ್ರಸೀದತು ॥
॥ ಶ್ರೀ ಗಾಯತ್ರಿ ದೇವಿ ಪ್ರಸನ್ನಾ ॥

# ಶ್ರೀ ಗಾಯತ್ರಿ ದೇವಿ ದೇವಸ್ಥಾನ

## ಪಿಲಿಂಗಾಲು

ಕಾಡಬೆಟ್ಟು ಗ್ರಾಮ ಮತ್ತು ಅಂಚೆ
ಬಂಟ್ವಾಳ ತಾಲೂಕು, ದ.ಕ. 574 265.



# ಭಜನಾ ಪುಸ್ತಕ

# ಭಜನಾ ಪುಸ್ತಕ

## ಶ್ರೀ ಗಾಯತ್ರಿ ದೇವಿ ದೇವಸ್ಥಾನ

ಪಿಲಿಂಗಾಲು, ಕಾಡಬೆಟ್ಟು


ಪುಟಗಳು : **vi + 118**

ಪ್ರಥಮ ಮುದ್ರಣ : **24 ಆಗಸ್ಟ್, 2018**

ವಿನ್ಯಾಸ : **ಅಭಿಷೇಕ್, ಪಿಲಿಂಗಾಲು**

ಗೌರವ ಬೆಲೆ : **ರೂ. 125/–**

# ಪರಿವಿಡಿ


ಪ್ರಾರ್ಥನಾ ಶ್ಲೋಕ – 01

**ಗಣಪತಿ**

ವಂದಿಪೆ ನಿನಗೆ – 02
ಗಜವದನಾ ಬೇಡುವೆ – 03
ಶರವು ಸಿದ್ಧಿ ವಿನಾಯಕ – 03
ಗಜಮುಖನೆ ಗಣಪತಿಯೇ – 04
ಶರಣು ಮಹಾಗಣಪತಿ – 05
ಓ ಎನುವಾ ಗಣಪಾ – 06
ಎಲ್ಲೆಲ್ಲೂ ನೀನೆ – 07
ಶರಣು ಶರಣಯ್ಯಾ – 08
ಗಜವದನಾ ಹೇ ರಂಭಾ – 09

**ಗುರು ರಾಘವೇಂದ್ರ**

ರಾಘವೇಂದ್ರ ರಾಘವೇಂದ್ರ – 10
ವಾರ ಬಂತಮ್ಮ – 11
ಎಲ್ಲಿ ನಿನ್ನ ಭಕ್ತರೋ – 12
ಮಂತ್ರಾಲಯಕೆ ಹೋಗೋಣ – 13
ರಾಯ ಬಾರೋ ರಾಘವೇಂದ್ರ – 13
ಹಾಲಲ್ಲಾದರು ಹಾಕು – 14

**ಅಯ್ಯಪ್ಪ**

ಅಯ್ಯಪ್ಪ ಅಯ್ಯಪ್ಪ – 15
ಬಾಲಕನಿವನು ಅಲ್ಲಪ್ಪಾ – 16
ಉದಿಸುವುದೆಂದು – 17
ದೇವರೇ ನೀನು ನಿಜವಪ್ಪ – 17
ಸ್ವಾಮಿ ನಿನ್ನ ಪಾದವೇ – 18
ಓಲು ನಿನ್ನ ಭಕ್ತರೋ – 18
ಗುಡಿ ಗಂಟೆ ಘಳಿರೆಂದು – 19
ಏನು ಅಂದ ಏನು ಚಂದ – 20
ಎಲ್ಲೆಲ್ಲೋ ನೀನೆ ಅಯ್ಯಪ್ಪಾ – 21
ಶಬರಿ ಮಲೆಯಾತ್ರೆ – 22
ಸ್ವಾಮಿ ಅಯ್ಯಪ್ಪಾ – 23
ಪೂಜಿಸಲೆಂದೇ – 24
ನಿನ್ನ ದಾಸನಾದೆ ಸ್ವಾಮಿ – 25

**ಶಾರದಾ ದೇವಿ**

ಎಂಥ ಅಂದ ಎಂಥ ಚಂದ – 26
ನಮ್ಮಮ್ಮ ಶಾರದೆ – 27
ಬಾವದೆಲೆಯಲಿ – 28
ಅಮ್ಮ ನಿನ್ನ ನಾಮ – 29
ನಮೋ ಶಾರದಾಂಬೆ – 30
ಇವಳೇ ವೀಣಾ ಪಾಣೀ – 30
ವರವ ಕೊಡು ಎನಗೆ – 31
ಶ್ರೀ...ಶಾರದಾಂಬೆ ಪೂಜಿಪೆ – 32

**ಮಹಾಲಕ್ಷ್ಮೀ**

ಕಣ್ಣುಗಳೆರಡು ಸಾಲದಮ್ಮ – 33
ಭಾಗ್ಯದಾ ಲಕ್ಷ್ಮೀ – 34
ಏನು ಧನ್ಯಳೋ – 35

**ದೇವಿ**

ಪಾಹಿಶಿವೆ ಪಾಹಿಶಿವೆ – 36
ನೋಡು ನೋಡು ಕಣ್ಣಾರೆ – 37
ದುಂಬಿಯಂತೆ ಹಾರಿ – 38
ಬಂದಿತಮ್ಮ ಶುಕ್ರವಾರ – 39
ಕೊಲ್ಲೂರು ಸಿರಿದೇವಿ – 40
ತಾಂಬೂಲ ಕಾಣಿಕೆ – 41
ಇಂದು ಶುಕ್ರವಾರ – 42
ಭಾಗ್ಯವ ಕೊಡೆ ಗಾರುತಿ – 43
ದೇವಿ ಎಂಕ್ಲೆ ಮೇಲುಡೆ – 43
ಶರಣು ಶರಣು ಜಯದುರ್ಗೇ – 44
ಪರಮ ಪಾವನ – 45
ನಮೋ ಭ್ರಾಮರಿ – 46
ಝುಣಕ್ ಝುಣಕ್ ಗೆಜ್ಜೆದ – 47
ಅಮ್ಮ ಇರೆನ ಜೋಕುಲೆಂಕುಲು – 48
ಭಜನೆ ಮಲ್ಪುಗ – 49
ಜಯವಾಗಲಿ ನಿತ್ಯ – 50
ಯೇತ್ ಪೊರ್ಲು ತೋಜುವ – 51
ಮರುಳು ಮಾಡಿಕೊಂಡೆಯಲ್ಲೆ – 52

**ಶಿವ**

ನಂಬಿದೆ ನಿನ್ನಾ ನಾಗಭರಣ – 53
ಮನಸ್ಸಿನಲ್ಲಿ ನಿಂತಿರಲು – 54
ನ್ಯಾಯ ನೀತಿ – 55
ಧರ್ಮಸ್ಥಳಕೆ ಹೋಗೋಣ – 56
ಕಾಶಿಯಿಂದ ಬಂದನಿಲ್ಲಿ – 57
ಬ್ರಹ್ಮ ಮುರಾರಿ – 58
ನೀಡು ಶಿವ ನೀಡದಿರು – 59
ಓ ನಮಃ ಶಿವಾಯೋ – 60

**ರಾಮ**

ಭಜನೆಗೆ ಪ್ರಾರಂಭ – 61
ಓಂ ಶ್ರೀರಾಮ – 62
ತೆರೆಯೋ ಬಾಗಿಲನು ರಾಮ – 63
ರಾಮ ರಾಮ ಎಂಬೆರಡಕ್ಷರ – 63
ರಾಮಕೃಷ್ಣ ಹರೇ – 64
ಇದೇ ರಾಮ ನಾಮ – 65
ನಾ ನಿನ್ನ ದಾಸನಯ್ಯ – 66
ಅಲ್ಲಿ ನೋಡಲು ರಾಮ – 67
ಧನ್ಯನಾದೆನು ರಾಮ – 68
ರಾಮ ರಾಮ ರಾಮ್ ರಾಮ್ – 69

**ಕೃಷ್ಣ**

ಕೃಷ್ಣ ಕೃಷ್ಣ ಬಾಲಕೃಷ್ಣ – 70
ಗೆಜ್ಜೆಯ ಕಟ್ಟಿ – 71
ಜಯ ಜಯ ಕೃಷ್ಣಾ – 72
ಬೇಗ ಬಾರೋ ನೀಲ ಮೇಘ – 73
ದಾನವ ಕದಳಿಯ – 74
ಮೆಲ್ಲ ಮೆಲ್ಲನೆ ಬಂದನೆ – 75
ರಂಗ ಕೊಳಲನೂದಲಾಗಿ – 76
ಜಯಜನಾರ್ಧನ ಕೃಷ್ಣ – 77
ಯಾದವ ನೀ ಬಾ – 79
ಪೋಪು ಹೋಗೋಣ – 80
ದಯಾಮಾಡೋ ರಂಗಾ – 80
ಈ ಮುದ್ದು ಕೃಷ್ಣನ – 81

ಬಾರಯ್ಯ ಬಾರೋ – 82
ಮಧುಕರ ವೃತ್ತಿ – 82
ನೋಡು ನೋಡು ಗೋಪಿ – 83
ಪಿಳ್ಳಂಗೋವಿಯ – 84
ಹುಟ್ಟಿದೇಳು ದಿವಸದಲಿ – 85
ಕಂಡು ಕಂಡು ನೀಯೆನ್ನ – 86
ಗುಮ್ಮನ ಕರೆಯದಿರೆ – 87
ಕಂಡೆ ನಾ ಗೋವಿಂದನಾ – 88
ದೇವಕಿ ಕಂದ ಮುಕುಂದ – 89
ನಂದಗೋಪ ನಂದನ – 90
ಎಲ್ಲಿರುವೆ ಮುದ್ದು ಕೃಷ್ಣ – 91
ನಾನೇ ಎಂಬ ಭಾವ – 92
ಈ ಪರಿಯ ಸೊಬಗಾವ – 93
ತಲೆಯ ಮೆಟ್ಟಿ – 94
ಲಾಲಿಸಿದಳು ಮಗನ – 94
ಕೃಷ್ಣಾ ನೀ ಬೇಗನೇ – 95
ಯಾರೇ ರಂಗನ ಕರೆಯ – 95
ಭಕುತ ಜನ ಮುಂದೆ – 96

**ವಿಷ್ಣು**

ಹರಿ ಕುಣಿದಾ ನಮ್ಮ – 97
ಕಾಪಾಡು ಶ್ರೀ ಸತ್ಯನಾರಾಯಣ – 98
ನಂಬದಿರು ಈ ದೇಹ – 99
ಬಾಗಿಲನು ತೆರೆದು – 100
ದೇವ ಬಂದ ನಮ್ಮ – 101
ಇಷ್ಟು ದಿನ ಈ ವೈಕುಂಠ – 102
ನೀನ್ಯಾಕೋ ನಿನ್ನ ಹಂಗ್ಯಾಕೋ – 103
ನೀ ಮಾಯೆಯೊಳಗೋ – 104
ಕಣ್ಣಿನೊಳಗೆ ನೋಡೋ – 105
ಯಮನೆಲ್ಲೂ ಕಾಣನೆಂದು – 106
ಯಾರಿಗೆ ಯಾರುಂಟು – 107
ಅಂಬಿಗಾ ನಾ ನಿನ್ನ – 108
ಆಚಾರವಿಲ್ಲದ ನಾಲಿಗೆ – 109
ರಘುರಾಮ ಚಂದಿರನೆ – 110
ಹಕ್ಕಿಯ ಹೆಗಲೇರಿ – 111
ಭೂಷಣಕೆ ಭೂಷಣ – 112
ತಿರುಪತಿ ವೆಂಕಟರಮಣ – 113
ಎಕ್ಕಲಾರೆ ಕೈ ಎಂಜಲು – 114

**ಮುಖ್ಯಪ್ರಾಣ**

ನಂಬಿ ಬಂದೆ ಮುಖ್ಯಪ್ರಾಣ – 115
ಕೂಸಿನ ಕಂಡೀರಾ – 116
ಎಲ್ಲಿ ಹನುಮನೋ – 117
ಜೈ ಜೈ ಹನುಮಾನ್ – 118

**ವಿಠಲ**

ಡಂಗುರವ ಸಾರಿರಯ್ಯ – 120
ಚಿಂತ್ಯಾಕೆ ಮಾಡುತ್ತಿದ್ದಿ – 121
ನಾ ಡೊಂಕಾದರೆ – 122
ಜಯತು ಜಯ ವಿಠಲ – 123
ಜೈ ಜೈ ವಿಠಲ – 123

**ಮಂಗಳಂ**

ಮಂಗಳಂ ಶ್ರೀ ಪಂಚದುರ್ಗೆ – 124
ಮಂಗಳಂ ಜಯ ಮಂಗಳಂ – 125

# ಭಜನೆಯ ಮಹತ್ವ

ಭಜಕ ಮನಸ್ಸಿನ ಗುನುಗುಟ್ಟುವಿಕೆಯ ಆವೇಶದಿಂದ ನಾದದ ತರಂಗಗಳು ರೂಪಾಂತರಗೊಳ್ಳುವುದೇ ಭಜನೆಯ ಹುಟ್ಟಿಗೆ ಕಾರಣವಾಗುತ್ತದೆ. ಭಕ್ತಿಯ ಪ್ರಕಟಣೆ ಭಜನೆಯಿಂದಾದರೆ, ಭಕ್ತಿಯೆಂಬುವುದು ನಮಗಿಂತ ಶ್ರೇಷ್ಠವಾದ ಶಕ್ತಿಯ ಮೇಲೆ ಇರುವ ನಂಬಿಕೆ. ನಂಬಿಕೆಯಿಂದಲಾಗಿ ಆ ಶಕ್ತಿಗೆ ಅಧೀನ. ಹಾಗಾಗಿ ನಮ್ಮ ಇಷ್ಟಾರ್ಥಗಳು ಸಾಕಾರಗೊಳ್ಳುವುದು. ಭಾವಪರವಶರಾಗಿ ಧ್ಯಾನದಿಂದ ಅಂತರ್ಮುಖಿಗಳಾಗಿ ಜೀವಾತ್ಮ ಮತ್ತು ಪರಮಾತ್ಮನ ನಡುವೆ ಅನುಸಂಧಾನಗೊಳ್ಳುವುದಕ್ಕಾಗಿ ಸಂಪರ್ಕ ಸಾಧಿಸುವುದೇ ಭಕ್ತಿ ಮಾರ್ಗ. ಕಲಿಯುಗದಲ್ಲಿ ಭಗವಂತ ಭಜನೆಗೆ ಒಲಿಯುತ್ತಾನೆ. ಅರ್ಥಾತ್ ನಾಮ ಸ್ಮರಣೆಯೇ ದೇವರ ಒಲುಮೆಯ ದಿವ್ಯ ಮಂತ್ರ. ಹಾಗಾಗಿ ಭಜನೆ ಎಂದರೆ ಭಗವಂತನ ಒಲಿಸುವುದರ ಜೊತೆ ಸಂಪ್ರೀತಿಗೊಳಿಸಿ, ಮನುಷ್ಯ ಮನಸ್ಸುಗಳ ನಡುವೆ ಭಕ್ತಿ ಭಾವದ ಧಾರ್ಮಿಕತೆ, ನೈತಿಕತೆ ಮೂಡಿಸುವಲ್ಲಿ, ಬ್ರಹ್ಮಾಸ್ತ್ರದ ಕರ್ತವ್ಯ ನೆರವೇರಿಸುತ್ತದೆ. ಭಜನೆ ಎನ್ನುವುದು ಭಗವಂತನ ಸ್ತುತಿ ಗೀತೆ. ಪದಗಳ ಮೂಲಕ ಇದನ್ನು ಪೋಣಿಸಿ, ಭಾವಕ್ಕೆ ರಾಗ ಬೆರೆತಾಗ ನಾವೆಲ್ಲರೂ ಅದರ ತಾಳದ ಮೋಡಿಯೊಂದಿಗೆ ಸಂಗೀತದಲ್ಲಿ ಮೈಮರೆತು ಭಗವಂತನ ನಾಮ ಸ್ಮರಣೆ ಮಾಡುತ್ತೇವೆ. ತನ್ಮೂಲಕ ದೇವರೆಡೆಗೆ ಚಿತ್ತವನ್ನ ಹರಿಯಬಿಡುತ್ತೇವೆ. ಪರಮಾತ್ಮನಲ್ಲಿ ಪರಮ ಆತ್ಮವನ್ನು ಕಂಡು ಧ್ಯಾನಾಸಕ್ತರಾಗಿ ಏಕಾಗ್ರತೆಯನ್ನು ಸಾಧಿಸುತ್ತೇವೆ. ಹೀಗಾಗಿ ಭಜನೆಯೆಂದರೆ ಭಗವಂತನ ಧ್ಯಾನವೂ ಹೌದು, ತಪಸ್ಸೂ ಹೌದು.

ಸಂಗೀತ ಎಂಬ ದೇವತಾರಾಧನೆ ಕಲೆಯ ಮೊದಲ ಮೆಟ್ಟಿಲು ಭಜನೆ. ಇಡೀ ಊರು ಭಜನೆಯ ಪ್ರಭಾವಕ್ಕೆ ಒಳಗಾದರೆ ದುಶ್ಚಟ, ದುರ್ವಿಚಾರ ವ್ಯಸನಮುಕ್ತ ಸಮಾಜ ನಿರ್ಮಾಣವಾಗುತ್ತದೆ. ಜೊತೆಗೆ ಭಕ್ತಿ ತನ್ಮಯತೆಯಿಂದ ದಿನವೂ ದೇವರ ನಾಮ ಹಾಡುವುದರಿಂದ ನಮ್ಮ ಮನಸ್ಸು ಸಾತ್ವಿಕತೆಯ ಆ ಒಂದು ಮಾರ್ಗವನ್ನು ಸಾಗುತ್ತದೆ. ಜೀವನ ಉಲ್ಲಾಸದಿಂದ ತುಡಿಯುತ್ತದೆ. ಬಾಳು ಸಾರ್ಥಕತೆಯನ್ನು ಪಡೆಯುತ್ತದೆ. ಜನ ಸಾಮಾನ್ಯರನ್ನು ಉನ್ನತ ಧ್ಯೇಯದತ್ತ, ಸಾರ್ಥಕ ಜೀವನದತ್ತ ದೈವೀ ಚಿಂತನೆಗಳತ್ತ ಮತ್ತು ಕೌಟುಂಬಿಕ, ಸಾಮಾಜಿಕ ವಲಯಗಳಲ್ಲಿ ಸ್ನೇಹ–ವಿಶ್ವಾಸದ ಆತ್ಮೀಯ ವಾತಾವರಣ ನಿರ್ಮಿಸಿಕೊಂಡಲ್ಲಿ, ಭಕ್ತರಿಗೆ ಭಜನೆ ಭಗವಂತ ಒದಗಿಸಿದ ವರದಾನವಾಗುತ್ತದೆ. ಭಕ್ತಿಯಿಂದ ಭಗವಂತನನ್ನು ಹಾಡಿ, ಕೊಂಡಾಡಿ, ಲಜ್ಜೆ ಬಿಟ್ಟು ಕುಣಿದರೆ ಭಗವಂತ ಅನುಗ್ರಹಿಸುತ್ತಾನೆ. ಭಕ್ತರಿಗೆ ಭಗವತ್ ದರ್ಶನವೇ ಜೀವನದ ಗುರಿ. ಅಗೋಚರನಾದ ಆದರೆ ಸಕಲ ಜೀವರಾಶಿಗಳ ಸೃಷ್ಟಿ–ಸ್ಥಿತಿ–ಲಯಗಳ ನಿಯಂತ್ರಕನಾದ ಭಗವಂತ ಕೇವಲ ಸ್ತುತಿಗೆ ಒಲಿಯುವುದಾದರೆ, ಮುಕ್ತಿ ಒದಗಿಸುವುದಾದರೆ ಮತ್ತಿನ್ನೇಕೆ ತಡ? **"ಹರಿ ಭಜನೆ ಮಾಡೋ ನಿರಂತರ, ಹರಿ ಭಜನೆ ಮಾಡೋ ನಿರಂತರ, ಪರ ಗತಿಗಿದು ನಿರ್ಧಾರ"**.

# ಪ್ರಾರ್ಥನಾ ಶ್ಲೋಕ

ಅಗಜಾನನಂ ಪದ್ಮಾರ್ಕಂ ಗಜಾನನಂ ಅಹರ್ನಿಶಂ ।
ಅನೇಕದಂತಂ ಭಕ್ತನಾಂ ಏಕದಂತಂ ಉಪಾಸ್ಮಹೇ ॥
ನಮಸ್ತೇ ಸರ್ವಲೋಕಂ ಜನನೀ ಮರ್ಧಿನಿಸಂಭವಂ ।
ಯಾ ಮುನೇಂದ್ರ ಪದ್ಮಾರ್ಕಂ ವಿಷ್ಣು ರಕ್ಷಸ್ಥಳಾಚ್ಯುತ ॥
ಸರ್ವಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಕೇ ।
ಶರಣ್ಯೇ ತ್ರಯಂಬಕೇ ದೇವಿ ನಾರಾಯಣೀ ನಮೋಸ್ತುತೇ ॥
ಸೃಷ್ಟಿ ಸ್ಥಿತಿ ವಿನಾಶನಾಂ ಶಕ್ತಿ ಭೂತೇ ಸನಾತನೇ ।
ಗುಣಾಶ್ರೇಯೇ ಗುಣಮಹೇ ನಾರಾಯಣೀ ನಮೋಸ್ತುತೇ ॥
ಶರಣಾಗತ ಪರಿತ್ರಾಣ ಪಾರಾಯಣೇ ।
ದೇವಿ ನಾರಾಯಣೀ ನಮೋಸ್ತುತೇ ॥
ಯಾಕುಂದೇ ದೇವಿ ತುಷಾರಾ ಹಾರ ಧವಳ ।
ಯಾ ಶುಭ್ರವಸ್ತ್ರಾನ್ವಿತ ॥
ಯಾ ವೀಣಾ ವರ ದಂಡ–ಮಂಡಿತ ಕರ ।
ಯಾ ಶ್ವೇತಾ ಪದ್ಮಾಸನ ।
ಯಾ ಬ್ರಹ್ಮಾಚ್ಯುತ ಶಂಕರ ॥
ಯಾ ಪ್ರಭೋ ದೇವ ಸದಾ ವಂದಿತ ।
ಸಾಪಾ ಪಾಂತು ಸರಸ್ವತೀ ಭಗವತೀ ನಿಶ್ಯೇಷಂ ಜಾಡ್ಯಾಪಹಾ ॥

## ಗಣಪತಿ ಸ್ತೋತ್ರಂ

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ ।
ಪ್ರಸನ್ನವದನಂ ಧ್ಯಾಯೇತ್ ಸರ್ವ ವಿಘ್ನೋಪಶಾಂತಯೇ ॥
ಗಜಾನನಂ ಭೂತಗಣಾದಿ ಸೇವಿತಂ ।
ಕಪಿತ್ಥ ಜಂಬೂಫಲಸಾರ ಭಕ್ಷಿತಂ ।
ಉಮಾಸುತಂ ಶೋಕವಿನಾಶ ಕಾರಣಂ ।
ನಮಾಮಿ ವಿಘ್ನೇಶ್ವರ ಪಾದಪಂಕಜಂ ।
ವಕ್ರತುಂಡ ಮಹಾಕಾಯ ಕೋಟಿಸೂರ್ಯ ಸಮಪ್ರಭಾ ।
ನಿರ್ವಿಘ್ನಂ ಕುರುಮೇದೇವ ಸರ್ವಕಾರ್ಯೇಶು ಸರ್ವದಾ ।

# ವಂದಿಪೆ ನಿನಗೆ

ವಂದಿಪೆ ನಿನಗೆ ಗಣನಾಥ ।
ಮೊದಲೊಂದಿಪೆ ನಿನಗೆ ಗಣನಾಥ ॥ ಪ ॥

ಬಂದ ವಿಘ್ನಗಳ ಕಳೆ ಗಣನಾಥ ।
ಆದಿಯೊಳು ನಿನ್ನಪಾದ ಪೂಜಿಸಿದ ಧರ್ಮರಾಯ ॥
ಸಾಧಿಸಿದ ರಾಜ್ಯವ ಗಣನಾಥ ॥ ೧ ॥

ಹಿಂದೆ ರಾವಣನು ಮದದಿಂದ ನಿನ್ನ ಪೂಜಿಸದೆ ।
ಸಂದನು ರಣದಲಿ ಗಣನಾಥ ॥ ೨ ॥

ಮಂಗಳ ಮೂರುತಿ ಗುರು ರಂಗವಿಠಲನ ಪಾದ ।
ಭೃಂಗನೆ ಪಾಲಿಸು ಗಣನಾಥ ॥ ೩ ॥

# ಗಜವದನಾ ಬೇಡುವೆ

ಗಜವದನಾ ಬೇಡುವೆ ಗೌರಿ ತನಯ ।
ತ್ರಿಜಗ ವಂದಿತನೆ ಸುಜನರ ಪೊರೆವನೆ ॥ ಪ ॥

ಪಾಶಾಂಕುಶಧರ ಪರಮಪವಿತ್ರ ।
ಮೂಷಿಕ ವಾಹನ ಮುನಿಜನ ಪ್ರೇಮ ॥ ೧ ॥

ಮೋದದಿ ನಿನ್ನಯ ಪಾದವ ತೋರೋ ।
ಸಾಧುವದಿಂತನೆ ಆದರದಿಂದಲಿ ॥ ೨ ॥

ಸರಸಿಜನಾಭ ಶ್ರೀ ಪುರಂದರ ವಿಠಲನ ।
ನಿರುತ ನೆನೆಯುವಂತೆ ದಯಾಮಾಡೋ ॥ ೩ ॥

# ಶರಣು ಸಿದ್ಧಿ ವಿನಾಯಕ

ಶರಣು ಸಿದ್ಧಿ ವಿನಾಯಕ । ಶರಣು ವಿದ್ಯ ಪ್ರದಾಯಕ ॥
ಶರಣು ಪಾರ್ವತಿ ತನಯಮೂರುತಿ । ಶರಣು ಮೂಷಿಕ ವಾಹನ ॥ ಪ ॥

ನಿಟಿಲ ನೇತ್ರನೆ ದೇವಿಸುತನೆ । ನಾಗಭೂಷಣ ಪ್ರಿಯನೇ ।
ತಟಿಲತಾಂಕಿತ ಕೋಮಲಾಂಗನೆ । ಕರ್ಣಕುಂಡಲ ಧಾರಣೆ ॥ ೧ ॥

ಬಟ್ಟ ಮುತ್ತಿನ ಹಾರಪದಕನೆ । ಬಾಹುಹಸ್ತ ಚತುಷ್ಟನೆ ॥
ಇಟ್ಟ ತೊಡುಗೆಯ ಹೇಮಕಂಕಣ । ಪಾಶಅಂಕುಶ ಧಾರಣೆ ॥ ೨ ॥

ಕುಕ್ಷಿ ಮಹಾಲಂಭೋದರಣೆ । ಇಕ್ಷುಚಾಪನ ಗೆಲಿದನೆ ॥
ಪಕ್ಷಿವಾಹನನಾದ ಪುರಂದರ ವಿಠಲನ ನಿಜದಾಸನೆ ॥ ೩ ॥

# ಗಜಮುಖನೆ ಗಣಪತಿಯೇ

ಗಜಮುಖನೆ ಗಣಪತಿಯೇ ನಿನಗೆ ವಂದನೆ ।
ನಂಬಿದವರ ಪಾಲಿನ ಕಲ್ಪತರು ನೀನೆ ॥ ಪ ॥

ಬಾಧ್ರಪದ ಶುಕ್ಲದ ಚೌತಿಯಂದು ।
ನೀ ಮನೆಮನೆಗು ದಯಮಾಡಿ ಹರಸು ಎಂದು ॥
ನಿನ್ನ ಸನ್ನಿಧಾನಕೆ ತಲೆಬಾಗಿ ಕೈಯ ಮುಗಿದು ।
ಬೇಡುವ ಭಕ್ತರಿಗೆ ನೀ ದಯಾ ಸಿಂಧು ॥ ೧ ॥

ಈರೇಳು ಲೋಕದ ಅಣುಅಣುವಿನ ॥
ಇಹಪರದ ಸಾಧನಕೆ ನೀನೆ ಕಾರಣ ॥
ನಿನ್ನೊಲುಮೆ ನೋಟದ ಒಂದೇ ಹೊನ್ನ ಕಿರಣ ।
ನೀಡಿದರೆ ಸಾಕಯ್ಯ ಜನ್ಮ ಪಾವನ ॥ ೨ ॥

ಪಾರ್ವತಿ ಪರಶಿವನ ಪ್ರೇಮ ಪುತ್ರನೇ ।
ಪಾಲಿಸುವ ಪರದೈವ ಬೇರೆ ಕಾಣೆ ॥
ಪಾಪದ ಪಂಕದಲಿ ಪದುಮ ಎನಿಸು ಎನ್ನಾ ।
ಪಾದಸೇವೆ ಒಂದೇ ಧರ್ಮ ಸಾಧನ ॥ ೩ ॥

# ಶರವು ಮಹಾ ಗಣಪತೀ

ಶರವು ಮಹಾ ಗಣಪತೀ ನಮಗೆ ನಿನ್ನದೇ ಸ್ತುತಿ ।
ಅಣುದಿನವು ಭಕ್ತರು ನಿನ್ನ ನಂಬಿ ಇರುವರು ॥
ಶರವು ಮಹಾ ಗಣಪತೀ......... ॥ ಪ ॥

ಗಜಮುಖದ ದೇವನೇ ನಿನಗೆ ವಂದನೆ ।
ಭಕ್ತಿಯ ಸೇವೆಯಲಿ ಆರಾಧನೆ ॥
ಕಷ್ಟಾಪರಿಹಾರಕೆ ಮಾರ್ಗದರ್ಶಕ ।
ಕಾಪಾಡು ಕರುಣಾಳು ವಿಘ್ನನಾಶಕ ॥ ೧ ॥

ಶರವು ಶಿವಾಲಯದ ತೆಂಕು ದಿಕ್ಕಿನಲ್ಲಿ ।
ದಿವ್ಯ ಮಹಾ ಗಣೇಶ ಅವತರಿಸಿದನಲ್ಲಿ ॥
ನಿತ್ಯವೂ ಎಡಬಿಡದೆ ನಾವು ವಂದಿಪೆ ।
ಸಕಲ ಇಷ್ಟಾರ್ಥವ ಪರಿಪಾಲಿಸೋ ॥ ೨ ॥

ಪುಣ್ಯ ಪ್ರಸಾದವೇ ಪಂಚಕಜ್ಜಾಯ ।
ಮುಕ್ತಿಯನ್ನು ನೀಡುವ ಭಕ್ತ ಜನಪ್ರಿಯ ॥
ಸತ್ಯ ಧರ್ಮದಿ ತೋರೋ ನಿನ್ನ ಮಾಯೆಯ ।
ಶಾಸ್ತ್ರ ಸಂಪೂಜಿತ ಸಿದ್ಧಿವಿನಾಯಕ ॥ ೩ ॥

# ಓ ಎನ್ನುವಾ ಗಣಪಾ

ಓ ಎನ್ನುವಾ ಗಣಪಾ ಕರೆದಾಗ
ಓ ಎನ್ನುವಾ ಗಣಪಾ ॥ ಪ ॥

ಓಂಕಾರ ನಾದಲೋಲಾ ಹೇ ಗಣಪಾ ।
ಓಂಕಾರ ರೂಪ ಹೇ ಗಣಪಾ ॥ ೧ ॥

ವಿಘ್ನ ವಿನಾಶಕ ಮೂಷಿಕ ವಾಹನ
ಶಿವ ಗಿರಿಜೆಯರ ಪ್ರೀತಿಯ ಕಂದನ
ಮಹಾ ಗಣಪತೆ ಪರಮ ದಯಾಘನ
ವಿದ್ಯಾಧೀಶನೇ ಕರೆವೆನು ನಾ ॥ ೨ ॥

ಗಜಮುಖದವನೆ  ಗಣಗಳಿಗೊಡೆಯಾ
ಗಣಪತಿವಾಸ ಭಕ್ತರ ಹೃದಯ
ಆತ್ಮ ಲಿಂಗವನು ಧರೆಯಲಿಟ್ಟವನೇ ।
ಬಾಲ ಗಣೇಶನೇ ಕರೆವೆನು ನಾ ॥ ೩ ॥

# ಎಲ್ಲೆಲ್ಲೋ ನೀನೆ

ಎಲ್ಲೆಲ್ಲೋ ನೀನೆ ಗಣೇಶ ಗಣೇಶ ।
ನನ್ನಲ್ಲು ನೀನೆ ಗಣೇಶ ಗಣೇಶ ॥ ಪ ॥

ತಂದೆಯು ನೀನೆ ಗಣೇಶ ಗಣೇಶ ।
ತಾಯಿಯು ನೀನೆ ಗಣೇಶ ಗಣೇಶ ॥ ೧ ॥

ಬಂಧುವು ನೀನೆ ಗಣೇಶ ಗಣೇಶ ।
ಬಳಗವು ನೀನೆ ಗಣೇಶ ಗಣೇಶ ॥ ೨ ॥

ವಿದ್ಯೆಯು ನೀನೆ ಗಣೇಶ ಗಣೇಶ ।
ಬುದ್ಧಿಯು ನೀನೆ ಗಣೇಶ ಗಣೇಶ ॥ ೩ ॥

ಅಲ್ಲಿಯು ನೀನೆ ಗಣೇಶ ಗಣೇಶ ।
ಇಲ್ಲಿಯು ನೀನೆ ಗಣೇಶ ಗಣೇಶ ॥ ೪ ॥

# ಶರಣು ಶರಣಯ್ಯಾ

ಶರಣು ಶರಣಯ್ಯಾ ಶರಣು ಬೆನಕಾ ।
ನೀಡಯ್ಯಾ ಬಾಳೆಲ್ಲಾ ಬೆಳಗುವ ಬೆನಕ ॥ ಪ ॥

ನಿನ್ನ ನಂಬಿದ ಜನಕೆ ಇಹುದಯ್ಯಾ ಎಲ್ಲ ಸುಖ ।
ತಂದೆ ಕಾಯೋ ನಮ್ಮ ಕರಿಮುಖ ॥ ೧ ॥

ಎಲ್ಲರೂ ಒಂದಾಗಿ ನಿನ್ನ ।
ನಮಿಸಿ ನಲಿಯೋದು ನೋಡೋಕೆ ಚೆನ್ನ ॥
ಗರಿಕೆ ತಂದರೆ ನೀನು ಕೊಡುವೆ ವರವನ್ನ ।
ಗತಿ ನೀನೆ ಗಣಪನೆ ಕೈ ಹಿಡಿಯೋ ಮುನ್ನ ॥ ೨ ॥

ಸೂರ್ಯನೆದುರಲಿ ಮಂಜು ಕರಗುವ ರೀತಿ ।
ನಿನ್ನ ನೆನೆಯಲು ಒಡನೆ ಓಡುವುದು ಭೀತಿ ॥
ನೀಡಯ್ಯ ಕಷ್ಟಗಳ ಗೆಲ್ಲುವ ಶಕುತಿ ।
ತೋರಯ್ಯಾ ನಮ್ಮಲ್ಲಿ ನಿನ್ನಯ್ಯಾ ಪ್ರೀತಿ ॥ ೩ ॥

ಬೆನಕ ಬೆನಕ ಏಕದಂತ । ಪಚ್ಚೆಕಲ್ಲು ಪಾಣಿಮೆಟ್ಟು ॥
ಒಪ್ಪುವಾ ವಿಘ್ನೇಶ್ವರ ನಿನಗೆ ಇಪ್ಪತ್ತೊಂದು ನಮಸ್ಕಾರಗಳು ॥

# ಗಜವದನಾ ಹೇ ರಂಭಾ

ಗಜವದನಾ ಹೇ ರಂಭ ।
ವಿಜಯಧ್ವಜ ಶತರವಿ ಪ್ರತಿಭಾ ॥
ಏಕದಂತ ವೈಕಲಾಂತ । ಬುದ್ಧಿ ಸಿದ್ಧಿ ಬಯಲಾಕಾಂತ ॥ ಪ ॥

ಮೂಷಕವಾಹನ ಸರ್ಪಭೂಷ ।
ಅಡಿಗಡಿಗೆ ನಿನ್ನನು ನೆನೆದು ವಂದಿಪೆವು ಶ್ರೀ ಗಣೇಶ ॥
ಗಣೇಶ ಗಣೇಶ ಣೇಶ ಣೇಶ ಶ ಶ ಶ.. ॥ ೨ ॥

ಓ ಆದಿ ಪ್ರೇಕ್ಷಕನೆ ನಾಟಕದ ಮಾಲಿಕನೆ ।
ಸ್ವೀಕರಿ ಸೈ ನಾಟಕ ಮೋದಕ ॥
ನಾಟಕ ಮೋದಕ ನಾಟಕ ಮೋದಕ ನಟಕ ಮೊದಕ ನಟಕ
ಮೊದಕ ನಾಟಕ ॥ ೩ ॥

## ಶ್ರೀ ಗುರು ಸ್ತೋತ್ರಂ

**ಗುರುಬ್ರಹ್ಮಾ ಗುರುರ್ವಿಷ್ಣುಃ**
**ಗುರುದೇವೋ ಮಹೇಶ್ವರಃ ।**
**ಗುರುಃ ಸಾಕ್ಷಾತ್ ಪರಬ್ರಹ್ಮ**
**ತಸ್ಮೈ ಶ್ರೀ ಗುರುವೇ ನಮಃ ॥**

# ರಾಘವೇಂದ್ರ ರಾಘವೇಂದ್ರ

ರಾಘವೇಂದ್ರ ರಾಘವೇಂದ್ರ ರಾಘವೇಂದ್ರ ಎನ್ನಿರಿ ।
ನಾಮ ಸ್ಮರಣೆಯಿಂದ ನಿಜಾನಂದವನ್ನು ಹೊಂದರಿ ॥ ಪ ॥

ತಂದೆ ತಾಯಿ ಬಂಧು ಬಳಗ ಎಲ್ಲ ನೀನೆ ಎನ್ನಿರಿ ।
ನಾನು ಎಂಬ ಮೋಹ ಮರೆತು ಎಂದು ಅವನ ನಂಬಿರಿ ॥
ಹೇಗೆ ಇರಲಿ ಎಲ್ಲೆ ಇರಲಿ ಅವನ ಸ್ಮರಣೆ ಮಾಡಿರಿ ।
ಧ್ಯಾನದಿಂದ ಮನವ ಸುಡುವ ಚಿಂತೆ ದೂರ ಮಾಡಿರಿ ॥ ೧ ॥

ಮಾನಪ್ರಾಣ ಧನವು ಎಲ್ಲ ಸ್ವಾಮಿ ನಿನ್ನ ದೆನ್ನಿರಿ ।
ಗುರುವೆ ನಿನ್ನ ಕರುಣೆಯೊಂದೇ ಸಾಕು ನಮಗೆ ಎನ್ನಿರಿ ॥
ಕಲ್ಲೋ ಮುಳ್ಳೋ ಸಿಡಿಲೊ ಮಳೆಯೊ ಅವನ ಕರುಣೆ ಎನ್ನಿರಿ ।
ಏನೇ ಬರಲಿ ಅವನದೆಂದು ನಂಬಿ ಮುಂದೆ ನಡೆಯಿರಿ ॥ ೨ ॥

ನಿಮ್ಮ ಮನೆಯ ನಿಮ್ಮ ಮನದ ವಿಷಯವೆಲ್ಲ ಬಲ್ಲನು ।
ಚಪಲದಿಂದ ಅಲೆವ ಮನದಲೆಂದು ಗುರುವು ನಿಲ್ಲನು ॥
ಕೊಡುವುದೆಲ್ಲ ಕೊಡುವನು ಇನ್ನು ಆಸೆ ಏತಕೆ ।
ಕಲ್ಪವೃಕ್ಷದಂತೆ ಇರಲು ಇನ್ನು ಚಿಂತೆ ಏತಕೆ ॥ ೩ ॥

# ವಾರ ಬಂತಮ್ಮ

ವಾರ ಬಂತಮ್ಮ ಗುರುವಾರ ಬಂತಮ್ಮ ।
ರಾಯರ ನೆನೆಯಮ್ಮ ಗುರುರಾಯರ ನೆನೆಯಮ್ಮ ॥
ಸ್ಮರಣೆ ಮಾತ್ರದಲಿ ಕ್ಲೇಶ ಕಳೆದು ಸದ್ಗತಿಯ ಕೊಡುವನಮ್ಮ ॥ ಪ ॥

ಯೋಗಿ ಬರುವನಮ್ಮ ಶುಭಯೋಗ ತರುವನಮ್ಮ ।
ರಾಘವೇಂದ್ರ ಗುರುರಾಯ ಬಂಧು ಭವರೋಗ ಕಳೆವನಮ್ಮ ॥ ೧ ॥

ಮನವ ತೊಳೆಯಿರಮ್ಮ ಭಕ್ತಿಯ ಮಣಿಯ ಹಾಕಿರಮ್ಮ ।
ಧ್ಯಾನದಿಂದ ಕರೆದಾಗ ಬಂದು ಒಳಗಣ್ಣ ತೆರೆವನಮ್ಮ ॥ ೨ ॥

ಕೋಪ ಅರಿಯನಮ್ಮ ಯಾರನು ದೂರ ತಳ್ಳನಮ್ಮ ।
ಪ್ರೀತಿ ಮಾತಿಗೆ ಸೋತು ಬರುವ ಮಗುವಂತೆ ಕಾಣಿರಮ್ಮ ॥ ೩ ॥

ಹಿಂದೆ ಬರುವನಮ್ಮ ರಾಯರ ನೆರಳಿನಂತೆ ಹನುಮ ।
ಹನುಮನಿದ್ದೆಡೆ ರಾಮನಿದ್ದು ನಿಜ ಮುಕ್ತಿ ಕೊಡುವನಮ್ಮ ॥ ೪ ॥

# ಎಲ್ಲಿ ನಿನ್ನ ಭಕ್ತರೋ

ಎಲ್ಲಿ ನಿನ್ನ ಭಕ್ತರೋ ಅಲ್ಲೇ ಮಂತ್ರಾಲಯ ।
ಎಲ್ಲಿ ನಿನ್ನ ನೆನೆವರೋ ಅಲ್ಲೇ ದೇವಾಲಯ ॥ ಪ ॥

ಪೂಜೆ ನಡೆವ ಮನೆಗಳೇ ಎಂದು ಪರಮ ಪಾವನ ।
ಧ್ಯಾನಗೈವ ಮನೆಗಳೇ ನಿನ್ನ ಬೃಂದಾವನ ॥
ನಿನ್ನ ಅರಿತ ಹೃದಯವೇ ದೇವನಿರುವ ಮಂದಿರ ।
ನಿನ್ನ ಬೆರವ ಭಾಗ್ಯವೇ ನಿತ್ಯ ಸತ್ಯ ಸುಂದರ ॥ ೧ ॥

ನಿನ್ನ ಕಾಣುವಾಸೆಯೇ ಪೂರ್ವ ಜನ್ಮ ಪುಣ್ಯವು ।
ನಿನ್ನ ನಂಬಿ ನಡೆವುದೇ ಬಾಳಿನಲ್ಲಿ ಭಾಗ್ಯವು ॥
ನಿನ್ನ ನಾಮ ಸ್ಮರಣೆಯೇ ದಿವ್ಯ ವೇದ ಮಂತ್ರವು ।
ನಿನ್ನ ನಿತ್ಯ ಸೇವೆಯೇ ಮುಕ್ತಿ ಪಡೆವ ತಂತ್ರವು ॥ ೨ ॥

# ಮಂತ್ರಾಲಯಕೆ ಹೋಗೋಣ

ಮಂತ್ರಾಲಯಕೆ ಹೋಗೋಣ ।
ಗುರುರಾಯರ ದರುಶನ ಮಾಡೋಣ ॥ ಪ ॥

ತುಂಗಾ ನದಿಯಲಿ ಮೀಯೋಣ ।
ಸುರಗಂಗಾ ಸ್ನಾನವದೆನ್ನೋಣ ॥
ಮಂಗಳ ಮೂರುತಿ ರಾಘವೇಂದ್ರನ ।
ಪಾದಗಳಿಗೆ ಶರಣಾಗೋಣ ॥ ೧ ॥

ಅನಂತ ಜನುಮವ ಕೇಳೋಣ ।
ಆ ಮುಕುತಿಯ ಬೇಡ ಎನ್ನೋಣ ॥
ಜನುಮ ಜನುಮದಲು ಚರಣ ।
ಕಮಲದಿ ಭೃಂಗಗಳಾಗಿ ನಲಿಯೋಣ ॥ ೨ ॥

# ರಾಯ ಬಾರೋ ರಾಘವೇಂದ್ರ

ರಾಯ ಬಾರೋ ರಾಘವೇಂದ್ರ ಬಾರೋ ।
ಜೀಯ ನೀನಲ್ಲದೆ ಇನ್ನಾರು ಕಾಯ್ವರು ॥ ಪ ॥

ಸಹ್ಲಾದಣ್ಣನೆ ಬಾರೊ । ಪ್ರಹ್ಲಾದ ರಾಯ ಬಾರೊ ॥
ಬಾಹ್ಲಿಕ ರಾಜನಾಗಿ। ಮೆರೆದಂತ ಪ್ರಭುವೆ ಬಾರೊ ॥ ೧ ॥

ತುಂಗನಿ ವಾಸ ಮುನಿ, ಪುಂಗವನೀ ಭಕ್ತ ॥
ಜಂಗುಳಿ ಪಾಲಿಸಲು ಸಂಗೀತ ಪ್ರಿಯನೆ ಬಾರೊ ॥ ೨ ॥

ನಿ ಕರುಣಸಿಂಧು ಬಾರೊ । ಸಾಕಬೇಕಯ್ಯ ಬಂದು ॥
ಶ್ರೀಕರ ಶ್ರೀ ವಿಠ್ಠಲನ, ತೋರು ಬಾರೊ ॥ ೩ ॥

# ಹಾಲಲ್ಲಾದರು ಹಾಕು

ಹಾಲಲ್ಲಾದರೂ ಹಾಕು ನೀರಲ್ಲಾದರೂ ಹಾಕು ರಾಘವೇಂದ್ರ ।
ಹಾಲಲ್ಲಿ ಕೆನೆಯಾಗಿ ನೀರಲ್ಲಿ ಮೀನಾಗಿ ಹಾಯಾಗಿರುವೆ
ರಾಘವೇಂದ್ರ ॥ ಪ ॥

ಮುಳ್ಳಲ್ಲಾದರೂ ಹಾಕು ಕಲ್ಲಲ್ಲಾದರೂ ಹಾಕು ರಾಘವೇಂದ್ರ ।
ಮುಳ್ಳಲ್ಲಿ ಮುಳ್ಳಾಗಿ ಕಲ್ಲಲ್ಲಿ ಕಲ್ಲಾಗಿ ಒಂದಾಗಿರುವೆ ರಾಘವೇಂದ್ರ ॥
೧ ॥

ಬಿಸಿಲಲ್ಲೆ ಒಣಗಿಸು ನೆರಳಲ್ಲೆ ಮಲಗಿಸು ರಾಘವೇಂದ್ರ ।
ಬಿಸಿಲಲ್ಲಿ ಕೆಂಪಾಗಿ ನೆರಳಲ್ಲಿ ತಂಪಾಗಿ ನಗುನಗುತಾ ಇರುವೆ
ರಾಘವೇಂದ್ರ ॥ ೨ ॥

ಸುಖವನ್ನೇ ನೀಡೆಂದು ಎಂದೂ ಕೇಳೆನು ನಾನು ರಾಘವೇಂದ್ರ ।
ನಾ ನಿನ್ನ ಶರಣಾಗಿ ನೀ ನನ್ನ ಉಸಿರಾಗಿ ಬಾಳಿದರೆ ಸಾಕು
ರಾಘವೇಂದ್ರ ॥ ೩ ॥

## ಶ್ರೀ ಅಯ್ಯಪ್ಪ ಸ್ತೋತ್ರಂ

**ಯತ್ ಪಾದಪಂಕಜಯುಗಂ ಮನಯೋಸ್ಯಜಸ್ರಂ ।**
**ಭಕ್ತ್ಯಾಭಜಂತಿ ಭವರೋಗ ನಿವಾರಣಾಯ ॥**
**ಪುತ್ರಂ ಪುರಾಂತಕ ಮುರಾಂತಕಯೋರನುದಾರಂ ।**
**ನಿತ್ಯಂ ನಮಾಮ್ಯಹಮ ಮಿತ್ರ ಕುಲಾಂತಕಂ ತಮ್ ॥**
**ಸ್ವಾಮಿಯೇ ಶರಣಂ ಅಯ್ಯಪ್ಪ ॥**

# ಅಯ್ಯಪ್ಪ ಅಯ್ಯಪ್ಪ

ಅಯ್ಯಪ್ಪ ಅಯ್ಯಪ್ಪ ಸ್ವಾಮಿ ಶರಣಂ ಅಯ್ಯಪ್ಪ ॥ ಪ ॥

ಶಬರಿಯ ಗಿರಿಯು ನಿನಗಪ್ಪ । ಆ ಹಾದಿಯು ಎಂದೂ ನನಗಪ್ಪ ॥
ಗುಡಿ ಗೋಪುರವು ನಿನಗಪ್ಪ । ನಿನ್ನ ಎದುರಿದ್ದರೆ ನಾ ಸಾಕಪ್ಪ ॥ ೧ ॥

ಭಕುತರ ಸೇವೆಯು ನಿನಗಪ್ಪ । ಆ ಸೇವೆಯ ಫಲವು ನನಗಪ್ಪ ॥
ಕೀರ್ತನೆಯೆಲ್ಲ ನಿನಗಪ್ಪ । ಮನಶಾಂತಿಯು ನನಗೆ ಸಾಕಪ್ಪ ॥ ೨ ॥

ತುಪ್ಪದ ದೀಪವು ನಿನಗಪ್ಪ । ನಿನ್ನ ಕರುಣೆಯ ಬೆಳಕು ನನಗಪ್ಪ ॥
ಹಾಲಾಭಿಷೇಕ ನಿನಗಪ್ಪ । ನಿನ್ನ ದರುಶನ ನನಗೆ ಸಾಕಪ್ಪ ॥ ೩ ॥

ಹೂವುಗಳೆಲ್ಲ ನಿನ್ನಗಪ್ಪ । ನಿನ್ನ ಹೂವಿನ ಮನಸ್ಸು ನನಗಪ್ಪ ॥
ಪೂಜೆಗಳೆಲ್ಲಾ ನಿನಗಪ್ಪ । ನೀ ಒಲಿದರೆ ನನಗೆ ಸಾಕಪ್ಪ ॥ ೪ ॥

# ಬಾಲಕನಿವನು ಅಲ್ಲಪ್ಪಾ

ಬಾಲಕನಿವನು ಅಲ್ಲಪ್ಪಾ । ಹುಲಿಯೇರಿದ ವೀರ ಅಯ್ಯಪ್ಪ ॥ ಪ ॥

ಕರುಣಾ ಸಾಗರ ಇವನಪ್ಪ । ಇವನೊಲಿದರೆ ಭಯವೇ ಇಲ್ಲಪ್ಪಾ ।
ಶರಣಂ ಶರಣಂ ಅಯ್ಯಪ್ಪಾ । ಸ್ವಾಮಿ ಶರಣಂ ಅಯ್ಯಪ್ಪಾ ॥ ೧ ॥

ಭಕುತರ ಬೇಡಿಕೆ ಸಲ್ಲಿಸಲು । ಹರಿಹರರಿಬ್ಬರ ಶಕ್ತಿಗಳು ॥
ಒಂದೆಡೆ ಸೇರುತ ಶಿಶುವಾಯ್ತು । ಆ ಶಿಶುವೇ ಲೋಕದ
ಬೆಳಕಾಯ್ತು ॥ ೨ ॥

ಗಣಪನು ಇವನಿಗೆ ಅಣ್ಣಯ್ಯ । ಇವ ಪಳನಿ ಸುಬ್ಬನಿಗೆ ತಮ್ಮಯ್ಯ ॥
ಸುಲಭದಲಿ ಇವನು ಸಿಗನಯ್ಯ । ಶರಣಾದ ಮೇಲೆ ಕೈ ಬಿಡನಯ್ಯ
॥ ೩ ॥

ಪಂದಳ ರಾಜನು ಕಾಡಿನಲಿ । ಬರುತಿರೆ ಪಂಪಾ ತೀರದಲಿ ॥
ಕಂಡಾ ಕಂದನೇ ಇವನಯ್ಯ । ಈ ಭಾಗ್ಯವು ಯಾರಿಗೆ ಉಂಟಯ್ಯ
॥ ೪ ॥

ಹಾಲನು ಕುಡಿಸಿದ ಅಮ್ಮನಿಗೆ । ಹುಲಿ ಹಾಲಿನ ಬಯಕೆಯ ತೀರಿಸಿದ ॥
ಸಿರಿಯನು ಕಂಡು ತೃಣವೆಂದ । ವೈರಾಗ್ಯವ ಬರಿಸಿದ ಮುದದಿಂದ
॥ ೫ ॥

ರಾಜ್ಯವ ಬಿಟ್ಟು ದೂರಾದ । ಬಲು ಭೀಕರ ಕಾಡಲಿ ಮುನ್ನಡೆದ ॥
ಶಬರಿಯ ಗಿರಿಯಲಿ ಮನೆ ಮಾಡಿ । ಅಯ್ಯಪ್ಪನು ಅಲ್ಲೇ ಸ್ಥಿರನಾದ
॥ ೬ ॥

# ಉದಿಸುವುದೆಂದು

ಉದಿಸುವುದೆಂದು ಶ್ರೀಮಲೆ ಮೇಲೆ ತೇಜೋನಕ್ಷತ್ರ ।
ಬರುತಿದೆ ನೋಡು ಅರಸುತ ನಿನ್ನ ಭಕ್ತರ ಓ ಯಾತ್ರಾ ॥ ಪ ॥

ನಮಗಿಹುದೊಂದೇ ನಿನ್ನಾಶ್ರಯವು ಸರಿಸದಿರು ಮಾತ್ರ ॥
ಸ್ವಾಮಿಯೇ ಶರಣಂ ಅಯ್ಯಪ್ಪ ಶರಣಂ ॥ ೧ ॥

ಕಲಿಯುಗ ವರದ ಬ್ರಹ್ಮಚಾರಿ ಬರುವೆವು ನಿನ್ನೆಡೆಗೆ ।
ಕಲಿಯುಗ ಪೂರ್ತಿ ಕರಿಮಲೆ ಮೇಲೆ ಸೇರಿಸಿಕೋ ಬಳಿಗೆ ।
ಪಾದವ ಬಿಡೆವು । ಬೇರೆಡೆ ಇರೆವು । ಭಕ್ತ ಜನಪ್ರಿಯನೇ ॥ ೨ ॥

ಇರುಮುಡಿಯೊಂದೆ ತಂದೆವು ತಂದೆ ನಿಯಮಗಳ ಮಾಡಿ ।
ಕರುಣಾಮಯನೆ ನಿನ್ನನು ಕಾಣಲು ನಡೆದು ನಿನ್ನೆಡೆಗೆ ।
ಹರಿಹರನಂದನ । ಭಕ್ತರ ಚೇತನ । ಸೇರಿಸು ಶ್ರೀಮಲೆಗೆ ॥ ೩ ॥

# ದೇವರೇ ನೀನು ನಿಜವಪ್ಪ

ದೇವರೇ ನೀನು ನಿಜವಪ್ಪ । ಬಾಲಕನಾಗಿಹೇ ಅಯ್ಯಪ್ಪ ॥ ಪ ॥
ನಿನ್ನೀ ಮಾಯೆಗೆ ಕೊನೆಯಿಲ್ಲಾ । ಈ ನಿನ್ನಾ ದಯೆಗೆ ಎಣೆಯಿಲ್ಲಾ ॥ ೧ ॥

ಕಣ್ಣಿಗೆ ದೃಷ್ಟಿಯ ನೀ ತಂದೆ । ಈ ಬಾಳಿಗೆ ದೀಪ ನೀನಾದೆ ।
ಮಾತಿನ ಚೇತನಾ ನಿನ್ನಿಂದ । ಈ ಉಸಿರಲೆ ನೀನೆ ಆನಂದ ॥ ೨ ॥

ಮೂಗನ ಹಾಡಲು ಪದ ತಂದೆ । ಈ ಕುರುಡನ ಸ್ವರ್ಗವ ನೋಡೆಂದೇ ।
ಎಲ್ಲವೂ ನಿನ್ನದೇ ಈ ಲೀಲೆ । ಆ ದೇವರ ಕಂಡೇ ನಿನ್ನಲ್ಲೇ ॥ ೩ ॥
ಶರಣಂ ಶರಣಂ ಸ್ವಾಮಿ ಶರಣಂ । ಶರಣಂ ಶರಣಂ ಅಯ್ಯಪ್ಪ
ಶರಣಂ ॥

# ಸ್ವಾಮಿ ನಿನ್ನ ಪಾದವೇ

ಸ್ವಾಮಿ ನಿನ್ನ ಪಾದವೇ ಕೈಲಾಸವೂ ।
ನೀನು ನಿಂತ ತಾನವೇ ವೈಕುಂಠವು ॥
ಶಬರಿಮಲೆ ಕ್ಷೇತ್ರವೇ ಭೂಸ್ವರ್ಗವೂ ॥ ೧ ॥

ಗಂಗೆಯಲ್ಲಿ ಮಿಂದರೂ ಪಾಪ ಕಳೆಯಲಿಲ್ಲ ।
ತೀರ್ಥಯಾತ್ರೆಗೈದರೂ ಮುಕ್ತಿ ದೊರೆಯಲಿಲ್ಲ ॥
ಹೋಮಪೂಜೆಯಲ್ಲೂ ಶಾಂತಿ ಕಾಣಲಿಲ್ಲ ।
ಅಯ್ಯ ನಿನ್ನ ಸನಿಹದಲ್ಲಿ ಕಂಡೆ ನಾನು ಎಲ್ಲ ॥ ೨ ॥

ಏಳೇಳು ಜನ್ಮದಲು ನನ್ನವನು ನೀನು ।
ನಿನ್ನ ಪಾದಧೂಳು ಎಂದೆಂದೂ ನಾನು ॥
ನನ್ನ ದೇವ ನೀನು ನಿನ್ನ ದಾಸ ನಾನು ।
ಅಯ್ಯ ನಿನ್ನ ಕಂಡೆನು ನನ್ನ ನಾನೆ ಮರೆತೆನು ॥ ೩ ॥

# ಓಲು ನಿನ್ನ ಭಕ್ತರೋ

ಓಲು ನಿನ್ನ ಭಕ್ತರೋ ಅವ್ಲೆ ಶಬರಿಮಲೆ ।
ಓಲು ನಿನ್ನ ನಂಬುವೆರೊ ಅವ್ಲೆ ನಿನ್ನ ನೆಲೆ ॥ ಪ ॥

ಸ್ವಾಮಿ ಶರಣು ಪಂಡ್ಂಡಾ ನಂಬಿ ಉಡಲ್ ಪಾವನ ।
ಕಷ್ಟ ದುಃಖ ದೂರಲಾ ನಿನ್ನ ಭಕಿಡ್ತ್ಲಾ ॥
ನಿನ್ನಾ ನಂಬಿ ಭಕ್ತರೆನ್ ನಿತ್ಯ ಕಾಲ ಕಾಪುಲ ॥ ೧ ॥

ನಿನ್ನ ಕರುಣೆ ಬೊಲ್ಪುಲಾ ಪೂರ್ವ ಜನ್ಮ ಪುಣ್ಯಾಲ ।
ನಿನ್ನ ದಯೆ ತುಡರ್ಡ್ ಬಾಳು ಪೂರ ಬೊಳ್ಪುಲಾ ॥
ನಿನ್ನ ನಾಮ ಸ್ಮರಣೆನೆ ಪುಣ್ಯ ವೇದ ಮಂತ್ರಲ ।
ನಿತ್ಯ ನಿನ್ನ ಭಕ್ತಿಯೇ ಮುಕ್ತಿ ಕೊರ್ಪಿ ಸಾದಿಲ ॥ ೨ ॥

# ಗುಡಿ ಗಂಟೆ ಘಳಿರೆಂದು

ಗುಡಿ ಗಂಟೆ ಘಳಿರೆಂದು ಧ್ವನಿ ಮಾಡಿದೆ ।
ಅಯ್ಯಪ್ಪನ ನಾಮ ತಾ ಮೂಡಿದೆ ॥ ಪ ॥
ತಂಗಾಳಿ ತಂಪಾಗಿ ತಾ ಬೀಸಿದೆ ।
ಅಯ್ಯಪ್ಪನ ಹುಡುಕಿ ಮನ ಓಡಿದೆ ॥ ೧ ॥

ಈ ಧರೆಯೇ ಶಾಸ್ತಾನ ಶುಭದಾಲಯ ।
ಆ ಶಬರಿಗಿರಿ ಅವನ ಕರುಣಾಲಯ ॥
ಮಣಿಕಂಠನ ಪಾದ ನಮಗಾಶ್ರಯ ।
ಈ ಬದುಕು ಭುವಿ ಮೇಲೆ ಅವನಾದಯ ॥ ೨ ॥

ಓಂಕಾರ ನದಿಯಲ್ಲಿ ವಡಮೂಡಿದೆ ।
ಶಬರಿ ಗಿರಿಯಲ್ಲಿ ಆನಂದ ಸ್ಥಿರವಾಗಿದೆ ॥
ಈ ಹೃದಯ ಶಾಸ್ತಾನ ಗುಡಿಯಾಗಿದೆ ।
ಶ್ರೀ ಶಬರಿನಾಥನಿಗೆ ತುತ್ತಾಗಿದೆ ॥ ೩ ॥

ಶ್ರೀ ಧರೆಯ ಸುರಗಿರಿಯ ತಾ ಹತ್ತುವಾ ।
ಪರಶಿವನ ಕಂದನಿಗೆ ಶಿರಬಾಗುವ ॥
ಈ ಜಗದ ಜಂಜಟದಿ ದೂರಾಗುತಾ ।
ಶ್ರೀ ಹರಿಯ ಕಂದನಿಗೆ ಶರಣಾಗುವ ॥ ೪ ॥

# ಏನು ಅಂದ ಏನು ಚಂದ

ಏನು ಅಂದ ಏನು ಚಂದ ಸ್ವಾಮಿ ನಿನ್ನ ರೂಪವು ।
ಹಾಲು ಜೇನು ಸೇರಿದಂತೆ ಮಧುರ ನಿನ್ನ ನಾಮವು ॥ ಪ ॥

ಕೋಟಿ ಕೋಟಿ ಭಕ್ತರು ನಿನ್ನ ಗಿರಿಗೆ ಬರುವರು ।
ಕಲ್ಲು ಮುಳ್ಳು ತುಳಿದರೂ ನೋವನೆಂದು ಕಾಣರು ॥
ಕಾಡು ಮೇಡು ಅಲೆದರೂ ದನಿವನೆಲ್ಲಾ ಮರೆವರು ।
ಬಿಸಿಲು ಮಳೆಯು ಸಹಿಸುತಾ ಭಕ್ತಿಯಿಂದ ನಡೆವರು ॥
ಶರಣು ಅಯ್ಯಪ್ಪಾ ಸ್ವಾಮಿ ಶರಣು ಅಯ್ಯಪ್ಪಾ ॥ ೧ ॥

ಮೋಕ್ಷ ಪಡೆಯಲೆಂದು ಬಳಿಗೆ ದೀಕ್ಷೆ ತೊಟ್ಟು ಬರುವರು ।
ಹದಿನೆಂಟು ಮೆಟ್ಟಿಲೇರಿ ಹರಕೆ ಹೊತ್ತು ತರುವರು ॥
ಗುಡಿಯ ಒಳಗೆ ನಿಂತು ಸ್ವಾಮಿ ನಿನ್ನ ನೋಡಿ ನಲಿವರು ।
ಭಕ್ತಿಯಿಂದ ಸಹಿಸುತಾ ಮುಕ್ತಿಯನ್ನು ಪಡೆವರು ॥
ಶರಣು ಅಯ್ಯಪ್ಪಾ ಸ್ವಾಮಿ ಶರಣು ಅಯ್ಯಪ್ಪಾ ॥ ೨ ॥

# ಎಲ್ಲೆಲ್ಲೋ ನೀನೆ ಅಯ್ಯಪ್ಪಾ

ಎಲ್ಲೆಲ್ಲೋ ನೀನೆ ಅಯ್ಯಪ್ಪಾ ಸ್ವಾಮಿ ।
ಶರಣಂ ಶರಣಂ ಅಯ್ಯಪ್ಪಾ ಸ್ವಾಮಿ ॥ ಪ ॥

ತಂದೆಯು ನೀನೆ ಅಯ್ಯಪ್ಪಾ ಸ್ವಾಮಿ ।
ತಾಯಿಯು ನೀನೆ ಅಯ್ಯಪ್ಪಾ ಸ್ವಾಮಿ ॥ ೧ ॥

ಬಂಧುವು ನೀನೆ ಅಯ್ಯಪ್ಪಾ ಸ್ವಾಮಿ ।
ಬಳಗವು ನೀನೆ ಅಯ್ಯಪ್ಪಾ ಸ್ವಾಮಿ ॥ ೨ ॥

ವಿದ್ಯೆಯು ನೀನೆ ಅಯ್ಯಪ್ಪಾ ಸ್ವಾಮಿ ।
ಬುದ್ಧಿಯು ನೀನೆ ಅಯ್ಯಪ್ಪಾ ಸ್ವಾಮಿ ॥ ೩ ॥

ಅಲ್ಲಿಯು ನೀನೆ ಅಯ್ಯಪ್ಪಾ ಸ್ವಾಮಿ ।
ಇಲ್ಲಿಯು ನೀನೆ ಅಯ್ಯಪ್ಪಾ ಸ್ವಾಮಿ ॥ ೪ ॥

ನನ್ನಲ್ಲು ನೀನೆ ಅಯ್ಯಪ್ಪಾ ಸ್ವಾಮಿ ।
ಮನದಲ್ಲೂ ನೀನೆ ಅಯ್ಯಪ್ಪಾ ಸ್ವಾಮಿ ॥ ೫ ॥

# ಶಬರಿ ಮಲೆಯಾತ್ರೆ

ಶಬರಿ ಮಲೆಯಾತ್ರೆ ಮಾಡೋಣ ಬಾ ।
ಅಯ್ಯಪ್ಪಾ ಸ್ವಾಮಿಯ ನೋಡೋಣ ಬಾ ॥ ಪ ॥

ಪಂಪಾ ನದಿಯಲ್ಲಿ ಮೀಯೋಣ ಬಾ ।
ಮೈ ಮನದ ಮೈಲಿಗೆಯ ತೊಳೆಯೋಣ ಬಾ ॥
ಇರುಮುಡಿಯ ಹೊತ್ತು ಸಾಗೋಣ ಬಾ ।
ಸ್ವಾಮಿಗೆ ಸೇವೆಯ ಸಲ್ಲಿಸೋಣ ಬಾ ॥ ೧ ॥

ಹದಿನೆಂಟು ಮೆಟ್ಟಿಲು ಹತ್ತೋಣ ಬಾ ।
ಹದಿನೆಂಟು ನಮಸ್ಕಾರ ಹಾಕೋಣ ಬಾ ॥
ಮಾಡಿರುವ ಪಾಪಗಳ ಕಳೆಯೋಣ ಬಾ ।
ಪುಣ್ಯದ ಸನ್ನಿಧಿಯ ಸೇರೋಣ ಬಾ ॥ ೨ ॥

ಅಯ್ಯಪ್ಪನ ದರುಶನ ಮಾಡೋಣ ಬಾ ।
ದಿವ್ಯ ಮಕರ ಜ್ಯೋತಿಯ ಕಾಣೋಣ ಬಾ ॥
ನಮ್ಮ ಸಕಲ ಕಷ್ಟಗಳ ಕಳೆಯೋಣ ಬಾ ।
ನೆಮ್ಮದಿ ಶಾಂತಿಯ ಪಡೆಯೋಣ ಬಾ ॥ ೩ ॥

# ಸ್ವಾಮಿ ಅಯ್ಯಪ್ಪಾ

ಸ್ವಾಮಿ ಅಯ್ಯಪ್ಪಾ ಸ್ವಾಮಿ ಅಯ್ಯಪ್ಪಾ ।
ನೀನೇ ಗತಿಯಪ್ಪಾ ನಮಗೆ ನೀನೇ ಗತಿಯಪ್ಪಾ ॥ ಪ ॥

ಅಂದ ಕಾರದಲ್ಲಿ ಅಲೆದಾಡುತಲಿರುವೆ ।
ಕಂಗಳಿದ್ದು ತಂದೆ ಏನು ಕಾಣದಿರುವೆ ॥
ಏಕೆ ಇನ್ನು ದೇವಾ ಕರುಣೆ ತೋರದಿರುವೆ ।
ಬೆಳಕಿನೆಡೆಗೆ ನನ್ನಾ ಬೇಗ ನಡೆಸು ಪ್ರಭುವೆ ॥ ೧ ॥

ಸಿರಿಯೂ ಬೇಕು ಎಂದು ಕೇಳಲಾರೆನಯ್ಯಾ ।
ಸ್ವರ್ಗ ನೀಡು ಎಂದು ಬೇಡಲಾರೆನಯ್ಯಾ ॥
ಮುಕ್ತಿಗಾಗಿ ತಂದೆ ಕೈಯ ಚಾಚನಯ್ಯಾ ।
ಶಾಂತಿ ನೆಮ್ಮದಿಯನ್ನೂ ನೀಡಿ ದೇವ ರಕ್ಷಿಸಯ್ಯಾ ॥ ೨ ॥

ಕಂಗಳಲ್ಲಿ ನಿನ್ನಾ ಚರಣ ತುಂಬಿಕೊಳಲಿ ।
ಮನಸ್ಸಿನಲ್ಲಿ ನಿನ್ನಾ ಮೂರ್ತಿ ತುಂಬಿಕೊಳಲಿ ॥
ಕಿವಿಗಳಲ್ಲಿ ನಿನ್ನಾ ಕೀರ್ತಿ ತುಂಬಿಕೊಳಲಿ ॥
ಉಸಿರು ಉಸಿರುನಲ್ಲೂ ನಿನ್ನಾ ನಾಮ ತುಂಬಿಕೊಳಲಿ ॥ ೩ ॥

# ಪೂಜಿಸಲೆಂದೇ

ಪೂಜಿಸಲೆಂದೇ ಹೂಗಳ ತಂದೇ ।
ದರುಶನ ಕೋರಿ ನಾನಿಂದೆ ।
ನೀಡೋ ದರುಶನವ ಅಯ್ಯಪ್ಪ ॥ ಪ ॥

ಎರುಮಲೆಯಲ್ಲಿ ಬೇಟೆಯನಾಡಿ ।
ಎರುಮಲೆ ಶಾಸ್ತಾನ ನಾಮವ ಹಾಡಿ ॥
ವಾವರ ಸ್ವಾಮಿಯ ದರುಶನಗೈದು ।
ಬರುವೆವು ನಾವು ಇಂದು ಸ್ವಾಮಿ ॥
ನೀಡೋ ದರುಶನವ ಅಯ್ಯಪ್ಪ ॥ ೧ ॥

ಪಾವನವಾದ ಪಂಪಾ ನದಿಯಲಿ ।
ಸ್ನಾನವಗೈದು ದೀಪವ ಬೆಳಗಿಸಿ ॥
ಕರ್ಪೂರದಾರತಿ ಎತ್ತುವೆನಯ್ಯ ।
ಸ್ವೀಕರಿಸೋ ಸ್ವಾಮಿ ಅಯ್ಯಪ್ಪಾ ॥
ನೀಡೋ ದರುಶನವ ಅಯ್ಯಪ್ಪ ॥ ೨ ॥

# ನಿನ್ನ ದಾಸನಾದೆ ಸ್ವಾಮಿ

ನಿನ್ನ ದಾಸನಾದೆ ಸ್ವಾಮಿ ಅಯ್ಯಪ್ಪ ।
ಪಾಪ ಕರ್ಮವೆಲ್ಲಾ ಬಿಟ್ಟು ನಿನ್ನ ಮಣಿ ಮಾಲೆಯ ತೊಟ್ಟು ॥ ಪ ॥

ಯಾರೊ ಬಿಟ್ಟ ದುಷ್ಟ ಬಾಣ ನನ್ನ ಮಣೆಯ ಮುರಿಯುತಿತ್ತು ।
ದೈವ್ವ ಭೂತದಂತ ಕಷ್ಟ ನನ್ನ ಪ್ರಾಣ ಹಿಂಡುತಿತ್ತು ॥
ಯಾವ ಗಳಿಗೆಯಲಿ ಮಾಲೆ ತೊಟ್ಟೆನೋ ಕಷ್ಟವೆಲ್ಲಾ ದೂರಾದವು
॥ ೧ ॥

ಎಂದೂ ತುಳಿದ ವಿಷದ ಹಾವು ಹೆಡೆಯ ಬಿಚ್ಚಿ ಕಚ್ಚಲು ಬಂತು ।
ದ್ವೇಷ ತುಂಬಿ ಹಾರುವ ಹದ್ದು ನನ್ನ ತಲೆಯ ಕುಕ್ಕಲು ಬಂತು ॥
ಯಾವ ಗಳಿಗೆಯಲಿ ಮಾಲೆ ತೊಟ್ಟೆನೋ ಹಾವುಹದ್ದು ದೂರಾದವು
॥ ೨ ॥

## ಶ್ರೀ ಸರಸ್ವತಿ ಸ್ತೋತ್ರಂ

**ಹಂಸಾಸನ ಮಹಾರೂಢೇ ವೀಣಾಪುಸ್ತಕ ಧಾರಿಣೀ ।**
**ಗೀತ ವಾದ್ಯ ಪ್ರಿಯೇ ನಿತ್ಯಂ ನಮೋ ದೇವೀ ಸರಸ್ವತೀ ॥**

# ಎಂಥ ಅಂದ ಎಂಥ ಚಂದ

ಎಂಥ ಅಂದ ಎಂಥ ಚಂದ ಶಾರದಮ್ಮ ।
ನಿನ್ನ ನೋಡಲೆರಡು ಕಣ್ಣು ನನಗೆ ಸಾಲದಮ್ಮ ॥ ಪ ॥

ಇನ್ನು ಇನ್ನು ನೋಡುವಾಸೆ ಬಂದಿತಮ್ಮ ।
ಇನ್ನು ಕೋಟಿ ಜನುಮ ಬರಲಿ ನನಗೆ ಸಾಲದಮ್ಮ ॥
ಅಭಯ ಹಸ್ತ ನೋಡಿ ಜೀವ ಕುಣಿಯಿತಮ್ಮ ।
ನಿನ್ನ ಪಾದ ಕಮಲದಲ್ಲಿ ಶಿರವು ಬಾಗಿತಮ್ಮ ॥ ೧ ॥

ಎಂಥ ಶಕ್ತಿ ನಿನ್ನಲಿದೆಯೋ ಶಾರದಮ್ಮ ।
ನಿನ್ನ ನೋಡಿ ಹಾಡೋ ಆಸೆ ನನಗೆ ಬಂದಿತಮ್ಮ ॥
ರತ್ನದಂತ ಮಾತುಗಳನ್ನೇ ಆಡಿಸಮ್ಮ ।
ಒಳ್ಳೆ ರಾಗ ಭಾವ ಭಕ್ತಿ ತುಂಬಿ ಹಾಡಿಸಮ್ಮ ॥ ೨ ॥

ಅಲ್ಲಿ ಇಲ್ಲಿ ಓಡೋ ಮನಸ್ಸು ನನ್ನದಮ್ಮ ।
ಬೇಗ ಬಂದು ನೆಲೆಸ ಇಲ್ಲಿ ಶಾರದಮ್ಮ ॥
ಬೇರೆ ಏನು ಬೇಕು ಎಂದು ಕೇಳೆನಮ್ಮ ।
ನಿನ್ನ ವೀಣೆ ತಂತಿ ಮಾಡಿ ನುಡಿಸು ಶಾರದಮ್ಮ ॥ ೩ ॥

# ನಮ್ಮಮ್ಮ ಶಾರದೆ

ನಮ್ಮಮ್ಮ ಶಾರದೆ ಉಮಾಮಹೇಶ್ವರಿ ।
ನಿಮ್ಮೊಳಗಿಹನ್ಯಾರಮ್ಮಾ ॥ ಪ ॥
ಕಮ್ಮಗೋಲನ ವೈರಿ ಸುತನಾದ ಸೊಂಡಿಲ ।
ಹೆಮ್ಮೆಯ ಗಣನಾಥನೇ ಕಾಣಮ್ಮ ॥

ಮೋರೆ ಕಪ್ಪಿನ ಭಾವ ಮೊರದಗಲದ ಕಿವಿ ।
ಕೋರೆದಾಡೆವನ್ಯಾರಮ್ಮ ॥
ಮೂರು ಕಣ್ಣಿನ ಸುತ ಮುರಿದಿಟ್ಟ ಚಂದ್ರನ ।
ದೀರತಾ ಗಣನಾಥನೇ ಕಾಣಮ್ಮ ॥ ೧ ॥

ಉಟ್ಟಬಟ್ಟೆಯ ಬಿಗಿದುಟ್ಟ ಚಲ್ಲಣದ ।
ದಿಟ್ಟತಾನಿವನ್ಯಾರಮ್ಮಾ ॥
ಪಟ್ಟದ ರಾಣಿ ಪಾರ್ವತಿಯ ಕುಮಾರನು ।
ಹೊಟ್ಟೆಯ ಗಣನಾಥನೇ ಕಾಣಮ್ಮ ॥ ೨ ॥

ರಾಶಿ ವಿದ್ಯೆಯ ಬಲ್ಲ ರಮಣಿ ಹಂಬಲನೊಲ್ಲ ।
ಭಾಷಿಗನಿವನ್ಯಾರಮ್ಮಾ ॥
ಲೇಸಾಗಿ ಜನರ ಸಲಹುವ ಕಾಗಿ ನೆಲೆಯಾದಿ ।
ಕೇಶವದಾಸ ಕಾಣೆ ಅಮ್ಮಯ್ಯ ॥ ೩ ॥

# ಭಾವದೆಲೆಯಲಿ ಶಾರದೆಗಾನ

ಭಾವದೆಲೆಯಲಿ ಶಾರದೆಗಾನ ।
ರಾಗಹೊಮ್ಮಲು ಶಾರದೆನಾಮ ॥ ಪ ॥
ಹೃದಯ ಹಾಡಿತು ಶಾರದೆಗಾನ ।
ಶಾರದೆಗಾನ ಶೃಂಗೇರಿಯಧ್ಯಾನ ॥ ೧ ॥

ನನ್ನಯ ಮನವಿಂದು ಶಾರದೆಸದನ ।
ಹೃದಯ ಜ್ಯೋತಿ ಬೆಳಗಿಪೆನು ಅವಳಿಗೆ ದಿನನ ॥
ರೋಮಾಂಚನ ತಾಯಿ ಶಾರದೆಧ್ಯಾನ ।
ಶಾರದೆಗಾನ ಶೃಂಗೇರಿಯಧ್ಯಾನ ॥ ೨ ॥

ತಾಯಿ ದರುಶನದಿಂದ ಅರಳಿಸುವದನ ।
ಅಂದಕಾರ ದಾಚೆಯೂ ನೋಡಿತು ನಯನ ॥
ಸುತ್ತಮುತ್ತಲೂ ಎಲ್ಲಾ ತಾಯಿ ದರುಶನ ।
ಶಾರದೆಗಾನ ಶೃಂಗೇರಿಯಧ್ಯಾನ ॥ ೩ ॥

ಕರುಣಾಮ ಮ್ಯೆ ಸಿರಿದೇವಿ ತಾಯಿ ಶಾರದೆ ।
ಕರಮುಗಿವೆ ತಾಯಿ ನಿನಗೆ ಶರಣನಾಗಿಹೆ ॥
ನಿನ್ನ ಚರಣ ಸೇವೆ ಭಾಗ್ಯ ಸತತ ಬೇಡುವೆ ।
ಶಾರದೆಗಾನ ಶೃಂಗೇರಿಯಧ್ಯಾನ ॥ ೪ ॥

# ಅಮ್ಮ ನಿನ್ನ ನಾಮ

ಅಮ್ಮ ನಿನ್ನ ನಾಮದಿಂದ ಜನುಮ ಪಾವನ
ಅಮ್ಮ ನಿನ್ನ ಧ್ಯಾನವೊಂದೆ ಮುಕುತಿ ಸಾಧನ ॥ ಪ ॥
ಶಾರದಾಂಬೇ ಜಯ ಜಗದಂಬೇ ।
ಶಾರದಾಂಬೇ ಜಗದಂಬೇ ನಿನ್ನನೇ ನಂಬಿದೇ ।
ನೀರಜಾಕ್ಷಿ ಕರುಣದಿ ಹರಸು ಎನುತ ಬೇಡುವೆ ॥ ೧ ॥

ದೂರ ದೂರ ದೂರ ಇರುವ ಬಾಳ ತೀರಕೇ ।
ಸಾರ ಸಭೆಯು ಸೇರಿರುವಂತ ಪ್ರೇಮದೂರಿಗೇ ॥
ದೇವಿ ನಿನ್ನ ನಗುವಿನ ಹೊನಲು ನವ್ಯ ಲೋಕಕೆ ।
ದಾರಿ ತೋರು ಭಕುತಗೆ ಸತತ ಹೃದಯನಾಥಗೆ ॥ ೨ ॥

ಮನೆ ಮಡದಿ ಮಕ್ಕಳು ಎನ್ನುವ ಭಾವ ಉಳಿಯಲಿ ।
ಕನಸ ಸ್ವರ್ಗ ನಾಶವಾಗಿ ಉರಿದು ಹೋಗಲೀ ॥
ಮನವು ಕರ್ಮ ಫಲವನು ಬಯಸದೆ ನಿನ್ನ ಹಾಡಲೀ ।
ದಿನವು ದಾನ ಧರ್ಮಗೈವ ಮನವು ನನ್ನದಾಗಲೀ ॥ ೩ ॥

# ನಮೋ ಶಾರದಾಂಬೆ

ನಮೋ ಶಾರದಾಂಬೆ ನಮೋ ಲೋಕಮಾತೆ ।
ನಮೋ ವೀಣಾಪಾಣಿ ಶಾರದೇ ॥ ದೇವೀ ॥ ಪ ॥
ದಿನ ದಿನವು ನೆನೆಯುವೆ ನಿನ್ನ ।
ದಿನ ದಿನವು ಹಾಡುವೆ ನಿನ್ನ ॥
ನಿನ್ನನ್ನೇ ನಂಬಿದ ಜನರ ಬಿಡದೆ ಕಾಪಾಡಮ್ಮ ॥ ೧ ॥

ವಿದ್ಯಾ ಪ್ರದಾಯಕಿ ನೀನು ಬುದ್ಧಿ ಪ್ರದಾಯಕಿ ನೀನು ।
ವಿದ್ಯಾದಿ ದೇವತೆ ನೀನು ತ್ರಿಲೋಕ ಸುಂದರಿ ನೀನು ।
ಸಕಲ ವೇದ ಶಾಸ್ತ್ರಳು ನೀನು ।
ಸಂಗೀತ ನಾಯಕಿ ನೀನು ।
ವಿದ್ಯಾ ಬುದ್ಧಿಯ ಹರಸು ಶೃಂಗೇರಿ ಶಾರದಾಂಬೆ ॥ ೨ ॥

# ಇವಳೇ ವೀಣಾ ಪಾಣೀ

ಇವಳೇ ವೀಣಾ ಪಾಣೀ ವಾಣೀ ।
ತುಂಗಾ ತೀರಾ ವಿಹಾರಿಣಿ ಶೃಂಗೇರಿ ಪುರವಾಸಿನಿ ॥ ಪ ॥

ಶಾರದಾ ಮಾತೇ ಮಂಗಳದಾತೇ । ಸುರ ಸಂಸೇವಿತೆ ಪರಮ ಪುನೀತೆ ॥
ವಾರಿಜಾಸನ ಹೃದಯ ವಿರಾಜಿತೇ । ನಾರದ ಜನನಿ ಸುಜನ ಸಂಪ್ರಿತೇ ॥ ೧ ॥

ಆದಿಶಂಕರ ಅರ್ಚಿತೆ ಮಧುರೇ । ನಾದಪ್ರಿಯೇ ನವಮಣಿ ಮಯ ಹಾರೇ ॥
ವೇದ ಅಖಿಲಶಾಸ್ತ್ರಾ ಆಗಮ ಸಾರೆ । ವಿದ್ಯಾದಾಯಿನಿ ಯೋಗ ವಿಚಾರೆ ॥ ೨ ॥

# ವರವ ಕೊಡು ಎನಗೆ

ವರವ ಕೊಡು ಎನಗೆ ವಾಗ್ದೇವಿ ನಿಮ್ಮ ।
ಚರಣ ಕಮಲಂಗಳನು ದಯಮಾಡು ದೇವಿ ॥ ಪ ॥

ಶಶಿ ಮುಖದ ನಸುನಗೆಯ ಬಾಲೆ ।
ಎಸೆವ ಕರ್ಣದ ಮುತ್ತಿನೋಲೆ ॥
ನಸುನಗುವ ಸುಲಿಪಲ್ಲ ಗುಣಶೀಲೇ ದೇವಿ ।
ಬಿಸಜಾಕ್ಷಿ ಎನ್ನ ಹೃದಯದೊಳು ನಿಂದವಳೆ ॥ ೧ ॥

ಇಂಪು ಸೊಂಪಿನ ಚಂದ್ರ ಬಿಂಬೆ ।
ಕೆಂಪು ತುಟಿ ನಾಸಿಕದ ರಂಭೆ ॥
ಜೋಂಪು ಮದನನ ಪೂರ್ಣ ಶಕ್ತಿ ಬೊಂಬೆ ।
ಸಂಪಿಗೆಯ ಮುಡಿದಿಟ್ಟ ಹೇ ಶಾರದಾಂಬೆ ॥ ೨ ॥

ರವಿಕೋಟಿ ತೇಜ ಪ್ರಕಾಶೇ ।
ರವಿಜನರ ಹೃತ್ಕಮಲ ವಾಸೇ ॥
ಅವಿರಳಾಪುರಿ ಸಿರಿ ಕಾಗಿನೆಲೆಯಾದಿ ।
ಕೇಶವನ ಸುತಗೆ ಸನ್ನುತ ರಾಣಿವಾಸೆ ॥ ೩ ॥

# ಶ್ರೀ... ಶಾರದಾಂಬೆ ಪೂಜಿಪೆ

ಶ್ರೀ..... ಶಾರದಾಂಬೆ ಪೂಜಿಪೆ ನಿನ್ನಾ ॥
ಪೂಜಿಪೆ ನಿನ್ನಾ ಹೂಗಳಿಂದಲೀ ॥ ಪ ॥

ಅರಶಿನ ಕುಂಕುಮದಿಂದ.. ಪರಿಮಳ ಗಂಧದಿ ನಿನ್ನಾ ।
।ಶಾರದೆಯೇ, ಭಾರತಿಯೇ, ಆರಾಧಿಪೆ ನಾ ಹರುಷದಿಂದ ॥ ೧ ॥

ಮಲ್ಲೇ, ಮಲ್ಲಿಗೆ ಕುಸುಮದಿಂದ, ಕಲ್ಯಾಣಿ ಪೂಜಿಪೆ ನಿನ್ನಾ ।
ಸುರಸೇರಿತ, ಜಲಜಾತನ ವಲ್ಲಭೆಯೇ ಪಾಲಿಸೆನ್ನಾ ॥ ೨ ॥

ಅಂಬುಜ ಜಾಥನ ರಾಣಿ, ಸುಬುದ್ಧಿಯ ನೀಡಮ್ಮ ವಾಣಿ ।
ಗಂಭೀರೆಯೇ ನಿನ್ನಾ ನಂಬಿರುವೆ, ಜಗದಂಬ ನಿನ್ನಾ ನಂಬಿರುವೆ
॥ ೩ ॥

## ಶ್ರೀ ಮಹಾಲಕ್ಷ್ಮೀ ಸ್ತೋತ್ರಂ

**ಲಕ್ಷ್ಮೀಂ ಕ್ಷೀರ ಸಮುದ್ರರಾಜ ತನಯಾಂ ಶ್ರೀರಂಗಧಾಮೇಶ್ವರೀಂ ।**
**ದಾಸೀ ಭೂತ ಸಮಸ್ತ ದೇವವನಿತಾಂ ಲೋಕೈಕ ದೀಪಾಂಕುರಾಮ್ ॥**
**ಶ್ರೀಮನ್ಮಂದ ಕಟಾಕ್ಷ ಲಬ್ಧ ವಿಭವ ಬ್ರಹ್ಮೇಂದ್ರ ಗಂಗಾಧರಾಂ ।**
**ತ್ವಾಂ ತ್ರೈಲೋಕ್ಯ ಕುಟುಂಬಿನೀಂ ಸರಸಜಾಂ**
**ವಂದೇ ಮುಕುಂದಪ್ರಿಯಾಮ್ ॥**

# ಕಣ್ಣುಗಳೆರಡು ಸಾಲದಮ್ಮ

ಕಣ್ಣುಗಳೆರಡು ಸಾಲದಮ್ಮ ಲಕ್ಷ್ಮೀ ನಿನ್ನ ನೋಡಲು ।
ನಾಲಗೆ ಹೊರಳಿ ನುಡಿಯದಮ್ಮ ನಿನ್ನ ಗಾನ ಪಾಡಲು ॥ ಪ ॥
ಯಾವ ಭಾವದಿ ಯಾವ ರಾಗದಿ । ಹಾಡಿ ಪಾಡಲಿ ನಿನ್ನಯ ತಾಯೇ ॥

ಶರಣಾಗತ ವರದೇ ವರದೇವಿ ಕರುಣ ಸದಯೇ ।
ಸುರವರ ಪೂಜಿತೇ ಕರವೀರ ಪುರನಿಲಯೇ ।
ದುರಿತ ನಿವಾರಿಣಿ ಮಂಗಲದಾಯಿನಿ ನಾರಾಯಣಿ ॥ ೧ ॥

ಪನ್ನಗ ಫಣಿವೇಣಿ ಪದ್ಮಾಸಿನಿ ಹರಿರಾಣಿ ।
ಪದ್ಮಗದಾ ಪಾಣಿ ಪರಮಗುಣಾ ಸುಗುಣಿ ।
ಇಂದಿರ ನಯನೆ ಚಂದಿರ ವದನೆ
ಅನುಪಮ ಸುಂದರಿ ನಾರಾಯಣಿ ॥ ೨ ॥

ಧನಕನಕವ ಕೊಡುವ ಧನಲಕ್ಷ್ಮೀಯು ನೀನಾಗಿ ।
ಧರೆಯಲಿ ನೆಲೆಸಿರುವೆ ದೀನರ ರಕ್ಷಿಸಲು ॥
ಸಂಕಟ ಹರಿಸುವ ವೆಂಕಟರಮಣಿ ।
ಆರ್ತಪರಾಯಣಿ ನಾರಾಯಣಿ ॥ ೩ ॥

# ಭಾಗ್ಯದಾ ಲಕ್ಷ್ಮೀ ಬಾರಮ್ಮ

ಭಾಗ್ಯದಾ ಲಕ್ಷ್ಮೀ ಬಾರಮ್ಮ ।
ನಮ್ಮಮ್ಮಾ ನೀ ಸೌ ಭಾಗ್ಯದಾ ಲಕ್ಷ್ಮೀ ಬಾರಮ್ಮ ॥ ಪ ॥

ಗೆಜ್ಜೆ ಕಾಲ್ಗಳ ನಾದವ ಮಾಡುತ ।
ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ ॥
ಸಜ್ಜನ ಸಾಧು ಪೂಜೆಯ ವೇಳೆಗೆ ।
ಮಜ್ಜಿಗೆಯೊಳಗಿನ ಬೆಣ್ಣೆಯಂತೆ ॥ ೧ ॥

ಕನಕವೃಷ್ಟಿಯ ಕರೆಯುತ ಬಾರೆ ।
ಮನಕಾ ಮನೆಯ ಸಿದ್ಧಿಯ ತೋರೆ ॥
ದಿನಕರ ಕೋಟಿ ತೇಜದಿ ಹೊಳೆಯುವ ।
ಜನಕರಾಯನ ಕುಮಾರಿ ಬಾರೆ ॥ ೨ ॥

ಅತ್ತಿತ್ತಗಲದೆ ಭಕ್ತರ ಮನೆಯಲಿ ।
ನಿತ್ಯ ಮಹೋತ್ಸವ ನಿತ್ಯ ಸುಮಂಗಲ ॥
ಸತ್ಯವ ತೋರುವ ಸಾಧು ಸಜ್ಜನರ ।
ಚಿತ್ತದಿ ಹೊಳೆಯುವ ಪುತ್ಥಳಿ ಬೊಂಬೆ ॥ ೩ ॥

ಸಂಖ್ಯೆಯಿಲ್ಲದ ಭಾಗ್ಯವ ಕೊಟ್ಟು ।
ಕಂಕಣ ಕೈಯ ತಿರುಗುತ ಬಾರೆ ॥
ಕುಂಕುಮಾಂಕಿತೆ ಪಂಕಜಲೋಚನೆ
ವೆಂಕಟರಮಣನ ಬಿಂಕದ ರಾಣಿ ॥ ೪ ॥

ಸಕ್ಕರೆ ತುಪ್ಪ ಕಾಲುವೆ ಹರಸಿ ।
ಶುಕ್ರವಾರದ ಪೂಜೆಯ ವೇಳೆಗೆ ॥
ಅಕ್ಕರೆಯಿಂದಲೇ ಅಳಗಿರಿ ರಂಗನ ।
ಚೊಕ್ಕ ಪುರಂದರ ವಿಠಲನ ರಾಣಿ ॥ ೫ ॥

# ಏನು ಧನ್ಯಳೋ

ಏನು ಧನ್ಯಳೋ ಲಕುಮಿ ಎಂಥಾ ಮಾನ್ಯಳೋ ।
ಸಾನುರಾಗದಿಂದ ಹರಿಯ ತಾನೆ ಸೇವೆ ಮಾಡುತಿಹಳು ॥ ಪ ॥

ಕೋಟಿ ಕೋಟಿ ಭತ್ಯರಿರಲು ಹಾಟಕಾಂಬರನ ಸೇವೆ ।
ಸಾಟಿಯಿಲ್ಲದೆ ಪೂರ್ಣ ಮಾಡಿ ಶ್ರೇಷ್ಠವಾಗಿ ಮೆರೆಯುತಿಹಳು ॥ ೧ ॥

ಛತ್ರಚಾಮರ ವ್ಯಜನ ಪರ್ಯಂಕ ಪಾತ್ರರೂಪದಲ್ಲಿ ನಿಂತು ।
ಚಿತ್ತಚರಿತನಾದ ಹರಿಯ ನಿತ್ಯಸೇವೆ ಮಾಡುತಿಹಳು ॥ ೨ ॥

ಸರ್ವಸ್ಥಳದಿ ವ್ಯಾಪ್ತನಾದ ಸರ್ವದೋಶರಹಿತನಾದ ।
ಸರ್ವ ವಂದ್ಯ ಪುರಂದರವಿಠಲನ ನಿತ್ಯಸೇವೆ ಮಾಡುತಿಹಳು ॥ ೩ ॥

# ಶ್ರೀ ದೇವಿ ಸ್ತೋತ್ರಂ

ಸರ್ವಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಿಕೇ ।
ಶರಣ್ಯೇ ತ್ರ್ಯಂಬಕೇ ದೇವೀ ನಾರಾಯಣೀ ನಮೋಸ್ತುತೇ ॥
ಸೃಷ್ಟಿಸ್ಥಿತಿ ವಿನಾಶಾನಾಂ ಶಕ್ತಿಭೂತೇ ಸನಾತನಿ ।
ಗುಣಶ್ರಯೇ ಗುಣಮಯೇ ನಾರಾಯನಿ ನಮೋಸ್ತುತೇ ॥
ಶರಣಾಗತ ದೀನಾರ್ತ ಪರಿತ್ರಣ ಪರಾಯಣೀ ।
ಸರ್ವಸ್ಯಾರ್ತಿ ಹರೇ ದೇವಿ ನಾರಾಯಣೀ ನಮೋಸ್ತುತೇ ॥

# ಪಾಹಿಶಿವೆ ಪಾಹಿಶಿವೆ

ಪಾಹಿಶಿವೆ ಪಾಹಿಶಿವೆ ಪರಮಕಲ್ಯಾಣಿ ।
ಪಾಲಿಸೆಮ್ಮ ಪಾಪನೀಗೆ ಮಹಿಷಮರ್ದಿನಿ ॥ ಪ ॥

ನಿನ್ನ ಕರುಣೆ ಭಿಕ್ಷೆ ಇದು ಶಿವನ ಬೇಡಿಕೆ ।
ಅನುಪಮಾನ ನರರ ನೀನು ಕಾಯೆ ಅಂಬಿಕೆ ।
ಮಾತೆ ಚರಣಕಮಲದಲ್ಲಿ ಇರಿಸಿ ನಂಬಿಕೆ ।
ಮನುಜ ಕುಲವ ಕಾಯೋ ಒಡನೆ ನೀಡು ಕೋರಿಕೆ ॥ ೧ ॥

ರೌದ್ರ ರೂಪ ತಾಳಿದಂಥ ಸಿಂಹವಾಹಿನಿ ।
ಚಂಡ ಮುಂಡ ರಕ್ತ ಬೀಜ ದನುಜ ಧ್ವಂಸಿನಿ ।
ಮುರಹಧಾರೆ ಇಳೆಯದಾತೆ ಮಾರ್ಗದರ್ಶಿನಿ ।
ಶರಣು ಬಂದ ಜನಕೆ ನೀನು ಭಾಗ್ಯದಾಯಿನಿ ॥ ೨ ॥

# ನೋಡು ನೋಡು ಕಣ್ಣಾರೆ

ನೋಡು ನೋಡು ಕಣ್ಣಾರೆ ನಿಂತಿಹಳು ।
ನಗುನಗುತಾ ಚಾಮುಂಡಿ ನಿಂತಿಹಳು ॥ ಪ ॥

ತಾಯಿ ಹೃದಯ ತಂದಾ ತುಂಬು ಮಮತೆಯಿಂದ ॥
ಬಾ ಇಲ್ಲಿ ಓ ಕಂದ ಎನುತಿಹಳು ।
ಕೈ ಬೀಸಿ ಬಳಿಗೆ ನಮ್ಮ ಕರೆದಿಹಳು ॥ ೧ ॥

ಮೈಸೂರು ನಗರದ ಬೆಟ್ಟದ ಮೇಲೆ ।
ಮಹಿಷಾಸುರ ಮರ್ಧಿನಿಯ ವೈಭವ ಲೀಲೇ ॥
ಧನುಜ ಸಂಹಾರಿಣಿ ತ್ರಿಭುವನ ಪೋಷಿನಿ ।
ಶಂಕರನ ರಾಣಿಗೀವ ಹೂಗಳ ಮಾಲೆ ॥ ೨ ॥

ನಂಬಿರುವ ಭಕ್ತರ ರಕ್ಷೆಗಾಗಿ ।
ನಂಬದಿಹ ದುಷ್ಟರ ಶಿಕ್ಷೆಗಾಗಿ ॥
ನಿಂತಿಹಳು ನೋಡಲ್ಲಿ ಶೂಲಪಾಣಿಯಾಗಿ ।
ಕರುನಾಡ ಮಕ್ಕಳ ಸಿರಿದೈವವಾಗಿ ॥ ೩ ॥

ಉಕ್ಕಿ ಬಂದ ನದಿಯಲ್ಲಿ ಅವಳ ನಗೆ ।
ಬೀಸಿ ಬಂದ ಗಾಳಿಯಲ್ಲಿ ಅವಳುಸಿರು ॥
ಹಸಿಹಸಿರು ಪೈರುಗಳೇ ಅವಳುಡುಗೆ ।
ಆ ತಾಯಿ ರೂಪವು ಹಲವು ಬಗೆ ॥ ೪ ॥

# ದುಂಬಿಯಂತೆ ಹಾರಿ

ದುಂಬಿಯಂತೆ ಹಾರಿ । ದುರ್ಗಾ ಬಂದಳು ನೋಡಿ ॥
ನಂದಿನಿಯ ಕಟಿಯಲ್ಲಿ ಆನಂದ ಕಟೀಲಿನಲಿ ॥ ಪ ॥

ದುರ್ಗಮ ದಾನವ ದಮನಕ್ಕೆ । ದುರ್ಗೆ ಬಂದಳು ಅವತರಿಸಿ ॥
ಕಲಕಲ ನಾದದಿ ಝುಳಝುಳ ಹರಿಯುವ । ಜಲದಲಿ ನೆಲೆಸಿಹ
ಭ್ರಮರಾಂಬೆ ॥
ದುರ್ಗಮ ದಾನವ ದಮನಕ್ಕೆ । ದುರ್ಗೆ ಬಂದಳು ಅವತರಿಸಿ ॥
ದುಷ್ಟರ ತರಿಯಳು ಭಕ್ತರ ಕಾಯಲು ॥ ದುರ್ಗದಂತೆ ತಾನೆದ್ದವಳು
॥ ೧ ॥

ಸ್ವರ್ಗವ ಗೆಲಿದ ರಕ್ಕಸನ । ಸೊಕ್ಕನು ಮುರಿದಳು ತಾ ಬಂದು ॥
ದಳದಳ ಬಿರಿಯುವ, ಪರಿಮಳ ಸುರಿಯುವ । ಅರಳಲಿ ಕುಳಿತಿಹ
ಭ್ರಮರಾಂಬೆ ॥
ಸ್ವರ್ಗವ ಗೆಲಿದ ರಕ್ಕಸನ । ಸೊಕ್ಕನು ಮುರಿದಳು ತಾ ಬಂದು ॥
ಷಟ್ಪದಿ ರೂಪದಿ ಕಚ್ಚುತ ಕೊಂದಳು । ದುಷ್ಟ ಅರುಣನ
ಭ್ರಮರಾಂಬೆ ॥ ೨ ॥

# ಬಂದಿತಮ್ಮ ಶುಕ್ರವಾರ

ಬಂದಿತಮ್ಮ ಬಂದಿತಮ್ಮಾ ಶುಕ್ರವಾರ
ಚಾಮುಂಡಿ ಮಾತೆಯ ಶುಭವಾರ ॥ ಪ ॥
ಸುಮಂಗಲಿಯರೆಲ್ಲರೂ ಭಕ್ತಿಯಿಂದಲೀ
ಚಾಮುಂಡಿಯ ಪೂಜಿಸೋ ಪುಣ್ಯದ ವಾರ ॥ ೧ ॥

ಹರಿದ್ರಾ ಕುಂಕುಮ ಹಣೆಯಲೆಂದು ನಗುವಂತೆ ।
ಹರನ ಅರ್ಧಾಂಗಿ ನೀ ಕರುಣಿಸಮ್ಮಾ ॥
ಹೂಗಳನ್ನು ಮುಡಿಯಲೆಂದು ಇರುವಂತೆ ।
ಹರಿಯ ಸೋದರಿಯೇ ವರ ನೀಡಮ್ಮ ॥ ೨ ॥

ನನ್ನ ಕಣ್ಣು ಎಂದೂ ನಿನ್ನ ನೋಡಿರಬೇಕು ।
ನನ್ನ ನಾಲಿಗೆ ನಿನ್ನ ನುಡಿಸಿರಬೇಕು ॥
ನನ್ನ ಕಿವಿ ತವಕೀರ್ತಿ ಕೇಳೀರಬೇಕು ।
ನನ್ನ ಕರ ನಿನ್ನ ಪೂಜೆ ಮಾಡಿರಬೇಕು ॥ ೩ ॥

ಮಲ್ಲೆ ಹೂವ ಅರ್ಪಿಸುವೆನು ಮಾತಂಗಿಗೆ ।
ಚಂಪಕವ ನೀಡುವೆ ನಾ ಚಾಮುಂಡಿಗೆ ॥
ಕನಕಾಂಬರ ಪೂಜಿಸುವೆ ಕಾತ್ಯಾಯನಿಗೆ ।
ಬಿಲ್ವ ಪತ್ರೆ ಅರ್ಚಿಸುವೆ ಭುವನೇಶ್ವರಿಗೇ ॥ ೪ ॥

# ಕೊಲ್ಲೂರ ಸಿರಿದೇವಿ

ಕೊಲ್ಲೂರ ಸಿರಿದೇವಿ ಮೂಕಾಂಬಿಕೆ ।
ಕರುಣೆಯಲಿ ನೋಡಮ್ಮ ಜಗದಂಬಿಕೆ ॥ ಪ ॥
ಕಂದನನು ರಕ್ಷಿಸಲು ಕಾವಲಿಗೆ ನೀನಿರಲು ।
ನೋವು ಭಯ ಅಂಜಿಕೆಯು ನಮಗೇತಕೆ ।
ತಾಯಿ ನಮಗೇತಕೆ ॥ ೧ ॥

ಮೂಕಾಸುರ ಸಂಹಾರಕೆ ಮೈ ತಾಳಿ ಬಂದೆ ।
ಕೊಲ್ಲೂರ ಮಣ್ಣಿನಲಿ ಕೃಪೆ ಮಾಡಿ ನಿಂದೆ ॥
ಆರ್ತರಿಗೆ ಆನಂದ ವಾಹಿನಿಯ ತಂದೆ ।
ನಿನ್ನನ್ನು ಕಾಣದವ ಇದ್ದರೂ ಒಂದೇ । ಇರದಿದ್ದಿರೂ ಒಂದೇ ॥ ೨ ॥

ಕಣ್ಣೆರಡು ನಿನ್ನಂದ ನೋಡಿ ತಣಿಯಬೇಕು ।
ಕೀರುತಿಯ ನಾಲಿಗೆಯು ನುಡಿದಿರಬೇಕು ॥
ಕಿವಿಯೆರಡು ನಾಮಾಮೃತ ಕೇಳಿರಬೇಕು ।
ಕೈಯೆರಡು ಭಕ್ತಿಯಲಿ ಮುಗಿದಿರಬೇಕು ।
ಎಂದು ಮುಗಿದಿರಬೇಕು ॥ ೩ ॥

ಮನವೆಲ್ಲಾ ನಿನ್ನ ನೆನಪು ತುಂಬಿರಬೇಕು ।
ಮನಕವಿದ ಮೌಢ್ಯವನು ನೀಗಿರಬೇಕು ॥
ಮೂಕಾಂಬಿಕೆ ಇನ್ನು ಮೌನವೇಕೆ ।
ಮೊರೆಕೇಳಮ್ಮ ಬಂದು ದಯೆತೋರಮ್ಮ ॥ ೪ ॥

# ತಾಂಬೂಲ ಕಾಣಿಕೆ

ತಾಂಬೂಲ ಕಾಣಿಕೆ ತಂದಿಹೆ ಮಂಜಾಂಬಿಕೆ ತಾಯೇ ।
ಅರಿಶಿನ ಕುಂಕುಮ ಹೂವ ತಂದಿಹೆ ದೇವಿ ಮಹಮಾಯೆ ॥ ಪ ॥

ಶಬರಿಗಿರಿಯ ಮೇಲೆ ನೆಲೆಸಿಹ ಭುವನೇಶ್ವರಿ ತಾಯೇ ।
ಮನದಲಿ ಅಯ್ಯನ ಸ್ಮರಣೆ ಮಾಡುತ ಕುಳಿತ ಸುಂದರಿಯೇ ॥ ೧ ॥

ಚಾಮುಂಡಿ ಎಂದರು ನಿನ್ನ ಮಹಿಷಾಪುರದಲ್ಲಿ ।
ಮೂಕಾಂಬಿಕೆ ಎಂದು ಕರೆದರು ಕೊಲ್ಹಾಪುರದಲ್ಲಿ ॥
ಕಾಯುವೆ ವಿವಿಧ ರೂಪವ ತಳೆದು ಭಕ್ತರ ಕುಲವನ್ನು ।
ಶ್ರೀಪಾದ ಪಂಕಜ ಜ್ಞಾನವ ಮಾಡಲು ತರುವೆ ಜಯವನ್ನು ॥ ೨ ॥

ತಾಯೇ ನಿನ್ನ ರೂಪವ ಕಂಡೆ ನಂದಿನಿ ಕಟಿಯಲ್ಲಿ ।
ಮಾಯೇ ನಿನ್ನ ಕಾಂತಿಯ ಕಂಡೆ ಮಲ್ಲದ ನೆಲದಲ್ಲಿ ॥
ಎಲ್ಲರ ಧರ್ಮವು ಸಮಾನ ಎಂದು ಸಾರುವ ಯೋಗಿನಿಯೇ ।
ನ್ಯಾಯ ನೀತಿ ರಕ್ಷಿಸುವಂತಹ ಸತ್ಯ ಸ್ವರೂಪಿಣಿಯೇ ॥ ೩ ॥

# ಇಂದು ಶುಕ್ರವಾರ

ಇಂದು ಶುಕ್ರವಾರ ಶುಭವ ತರುವ ವಾರ ।
ಸುಮಂಗಲಿಯರೆಲ್ಲಾ ನಿನ್ನ ಪೂಜಿಸುವ ಪುಣ್ಯವಾರ ॥ ಪ ॥

ಮುಂಜಾನೆಯ ಮಡಿಯುಟ್ಟು ।
ಕುಂಕುಮವ ಹಣೆಗಿಟ್ಟು ॥
ರಂಗೋಲಿಯ ಬಾಗಿಲಗಿಟ್ಟು ।
ಹಣ್ಣುಕಾಯಿ ನೀಡುವ ವಾರ ॥ ೧ ॥

ಮಲ್ಲಿಗೆ ಜಾಜಿ ಹೂಮಾಲೆ ಹಾಕಿ ।
ಚಂದನ ಹಚ್ಚಿ ಸಿಂಗಾರ ಮಾಡಿ ॥
ಕರ್ಪೂರದಾರತಿ ನಿನಗೆ ಬೆಳಗಿ ।
ಭಕ್ತಿಯಿಂದಲೆ ಭಜಿಸುವ ವಾರ ॥ ೨ ॥

ಸುವಾಸಿನಿಯರಿಗೆ ಕುಂಕುಮ ಹಚ್ಚಿ ।
ಸಂಭ್ರಮದಿಂದ ಬಾಗಿನ ನೀಡಿ ॥
ಸರ್ವಮಂಗಲೆಯ ಗೀತೆಯ ಹಾಡಿ ।
ಸಕಲ ಭಾಗ್ಯವ ಬೇಡುವ ವಾರ ॥ ೩ ॥

# ಭಾಗ್ಯವ ಕೊಡೆ ಗಾರುತಿ

ಭಾಗ್ಯವ ಕೊಡೆ ಗಾರುತಿ । ಭಾಗೀರಥಿ ಭಾಗ್ಯವ ಕೊಡೆ ಗಾರುತಿ ॥ ಪ ॥
ಹರಿಪಾದ ನಖದಿಂದ ಹರಿದು ಬಂದಳೆ ಗಂಗಾ ।
ಪರಮಭಕ್ತರ ಸಂಗ ವರವನ್ನೇ ಕೊಡು ತುಂಗಾ ॥ ೧ ॥

ಕಾಶಿ ಪಟ್ಟಣದಲ್ಲಿ ವಾಸವಾಗಿರುತಿ ।
ಈಶಾಧ್ಯರಿಗೆ ಮಹಾ ವರವನ್ನೇ ಕೊಡುತ್ತಿ ॥
ಕಮಲೇಶ ವಿಠಲನ ಮಮತೆಯ ಮಗಳೆಂದು ।
ಉತ್ತಮ ಗರುತೆಂದು ಭ್ರಮಿಸಿ ಬಂದೆನು ತಾಯಿ ॥ ೨ ॥

# ದೇವಿ ಎಂಕ್ಲೆ ಮೇಲುಡೆ

ದೇವಿ ಎಂಕ್ಲೆ ಮೇಲುಡೇ ದಾಯೇ ದಯೆ ತೋಜುಜಿ ।
ಎಂಕ್ಲೆ ಕಷ್ಟ ಮಾತಲಾ ಇರೆಗು ಅರ್ಥ ಆಪುಜಿ ॥ ಪ ॥

ಇರೆನ ಪುಣ್ಯ ಪಾದನೆ ಎಂಕ್ಲೆ ಬದುಕುಗಾಸರೆ ।
ಇರೆನ ನಿತ್ಯ ಸೇವೆನೆ ಆನಂದದ ಭಾವನೆ ॥
ಇರೆನ ನೆನಪು ಮನ್ಪುವಾ ಎಂಕುಲೆನೆ ಮರಪಡೆ ॥ ೧ ॥

ಏತ್ ವರ್ಷ ಆಂಡಮ್ಮ ಇರೆನೆ ಪಾದ ನಂಬುದು ।
ಪೂಜೆ ಜ್ಞಾನ ಭಜನೆನ್ ಎಂಕ್ಲು ಮಂತೊಂದಿಪ್ಪುನಿ ॥
ಎಂಚಿ ಎಂಚಿ ಕಾರ್ಣಿಕ ತೋಜಾಯಿನ ದೇವಿಯೇ ।
ಎಂಕ್ಲೆ ಅಭಯ ಕೊರ್ಲೆಮ್ಮ ಓ ಕಟೀಲ್‌ದ ದೇವಿಯೇ ॥ ೨ ॥

# ಶರಣು ಶರಣು ಜಯದುರ್ಗೇ

ಶರಣು ಶರಣು ಜಯದುರ್ಗೇ ಸರ್ವಶಕ್ತಿ ಜಗನ್ಮಾತೆ ।
ಶರಣು ಶರಣು ಶಿವಗೌರಿ ರಕ್ಷಿಸಮ್ಮ ಸುಖದಾತೆ ॥ ಪ ॥

ಮಂಗಳವಾರ ಸುಮಂಗಲಿಯರು ನಿನ್ನಯ ನಾಮವ ಭಜಿಸಿರಲು ।
ಒಂಭತ್ತು ವಾರ ವ್ರತವಿರಲು ದೊರಕುವುದು ಇಷ್ಟಾರ್ಥಗಳು ॥ ೧ ॥

ರಕ್ಷಿಸಿವವಳು ನೀನೇ ಶಿಕ್ಷಿಸಿವವಳು ನೀನೇ ।
ಅಣು ಅಣುವೆಲ್ಲಾ ತುಂಬಿಹೆ ನೀನು ಕೋರಿಕೆ ಕರುಣಿಸೋ
ಕಾಮಧೇನು ॥ ೨ ॥

ಜಯ ಶಿವಶಂಕರಿ ಜಯ ಅಭಯಂಕರಿ ಜಯ ಜಯ ಶಕ್ತಿ ಜಯ
ಪ್ರಳಯಂಕರಿ ।
ಜಯ ಶಿವ ಶಾಂಭವಿ ಜಯ ನಟ ಭೈರವಿ ಜಯ ಕಾದಂಬರಿ
ಜಯ ಶ್ವೇತಾಂಬರಿ ॥ ೩ ॥

ಜಯ ಮಾತಾಂಗಿನಿ ಆನಂದ ದಾಯಿನಿ ।
ಜಯ ಜಯದಂಬೆ ಪುಣ್ಯ ಸ್ವರೂಪಿನಿ ॥
ಓಂ ಜಗಜ್ಜನನಿ ಮಾತಾಭವಾನಿ ।
ಓಂಕಾರೇಶ್ವರ ಚಿತ್ತ ನಿವಾಸಿನಿ ॥ ೪ ॥

# ಪರಮ ಪಾವನ

ಪರಮ ಪಾವನ ಈ ಸ್ಥಳ ಈ ಸ್ಥಳಾ
ಪರಮ ಮಂಗಳ ಈ ಸ್ಥಳ ॥ ಪ ॥
ದೇವಿ ನೆಲೆಸಿದ ಶಾಂತಿ ಧಾಮವು ।
ಕಟೀಲೇ ಈ ಪುಣ್ಯ ಸ್ಥಳ ॥ ೧ ॥

ವರ ಮುನಿಪ ಜಾಬಾಲಿಯ ।
ಶಾಪಕೆ ಒಳಗಾಗುತ ॥
ನಂದಿನಿಯೆ ನದಿಯಾಗಿ ಭುವಿಯಲಿ ।
ಹರಿಯುತಿಹ ಈ ಪುಣ್ಯ ಸ್ಥಳ ॥ ೨ ॥

ಭಜಕರಿಷ್ಟವ ನೀಡುತ ।
ಸುಜನರನ್ನು ಪೊರೆಯುತ ॥
ಜಗವ ಪೊರೆಯುವ ಮಾತೆ ಅಂಬಿಕೆ ।
ನೆಲೆಸಿರುವ ಈ ಪುಣ್ಯ ಸ್ಥಳ ॥ ೩ ॥

ಬೆಳ್ಳಿರಥವನು ಏರುತ
ಮೆಲ್ಲ ಹುಸಿನಗೆ ಬೀರುತ ॥
ಪುಲ್ಲಲೋಚನೆ ಪುರ ಸವಾರಿಯ
ಪಡೆದು ಚರಿಸುವ ಈ ಸ್ಥಳ ॥ ೪ ॥

# ನಮೋ ಭ್ರಾಮರೀ

ನಮೋ ಭ್ರಾಮರಿ ಪರಶಿವೆ ಜನನಿ ।
ನಮೋ ಮಹಾದೇವಿ । ನಮೋ ನಮೋ ಮಹಾದೇವಿ ॥
ಉಮಾ ಪತಿನನೇ ಎಡತ್‌ದ ಪರಸತಿ ನಮೋ ಉಮಾದೇವಿ ॥ ಪ ॥

ಮೂಜಿ ಲೋಕೊನೊರಿ ಆಳೊಂದಿತ್ತಿನಾಯೆ ದಾನವೇಂದ್ರೆ ಅರುಣೇ ।
ಸಾರ ಕಣ್ಣ್‌ದಾಯೆ ಆಯಡ ಸೋತುದೆನೆ ದೇವ ಲೋಕ ಬುಡಿಯೇ ॥
ಮಾತ ದೇವೆರ್‌ಲ ಒಟ್ಟು ನಟ್ಟಿಯೆರ್ ದೇವಿ ಕರುಣೆ ಕೊರುಲೇ ।
ದುಂಬಿ ರೂಪುಡಿನಿ ಚುಚ್ಚಿ ಕೆರಿನ ದೇವಿ ಉಂತ್ಯೆರತ್ತ ಮೂಲೇ ॥ ೧ ॥

ದೇವಿ ಸನ್ನಿಧಿಯೇ ಪುಣ್ಯ ಸಂಗಮನೊ ನಂಬಿ ಭಕ್ತಿಗಿನಿಯೇ ।
ಮಾತ ಕಷ್ಟೊಲೆನ್ ದೂರ ಮಲ್ಪುವೆರ್ ಇಂಬು ಕೊರ್ದು ಸಿರಿಯೇ.... ॥
ಏಳ್ ಕ್ಷೇತ್ರೊಡು ಮಲ್ಲ ಕ್ಷೇತ್ರ ಉಂದು ದೇವಿ ಮೆರೆತಿ ಕಟೀಲೇ ।
ಲಿಂಗ ರೂಪೊಡಿತ್ತಿ ಕಟೀಲೇಶ್ವರಿಯೇ ನಿತ್ಯಮೆರೆಪಿ ಕಟೀಲೇ ॥ ೨ ॥

ಸತ್ಯಾದ ಕಂಡೊಡ್ ಭಕ್ತೀದ ಬೀಜೊಗ್ ಮುಕ್ತಿದ ಬುಲೆ ಕೊರ್ದು ।
ಕರ್ತೆ೯ದಿ ಕೇನ್ವೆರ್ ಆರ್ತೀ೯ಡ್ ಬತ್ತ್‌ದ್ ದಾದಾಯ ಬೋಡುಂದೂ ॥
ನುರ್ತನೆ ದಾಂತೆನೆ ಬಿರ್ದ್‌೯ಡ್ ಕೊರ್ಪೆ೯ರ್ ಅರ್ಕ೯ಂದಿನಾ ವರೊನು ।
ನುರ್ತ್‌೯ದ್ ಐಸಿರಿ ಉರ್ಕೊ೯ಂದು ಬನ್ನಗ ಮರಪಡೆ ಭ್ರಾಮರಿನೇ ॥ ೩ ॥

# ಝುಣಕ್ ಝುಣಕ್ ಗೆಜ್ಜೆದ

ಝುಣಕ್ ಝುಣಕ್ ಗೆಜ್ಜೆದ ಶಬ್ದ ಕೇಂಡರಾ ।
ಕಟೀಲ್‌ದಪ್ಪೆ ಬರ್ಪಿನ ಪೊರ್ಲುಡು ತೂತರಾ ॥ ಪ ॥

ಕಷ್ಟ ಕಳೆದ್ ಇಷ್ಟೊಲೆನ್ ಕೊರುವೆರ್‌ಗೆತ್ತಾ ।
ಕಾರ್ಣಿಕ ದಿಂಜಿನ ಅಪ್ಪೆ ಕಟಿಲೇಶ್ವರಿ ॥ ೧ ॥

ನಂದಿನಿನ ಝುಳ್ ಝುಳ್ ಶಬ್ದ ಕೇಂಡ್‌ದ್ ।
ಸಂಗೀತದ ಝೇಂಕಾರೊಡ್ ಪಜ್ಜೆ ಪಾಡ್ವೆರ್ ॥
ಸರ್ವೇಶ್ವರಿ ಭುವನೇಶ್ವರಿ ಕಟಿಲೇಶ್ವರಿಯೇ ॥ ೨ ॥

ಯಕ್ಷಗಾನ ಸೇವೆನ್ ಭಕ್ತಿಡ್ ಪಡೆದ್ ।
ಪೂತ ಪೂಜೆ ನಿತ್ಯೊಲಾ ಕೈಕೊನ್‌ವೆರ್ ॥
ದುರ್ಗಾಂಬಿಕೆ ಜಗದಾಂಬಿಕೆ ಭ್ರಮರಾಂಬಿಕೆ ॥ ೩ ॥

# ಅಮ್ಮ ಇರೆನ ಜೋಕುಲೆಂಕುಲು

ಅಮ್ಮ ಇರೆನ ಜೋಕುಲೆಂಕುಲು ಭಜನೆ ಮಲ್ಪುವಯೇ ।
ತಾಳ ಮೇಳ ಪಾಡೊಂದು ಭಕ್ತಿಭಾವ ದೀವೊಂದು ಇರೆನೇ –
ನೆನೆಪುವಯೇ ಅಮ್ಮಾ ಇರೆನೇ ನೆನಪುವಯೇ ॥ ಪ ॥

ನಂಬುದು ಬತ್ತಿನ ಬಾಲೆಲು ಪಂಡ್‌ದ್ ನಂಬುಗೆ ಕೊರ್ಪರಾ ।
ಅಂಬಿಕೆ ಇರೆನ್ ನಂಬುದ ಎಂಕುಲು ಇಂಬುನು ಒದಗವರಾ ॥ ೧ ॥

ಕಲಿಯುಗೊಟೀರ್ ಮಹಾದೇವಿಯಮ್ಮ ಮೆರೆವೊಂದು ಬತ್ತರಾ.... ।
ತುಳುವೆರೆ ನಾಡ್‌ಡ್ ಭಕ್ತೆರೆ ಇಲ್ಲಡ್ ನೆಲೆವೊಂದು ಉಂತ್ಯರಾ....
॥ ೨ ॥

ಕಟೀಲ್‌ಡ್ ಮಲ್ಲಿಗೆ ಕಾಪುಡು ಪಿಂಗಾರ ಸೇವಂತಿಗೆ ಬಡಕೈಡ್.... ।
ಬಗೆಬಗೆ ಪೂತ ಸೇವೆಲ ಇರೆಗ್... ಕೊಲ್ಲೂರು ಕ್ಷೇತ್ರೊಡು ॥ ೩ ॥

ಕಾರ್‌ಗ್ ಬೂರ್ದು ನಟೊನುವೆ ಅಮ್ಮಾ ಕರುಣೆ ದೀಪಾರಾ ।
ಸುಖ ಶಾಂತಿ ಕೊರ್ದು ಬದುಕುನ ಸಾದಿನ್ ತೋಜಾದ್
ಕೊರ್ಪಾರಾ.... ॥ ೪ ॥

# ಭಜನೆ ಮಲ್ಪುಗ

ಭಜನೆ ಮಲ್ಪುಗ ನಮ ಭಜನೆ ಮಲ್ಪುಗಾ ।
ಪೂ ದೀದ್ ದೀಪ ದೀದ್ ಆರತಿ ಪತ್ತ್‌ಗಾ ॥ ಪ ॥

ಪೂಜೆ ಮಲ್ಪುಗಾ ನಮ ಪೂತ ಪೂಜೆ ಮಲ್ಪುಗಾ ।
ಪಿಲಿಂಗಾಲ್‌ದಮ್ಮ ಗಾಯತ್ರಿ ದೇವಿ ನೆನ್ನಿಗಾ ॥
ಕುಂಕುಮಾರ್ಚನೆ ಕರ್ಪೂರದಾರತಿ ಈರೆಗೆ ।
ಕುಂಕುಮಾರ್ಚನೆದ ಕುಂಕುಮ ಇರೆನ ಹಣೆಟ್ ॥
ಕರ್ಪೂರದಾರತಿ ಬೊಲ್ಪು ಇರೆನ ಮೋನೆಡ್ ।
ಮಲ್ಲಿಗೆ ಸಂಪಿಗೆ ಕೇದಗೆದ ಮಾಲೆ ಕೆಕ್ಕಿಲ್‌ಡ್ ॥
ಗಾಯತ್ರಿ ಅಮ್ಮ ಇರೆಗ್ ಅಡ್ಡಬೂರುದಾ ॥ ೧ ॥

ಸುಗಿತ್ ನಲಿಪುಗಾ ನಮ ಸುಗಿತ್‌ನಲಿಪುಗಾ ।
ಪಿಲಿಂಗಾಲ್ ಕ್ಷೇತ್ರದ ಗಾಯತ್ರಿ ದೇವಿನ್ ॥
ಕಾಡಬೆಟ್ಟು ಗ್ರಾಮೊಡು ಮೆರೆಪಿನಾರ್‌ಗೆ ।
ಕಟೀಲ್‌ದ ಕ್ಷೇತ್ರೊಡು ಭ್ರಮರಾಂಬಿಕೆ ॥ ೨ ॥

ಏತ್ ಪುದರ್‌ಯೇ ಅಪ್ಪೆಗ್ ಏತ್ ಪುದರ್‌ಯೇ ।
ಕೊಲ್ಲೂರುಡು ಮೂಕಾಂಬಿಕೆ ಆರೆಗೆ ಬಪ್ಪನಾಡ್ ದುರ್ಗಾದೇವಿ ಆರೆಗೆ ॥
ದುಂಬು ಬತ್ತಿ ದುಷ್ಟೆರೆಗ್ ಶಿಕ್ಷೆ ಕೊರಿಯೆರ್ ।
ಶರಣು ಬತ್ತಿ ಭಕ್ತೆರೆಗ್ ವರನ್ ಕೊರಿಯೆರ್ ॥
ಗಾಯತ್ರಿ ದೇವಿ ಇರೆಗ್ ಅಡ್ಡಬೂರುದಾ ।
ಕರುಣೆ ತೋಜಾಲೆ ಪಂಡ್‌ದ್ ಇರೆನೇ ನಂಬುದಾ ॥ ೩ ॥

# ಜಯವಾಗಲಿ ನಿತ್ಯ ಶುಭವಾಗಲಿ

ಜಯವಾಗಲಿ ನಿತ್ಯ ಶುಭವಾಗಲಿ ।
ಜಗದಲ್ಲಿ ಆನಂದ ನೆಲೆಯಾಗಲಿ ॥ ಪ ॥
ಶ್ರೀ ದೇವಿ ನಮ್ಮನ್ನು ಕಾಪಾಡಲಿ ।
ಶ್ರೀ ಭಕ್ತಿ ಸಾಮ್ರಾಜ್ಯ ಮೆರೆದಾಡಲಿ ॥ ೧ ॥

ಮೂಕಾಂಬಿಕೆ ಕಾರುಣ್ಯ ಸ್ಥಿರವಾಗಲಿ ।
ಶೋಕ ವ್ಯಾಕುಲವೆಲ್ಲ ಲಯವಾಗಲಿ ॥
ನಾಸ್ತಿಕರು ನಿನ್ನಲ್ಲಿ ಕ್ಷಮೆ ಕೋರಲಿ ।
ಆಸ್ತಿಕರ ಆಸೆಗಳು ಪೂರೈಸಲಿ ॥ ೨ ॥

ಕರುನಾಡ ಸಿರಿದೇವಿ ಕಾಪಾಡಲಿ ।
ಶ್ರೀ ರಕ್ಷೆ ಭಕ್ತರಿಗೆ ನೆರವಾಗಲಿ ॥
ಮೂಕಾಂಬೆ ಚಿರಕಾಲ ಶುಭ ನೀಡಲಿ ।
ಈ ಕ್ಷೇತ್ರ ಎಂದೆಂದು ನಲಿದಾಡಲಿ ॥ ೩ ॥

# ಯೇತ್ ಪೊರ್ಲುರ್ ತೋಜುವರಮ್ಮ

ಯೇತ್ ಪೊರ್ಲುರ್ ತೋಜುವರಮ್ಮ ತೂಪಿನೆನ್ನ ಪುಣ್ಯ ।
ಪೆದ್ದಿ ಅಪ್ಪೆನೆ ಈರೆ ಪಂಡ್‌ದ್ ಆರದ್ದ್ ಪತ್ತೆರೆ ಆಸೆ ಎನ್ನ ॥ ಪ ॥

ಯೇತ್ ಜನುಮದ ಎಡ್ಡೆಂತಿ ಫಲನ ಇರೆನ್ ತೂಪಿನೊಂಜಿ ।
ಇರೆನ ಎದುರುಡೆ ಇಂಚ ಕುಲ್ಯರೆ ಬಾಲೆ ಯಾದ್ ಒಂಜಿ ॥
ಇರೆನ ಮೋನೆನೆ ತೂವೊಂದು ಕುಲ್ಲುನ ಆಸೆ ಎಂಕ್ ಒಂಜಿ ।
ದೂರ ಮಲ್ಪಡೆ ಯೆನನ್ ಈರ್, ಪಾದದ ಅಡಿಟ್ ಕುಲ್ಲುವೆಯಮ್ಮಾ
॥ ೧ ॥

ಮಲ್ಲಿಗೆ ಅರಳುನ ಮುಗುರು ತೆಲಿಕೆನೆ ಬಂಜಿನ್ ಜಿಂಜಾವುಂಡು ।
ಪುಣ್ಣಮೆ ಚಂದ್ರನ ಬೊಲ್ಪುದ ಮೋನೆ ಭಕ್ತಿನ್ ಉರ್ಕಾವುಂಡು ॥
ಕಡಪುಡಡೆ ಪಿರ ಈರ್ ಎನನ್ ಅಂಚಿ ಬುಲಿಪುವೆ ತೂಲೆಪಗ ।
ಪೊರೆಲುವೆ ಮೂಲೆ ಇರೆನ ಕಾರ್‌ದಡಿ ಪೋಯವೆ ಮುಲ್ತ್ ಇರೆನ್
ಬುರ್ದ್ ಯಾನ್ ॥ ೨ ॥

ಮನಿಪಂದೆ ಕುಲ್ಲುವೆ ಪಾತೆರುಜಿ ಯಾನ್ ತೂಪಿನಿ ಮಾತ್ರ ಇರೆನ್ ।
ನೆರಡೆ ಈರ್ ಎಂಕ್, ಕೋಪ ಮಲ್ಪಡೆ ಪಾಪದಾಲ್ ಯಾನ್ ॥
ಇರೆನ್ ನಂಬಿನ ಬಾಲೆ ಯಾನ್ ಗತಿಯೇ ಈರಮ್ಮ ।
ಇರೆನ ಒಂಜಿ ಕರುಣೆ ತಿಕ್ಕಂಡ ಯಾವು ಬೇತೆ ದಾಲ ಬೊರ್ಚಿ ಅಮ್ಮ
॥ ೩ ॥

# ಮರುಳು ಮಾಡಿಕೊಂಡೆಯಲ್ಲೆ

ಮರುಳು ಮಾಡಿಕೊಂಡೆಯಲ್ಲೆ ಮಾಯದೇವಿಯೆ ।
ಇರುಳು ಹಗಲು ಏಕವಾಗಿ ಹರಿಯು ನಿನ್ನ ಬಿಡದಿಪಂತೆ ॥ ಪ ॥

ಜ್ಞಾನಿಗಳು ನಿತ್ಯ ಅನ್ನ ಪಾನಾದಿಗಳನ್ನು ಬಿಟ್ಟು ।
ನಾನ ವಿಧದ ತಪದಲ್ಲಿದ್ದರು, ಧ್ಯಾನಕೆ ಸಿಲುಕಾದವನ ॥ ೧ ॥

ರಂಗನು ಭೂಲೋಕದಿ ಭುಜಂಗ ಗಿರಿಯೊಳು ಅಲಮೇಲು ।
ಮಂಗಪತಿಯಾಗಿ ನಿನ್ನ ಅಂಗೀಕರಿಸುವಂತೆ ॥ ೨ ॥

ಪ್ರಳಯಕಾಲದಲ್ಲಿ ಆಲದೆಲೆಯ ಮೇಲೆ ಮಲಗಿದ್ದಾಗ ।
ಹಲವು ಆಭರಣಗಳು ಜಲವು ಆಗಿ ಜಾಣತನದಿ ॥ ೩ ॥

ಸರ್ವಸಂಗಬಿಟ್ಟು ಸನ್ಯಾಸಿಯಾದ ಕಾಲಕ್ಕು ।
ಸರ್ವದ ತನ್ನೆದೆಯ ಮೇಲೆ ಬಿಡದೆ ನಿನ್ನ ಧರಿಸಿಪಂತೆ ॥ ೪ ॥

ಎಡಕೆ ಭೂಮಿ ಬಲಕೆ ಶ್ರೀಯು ಎದುರಿನಲ್ಲಿ ದುರ್ಗಾದೇವಿ ।
ತೊಡೆಯಮೇಲೆ ಲಕುಮಿಯಾಗಿ ಬಿಡದೆ ಮುದ್ದಾಡಿಪಂತೆ ॥ ೫ ॥

ಮಕ್ಕಳ ಪಡೆದರೆ ನಿನ್ನ ಚೊಕ್ಕ ತನವು ಪೋಗುದೆಂದು ।
ಹೊಕ್ಕುಳೊಲು ಮಕ್ಕಳ ಪಡೆದು ಕಕ್ಕುಲಾತಿ ಪಡುವಂತೆ ॥ ೬ ॥

ಎಂದೆಂದಿಗು ಮರೆಯೆ ನಿನ್ನ ಆನಂದದಿ ಜನರಿಗೆಲ್ಲ ।
ತಂದು ತೋರೆ ಸ್ವಾಧೀನ ಪುರಂದರವಿಠಲ ರಾಯನ ॥ ೭ ॥

## ಶ್ರೀ ಶಿವ ಸ್ತೋತ್ರಂ

**ಮೃತ್ಯುಂಜಯಾಯ ರುದ್ರಾಯ ನೀಲಕಂಠಾಯ ಶಂಭವೇ।**
**ಅಮೃತೇಶಾಯ ಶರ್ವಾಯ ಮಹಾದೇವಾಯತೇ ನಮಃ ॥**

# ನಂಬಿದೆ ನಿನ್ನಾ ನಾಗಭರಣ

ನಂಬಿದೆ ನಿನ್ನಾ ನಾಗಭರಣ ಕಾಯೋ ಕರುಣಾಮಯ ನನ್ನ ।
ನಿನ್ನಾ ನಾಮವು ಒಂದೇ ನೀಗಿಸಬಲ್ಲದು ಬಾಧೆ ॥
ತನುಮನ ಜೀವನ ಪಾವನವಯ್ಯ । ಶಂಭೋ ಎನ್ನಲು ಇಲ್ಲ ಭಯ
॥ ಪ ॥

ಬಾಡದ ಹೂವಿನ ಮಾಲೆ ಬಾಗಿತುಪಾದದ ಮೇಲೆ ।
ಪ್ರೇಮಮಯ ನಿನಗೆ ಜಯ । ನನ್ನ ಜೀವನ ನಿನ್ನಲೆ ತನ್ಮಯ ॥
ಬಾಳಿನ ಹಾದಿಯ ಬೆಳಗಯ್ಯ ॥ ೧ ॥

ಲೋಕವ ಕಾಯುವ ಸ್ವಾಮಿ ಭಿಕ್ಷೆಯ ಬೇಡಿದ ಪ್ರೇಮಿ ।
ಭಸ್ಮಮಯ ಬಿಲ್ವಪ್ರಿಯ । ನನ್ನೀ ದೇಹವೇ ನಿನ್ನಯ ಆಲಯ ॥
ಸೇವಾ ಭಾಗ್ಯವ ನೀಡಯ್ಯ ॥ ೨ ॥

# ಮನಸ್ಸಿನಲ್ಲಿ ನಿಂತಿರಲು

ಮನಸ್ಸಿನಲ್ಲಿ ನಿಂತಿರಲು ಮಂಜುನಾಥ ।
ಮಂಜಿನೊಲು ಮರೆಯುವುದು ಎಲ್ಲ ಕ್ಲೇಶ ॥ ಪ ॥
ಮನೆಯೆ ಒಂದು ಪುಣ್ಯದ ಧರ್ಮಸ್ಥಳ ।
ಮುದದಿಂದ ಬಂದಿರಲು ಮಂಜೇಷ ॥ ೧ ॥

ಸತ್ಯಧರ್ಮ ನಿಷ್ಠೆಯಿಂದ ಪಾಲಿಸುವಾಗ ।
ಭಕ್ತಿಯಿಂದ ದೈವಪೂಜೆ ಮಾಡಿದಂತೆ ॥
ಅನ್ನದಾನ ವಸ್ತ್ರದಾನ ಮಾಡುವಾಗ ।
ಧರ್ಮಸ್ಥಳ ಪ್ರಭುದರ್ಶನ ಆದಂತೆ ॥ ೨ ॥

ಶುಭ್ರವಾದ ಮನಸ್ಸನ್ನು ಪಡೆದಿರುವಾಗ ।
ನೇತ್ರಾವತಿ ನೀರಸ್ನಾನ ಮಾಡಿದಂತೆ ॥
ಆತ್ಮಸಾಕ್ಷಿ ಗಂಗೆ ಬಾನ ಕಳೆಯುವಾಗ ।
ಧರ್ಮಸ್ಥಳ ಯಾತ್ರೆಯ ಮಾಡಿದಂತೆ ॥ ೩ ॥

ನೊಂದವರಿಗೆ ಸೇವೆಯನು ಮಾಡಿದಾಗ ।
ಮಂಜುನಾಥ ಸೇವೆಯನು ಮಾಡಿದಂತೆ ॥
ತ್ಯಾಗ ಎಂಬ ರಾಗವನ್ನು ಹಾಡಿದಾಗ ।
ಮಂಜುನಾಥ ನಮಗೆ ಒಲಿವನಂತೆ ॥ ೪ ॥

# ನ್ಯಾಯ ನೀತಿ

ನ್ಯಾಯ ನೀತಿ ಮೂರ್ತಿವೆತ್ತ ಸತ್ಯದೈವವೇ ।
ಮಹಾಮಹಿಮ ಮಂಜುನಾಥ ನಮೋ ಎನ್ನುವೆ ॥ ಪ ॥
ಭೂಮಿಗಿಳಿದ ಕೈಲಾಸ ನಿನ್ನ ಸನ್ನಿಧಿ ।
ನೇತ್ರಾವತಿ ನದಿ ಇದುವೆ ಆ ಸುರನದಿ ॥ ೧ ॥

ಧರ್ಮಪಾಲ ದಯಾಶೀಲ ಮಂಜುನಾಥನೇ ।
ನಿನ್ನ ಚರಣ ಸೇವೆ ನಮ್ಮ ಗುರಿಯ ಸಾಧನೆ ॥
ಕಾಳರಾತ್ರಿ ಕಾಳರಾಹು, ಕುಮಾರಸ್ವಾಮಿಯೇ ।
ನೇಮದಿಂದ ನಮಿಸುವೆವು ಹೆಜ್ಜೆ ಹೆಜ್ಜೆಗೇ ॥ ೨ ॥

ಅಣ್ಣಪ್ಪ ಗುರುವೆ ನಿನಗೆ ಶರಣು ಎನ್ನುವೇ ।
ನಿನ್ನ ರಕ್ಷೆ ಇರಲು ನಾನು ಎಲ್ಲಾ ಗೆಲ್ಲುವೇ ॥
ನ್ಯಾಯ ಮಾರ್ಗದಲ್ಲಿ ನಡೆದು ಧನ್ಯನಾಗುವೆ ।
ಧರ್ಮ ನಮ್ಮ ಕಾಯಲೆಂದು ಸದಾ ಬೇಡುವೆ ॥ ೩ ॥

ಧರ್ಮವನ್ನು ರಕ್ಷಿಸುವ ಶಕ್ತಿ ನೀಡು ।
ನಿನ್ನ ನಂಬಿ ಬಾಳುವ ಭಕ್ತಿ ನೀಡು ॥
ಸತ್ಯವೇ ಗೆಲ್ಲುವ ನ್ಯಾಯ ನೀಡು ।
ನಮ್ಮ ಮನದ ಗುಡಿಯಲ್ಲಿ ವಾಸ ಮಾಡು ॥ ೪ ॥

# ಧರ್ಮಸ್ಥಳಕೆ ಹೋಗೋಣ

ಧರ್ಮಸ್ಥಳಕೆ ಹೋಗೋಣ । ಅದು ಸಾಟಿ ಇಲ್ಲದ ಕ್ಷೇತ್ರ ॥ ಪ ॥

ತನುಮನ ಧನಗಳ ಅರ್ಪಿಸುವ । ಮಂಜುನಾಥನಿಗೆ ಅರ್ಪಿಸುವ ।
ಸ್ವಾಮಿಯೇ.. ಈಶನೇ.. ಈಶನೇ.. ಸ್ವಾಮಿಯೇ.. ॥ ೧ ॥

ನೇತ್ರಾವತಿಯಲ್ಲಿ ಮೀಯೋಣ । ಪಾಪಗಳೆಲ್ಲವ ಕಳೆಯೋಣ ॥
ಸ್ವಾಮಿಯೇ.. ಈಶನೇ.. ಈಶನೇ.. ಸ್ವಾಮಿಯೇ.. ॥ ೨ ॥

ಗಣಪತಿ ಪಿತನೇ ಎನ್ನೋಣ । ಈಶ್ವರ ಎಂದೇ ಭಜಿಸೋಣ ॥
ಸ್ವಾಮಿಯೇ.. ಈಶನೇ.. ಈಶನೇ.. ಸ್ವಾಮಿಯೇ.. ॥ ೩ ॥

ಜಾತಿ ಬೇಧವ ಮರೆಯೋಣ । ಎಲ್ಲರೂ ಸ್ವಾಮಿಯ ನೆನೆಯೋಣ ॥
ಸ್ವಾಮಿಯೇ.. ಈಶನೇ.. ಈಶನೇ.. ಸ್ವಾಮಿಯೇ.. ॥ ೪ ॥

# ಕಾಶಿಯಿಂದ ಬಂದನಿಲ್ಲಿ

ಕಾಶಿಯಿಂದ ಬಂದನಿಲ್ಲಿ ವಿಶ್ವನಾಥ ।
ಕರೆಯುವರು ಅವನನ್ನೇ ಮಂಜುನಾಥ ॥ ಪ ॥
ಧರ್ಮದ ಮರ್ಮವಿಹ ಈ ನೆಲ ।
ಕನ್ನಡದ ಹಿರಿಮೆಯ ಧರ್ಮಸ್ಥಳ ॥ ೧ ॥

ನೇತ್ರಾವತಿ ಬಂದಳು ಮಾಯೆಯಾಗಿ ।
ದೇವಗಂಗೆಯಂತೆಯೇ ಪಾವನೆಯಾಗಿ ॥
ಅಣ್ಣಪ್ಪ ಬಂದನಿಲ್ಲಿ ಸೇವೆಗಾಗಿ ।
ಭೂತ ಪ್ರೇತ ಸೇನೆಗೆ ನಾಥನಾಗಿ ॥ ೨ ॥

ಹಿಂದು ಜೈನ ಧರ್ಮದ ಸಂಗಮವಿಲ್ಲಿ ।
ಎಂದು ಸಾರುತಿಹನು ಬಾಹುಬಲಿ ॥
ಇಂಥ ಪುಣ್ಯಕ್ಷೇತ್ರಕೆ ಸಾಟಿ ಎಲ್ಲಿ ।
ಯಾತ್ರಿಕನೇ ಧನ್ಯವಾಗಿ ಬಂದನಲ್ಲಿ ॥ ೩ ॥

# ಬ್ರಹ್ಮ ಮುರಾರಿ

ಬ್ರಹ್ಮ ಮುರಾರಿ ಸುರಾರ್ಚಿತ ಲಿಂಗಂ ।
ನಿರ್ಮಲ ಭಾಷಿತ ಶೋಭಿತ ಲಿಂಗಂ ॥
ಜನ್ಮಜ ದುಃಖ ವಿನಾಶಕ ಲಿಂಗಂ ।
ತತ್ಪ್ರಣಮಾಮಿ ಸದಾಶಿವ ಲಿಂಗಂ ॥ ೧ ॥

ದೇವ ಮುನಿ ಪ್ರವರಾರ್ಚಿತ ಲಿಂಗಂ ।
ಕಾಮದಹನ ಕರುಣಾಕರ ಲಿಂಗಂ ॥
ರಾವಣ ದರ್ಪ ವಿನಾಶಕ ಲಿಂಗಂ ।
ತತ್ಪ್ರಣಮಾಮಿ ಸದಾಶಿವ ಲಿಂಗಂ ॥ ೨ ॥

ಸರ್ವ ಸುಗಂಧ ಸುಲೇಪಿತ ಲಿಂಗಂ ।
ಬುದ್ಧಿ ವಿವರ್ಧನ ಕಾರಣ ಲಿಂಗಂ ॥
ಸಿದ್ಧ ಸುರಾಸುರ ವಂದಿತ ಲಿಂಗಂ ।
ತತ್ಪ್ರಣಮಾಮಿ ಸದಾಶಿವ ಲಿಂಗಂ ॥ ೩ ॥

ಕನಕ ಮಹಾಮಣಿ ಭೂಷಿತ ಲಿಂಗಂ ।
ಫಣಿಪತಿ ವೇಷ್ಠಿತ ಶೋಭಿತ ಲಿಂಗಂ ॥
ದಕ್ಷ ಸುಯಜ್ಞ ವಿನಾಶಕ ಲಿಂಗಂ ।
ತತ್ಪ್ರಣಮಾಮಿ ಸದಾಶಿವ ಲಿಂಗಂ ॥ ೪ ॥

ಕುಂಕುಮ ಚಂದನ ಲೇಪಿತ ಲಿಂಗಂ ।
ಪಂಕಜ ಹಾರ ಸುಶೋಭಿತ ಲಿಂಗಂ ॥
ಸಂಚಿತ ಪಾಪ ವಿನಾಶಕ ಲಿಂಗಂ ।
ತತ್ಪ್ರಣಮಾಮಿ ಸದಾಶಿವ ಲಿಂಗಂ ॥ ೫ ॥

ದೇವ ಗಣಾರ್ಚಿತ ಸೇವಿತ ಲಿಂಗಂ ।
ಭಾವೈಭಕ್ತಿ ಭಿರೇವಚ ಲಿಂಗಂ ॥
ದಿನಕರ ಕೋಟಿ ಪ್ರಭಾಕರ ಲಿಂಗಂ ।

ತತ್ಪ್ರಣಮಾಮಿ ಸದಾಶಿವ ಲಿಂಗಂ ॥ ೬ ॥

ಅಷ್ಟದಳೌ ಪರಿವೇಷ್ಟಿತ ಲಿಂಗಂ ।
ಸರ್ವ ಸಮುದ್ಭವ ಕಾರಣ ಲಿಂಗಂ ॥
ಅಷ್ಟದರಿದ್ರ ವಿನಾಶಕ ಲಿಂಗಂ ।
ತತ್ಪ್ರಣಮಾಮಿ ಸದಾಶಿವ ಲಿಂಗಂ ॥ ೭ ॥

ಸುರಗುರು ಸುರವರ ಪೂಜಿತ ಲಿಂಗಂ ।
ಸುರವನ ಪುಷ್ಪ ಸದಾರ್ಚಿತ ಲಿಂಗಂ ॥
ಪರಮಂ ಪದಂ ಪರಮಾತ್ಮಕ ಲಿಂಗಂ ।
ತತ್ಪ್ರಣಮಾಮಿ ಸದಾಶಿವ ಲಿಂಗಂ ॥ ೮ ॥

ಲಿಂಗಾಷ್ಟಕಮಿದಂ ಪುಣ್ಯಂ ಯಃ ಪಠೇತ್ ಶಿವಸನ್ನಿಧೌ ।
ಶಿವಲೋಕ ಮವಾಪ್ನೋತಿ ಶಿವೇನ ಸಹಮೋದತೇ ॥

# ನೀಡು ಶಿವ ನೀಡದಿರೂ

ನೀಡು ಶಿವ ನೀಡದಿರೂ ಶಿವ । ಬಾಗುವುದು ನನ್ನ ಕಾಯ ॥
ನಾನೇಕೆ ಅಂಜಲಿ ನೀ ನನ್ನ ಅಂಬಲಿ ॥ ಪ ॥

ಶೃಂಗಾರ ಕೃತಕ, ಬಂಗಾರ ಕ್ಷಣಿಕ । ಬಾಳಲ್ಲಿ ಬಡಿವಾರವೇಕೆ ॥
ನೀನಿತ್ತ ಕಾಯ, ನಿನ್ನ ಕೈಲೇ ಮಾಯ ।
ಆಗೋದು ಹೋಗೋದು ನಾ ಕಾಣೆನೆ ॥ ೧ ॥

ಮಾಳಿಗೆ ಕೊಟ್ಟರು, ಮರದಡಿಯೆ ಇಟ್ಟರು । ನಾನಂತು ನಿನ್ನನ್ನಲಾರೆ ॥
ಸಾರಂಗ ಮನಕೆ, ನೂರಾರು ಬಯಕೆ ।
ಮುಂದಿಟ್ಟು ರಮಿಸೋದು ನಾ ಕಾಣೆನೆ ॥ ೨ ॥

# ಓಂ ನಮಃ ಶಿವಾಯೋ

ಓಂ ನಮಃ ಶಿವಾಯೋ ನಮಃ ಶಿವಾಯ್ ।
ಹರ್ ಹರ್ ಬೋಲೇ ನಮಃ ಶಿವಾಯ್ ॥ ಪ ॥

ರಾಮೇಶ್ವರ ಶಿವ ರಾಮೇಶ್ವರ ।
ಹರ್‌ಹರ್ ಬೋಲೇ ನಮಃ ಶಿವಾಯ್ ॥ ೨ ॥

ಗಂಗಾಧರ ಶಿವ ಗಂಗಾಧರ ।
ಹರ್‌ಹರ್ ಬೋಲೇ ನಮಃ ಶಿವಾಯ್ ॥ ೧ ॥

ಜಟಾಧರಾ ಶಿವ ಜಟಾಧರಾ ।
ಹರ್‌ಹರ್ ಬೋಲೇ ನಮಃ ಶಿವಾಯ್ ॥ ೩ ॥

ಸೋಮೇಶ್ವರಾ ಶಿವ ಸೋಮೇಶ್ವರ ।
ಹರ್‌ಹರ್ ಬೋಲೇ ನಮಃ ಶಿವಾಯ್ ॥ ೩ ॥

ಕಾರಿಂಜೇಶ್ವರ ಶಿವ ಕಾರಿಂಜೇಶ್ವರ ।
ಹರ್‌ಹರ್ ಬೋಲೇ ನಮಃ ಶಿವಾಯ್ ॥ ೪ ॥

ಸರ್ವೇಶ್ವರ ಶಿವ ಸರ್ವೇಶ್ವರ ।
ಹರ್‌ಹರ್ ಬೋಲೇ ನಮಃ ಶಿವಾಯ್ ॥ ೫ ॥

## ಶ್ರೀ ರಾಮ ಸ್ತೋತ್ರಂ

**ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇದಸೇ ।**
**ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ ॥**
**ಶ್ರೀರಾಮ ಜಾನಕೀನಾಥ ತಾಟಕಾಸುರ ಮರ್ಧನ ।**
**ಇಕ್ಷ್ವಾಕು ಕುಲ ಸಂಭೂತ ರಣಪಂಡಿತ ರಾಘವಃ ॥**

# ಭಜನೆಗೆ ಪ್ರಾರಂಭ

ಭಜನೆಗೆ ಪ್ರಾರಂಭ ಮಾಡೋಣ ।
ರಾಮ ರಾಮ ರಾಮ ರಾಮ್ ॥ ಪ ॥

ರಾಮನ ಭಜನೆಗೆ ನಿಂತಾಗ ।
ಮಾಡಲೇಬೇಕು ಲಜ್ಜಾತ್ಯಾಗ ॥ ೧ ॥

ಲಕ್ಷ್ಯವು ಬೇಡ ರಾಗದ ಕಡೆಗೆ ।
ಭಕ್ತಿಯು ತುಂಬಲಿ ಹೃದಯದ ಒಳಗೆ ॥ ೨ ॥

ರಾಗ ತಾಳ ಹೇಗೇ ಇರಲಿ ।
ರಾಮ ನಾಮವು ಬಾಯಿಗೆ ಬರಲಿ ॥ ೩ ॥

# ಓಂ ಶ್ರೀ ರಾಮ

ಓಂ ಶ್ರೀರಾಮ ಜೈ ರಾಮ ಜೈ ಜೈ ರಾಮ
ದಶರಥ ನಂದನ ರಾಜಾರಾಮ ॥ ಪ ॥
ಜಾನಕಿ ಜೀವನ ಮೇಘಶ್ಯಾಮ ।
ಪತಿತ ಪಾವನ ಹೇ ರಘುರಾಮ ॥ ೧ ॥

ಸೀತಾವಲ್ಲಭ ಸೀತಾರಾಮ ।
ರಾವಣ ಮರ್ಧನ ರಾಜಾರಾಮ ॥
ದೀನೋದ್ಧಾರಕ ಶ್ರೀ ರಘುರಾಮ ।
ಅಹಲ್ಯೋದ್ಧಾರಕ ರಾಜಾರಾಮ ॥ ೨ ॥

ಹನುಮಂತ ಸೇವಿತ ಸೀತಾರಾಮ ।
ಭಕ್ತ ಜನೋದ್ಧಾರ ಪಾವನ ರಾಮ ।
ಕೋದಂಡದಾರಿ ಅಗಣಿತರಾಮ ।
ಪುರುಷೋತ್ತಮ ರಘುನಂದನ ರಾಮ ॥ ೩ ॥

# ತೆರೆಯೋ ಬಾಗಿಲನು ರಾಮ

ಪೂಜಿಸಲೆಂದೇ ಹೂಗಳ ತಂದೇ ।
ದರುಶನ ಕೋರಿ ನಾನಿಂದೇ ॥
ತೆರೆಯೋ ಬಾಗಿಲನು ರಾಮ ॥ ಪ ॥

ಮೋಡದ ಮೇಲೆ ಚಿನ್ನದ ನೀರು ।
ಚೆಲ್ಲುತ ಸಾಗಿದೆ ಹೊನ್ನಿನ ತೇರು ॥
ಮಾಣಿಕ್ಯದಾರತಿ ಉಷೆ ತಂದಿಹಳು ।
ತಾಮಸವೇಕಿನ್ನು ಸ್ವಾಮೀ । ತೆರೆಯೋ ಬಾಗಿಲನು ರಾಮ ॥ ೧ ॥

ಒಲಿದರು ಚೆನ್ನಾ ಮುನಿದರು ಚೆನ್ನಾ ।
ನಿನ್ನಾಸರೆಯೇ ಬಾಳಿಗೆ ಚೆನ್ನಾ ।
ನಾ ನಿನ್ನ ಪಾದದ ಧೂಳಾದರೂ ಚೆನ್ನಾ ।
ಸ್ವೀಕರಿಸು ಎನ್ನಾ ಸ್ವಾಮೀ । ತೆರೆಯೋ ಬಾಗಿಲನು ರಾಮ ॥ ೨ ॥

# ರಾಮ ರಾಮ ಎಂಬೆರಡಕ್ಷರ

ರಾಮ ರಾಮ ಎಂಬೆರಡಕ್ಷರ । ಪ್ರೇಮದಿ ಸಲಹಿತು ಸುಜನರನು ॥ ಪ ॥

ಹಾಲಾ ಹಲವನ್ನು ಪಾನವ ಮಾಡಿದ । ಹಾಲಾಲೋಚನನೆ ಬಲ್ಲವನು ।
ಹಾಲಾ ಪಿಸುತ ಶಿಲೆಯಾಗಿದ್ದ । ಬಾಲೆ ಅಹಲ್ಯೆಯ ಕೇಳೆನೋ ॥ ೧ ॥

ಅಂಜಿಕೆ ಇಲ್ಲದೆ ಗಿರಿ ಸಾರಿದ ಕಪಿ । ಕುಂಜರ ರವಿಸುತ ಬಲ್ಲವನು ॥
ಎಂಜಲೆ ಫಲಗಳ ಹರಿಗರ್ಪಿಸಿದ । ಕಂಜಲೋಚನೆಯ ಕೇಳೆನೋ ॥ ೨ ॥

ಕಾಲವ ನರಿತು ಸೇವೆಯ ಮಾಡಿದ । ಲೋಲ ಲಕ್ಷ್ಮಣನೇ ಬಲ್ಲವನು ॥
ವ್ಯಾಳಶಯನ ಶ್ರೀ ವಿಜಯ ವಿಠ್ಠಲನ । ಲೀಲೇ ಶರದಿಯ ಕೇಳೆನೋ ॥ ೩ ॥

# ರಾಮಕೃಷ್ಣ ಹರೇ

ರಾಮಕೃಷ್ಣ ಹರೇ ಮುಕುಂದಾ ಮುರಾರೇ ।
ಪಾಂಡುರಂಗ ಪಾಂಡುರಂಗ ಪಾಂಡುರಂಗ ಹರೇ ॥ ಪ ॥

ದೀನಾನಾಥ ಹರೇ ದೀನ ಬಂಧು ಹರೇ ।
ಅಚ್ಯುತ ಕೇಶವ ಮಧುಸೂಧನ ಹರೇ ॥ ೧ ॥

ಗೀತಾಭೋಧ ಹರೇ ಪುರಾಣಪುರುಷ ಹರೇ ।
ದಶ ಅವತಾರೇ ವಾಸುದೇವ ಹರೇ ॥ ೨ ॥

ಅನಂತ ಮಹಿಮ ಹರೇ ಅನಂತನಾಮ ಹರೇ
ದಯಾಸಾಗರ ವಿಷ್ಣುಮೂರ್ತಿ ಹರೇ ॥ ೩ ॥

ಸಂಕಟಹರಣ ಹರೇ ವೆಂಕಟರಮಣ ಹರೇ
ದುರಿತನಿವಾರಣ ಲಕ್ಷ್ಮೀರಮಣ ಹರೇ ॥ ೪ ॥

ಚಿದಾನಂದ ಹರೇ ಯೋಗಾನಂದ ಹರೇ
ನಿತ್ಯಾನಂದ ಪರಮಾನಂದ ವಾಸುದೇವ ಹರೇ ॥ ೫ ॥

ವೇದವೈದ್ಯ ಹರೇ ನಾರಾಯಣ ಹರೇ
ಕಲಿಯುಗ ವರದ ಸತ್ಯನಾರಾಯಣ ಹರೇ ॥ ೬ ॥

ಪಾಂಡುರಂಗ ಹರೇ ಪಂಡರಿನಾಥ ಹರೇ
ವಿಠಲ ವಿಠಲ ಹರೇ ಪಾಂಡುರಂಗ ಹರೇ ॥ ೭ ॥

# ಇದೇ ರಾಮ ನಾಮ

ಇದೇ ರಾಮ ನಾಮ ಪರಮಪೂಜ್ಯ ನಾಮ ।
ಪರಮಾತ್ಮ ಧ್ಯಾನ ಶ್ರೀರಾಮ ॥ ಪ ॥

ಶಿಲೆಯ ಮೆಟ್ಟಿ ವನಿತೆಯ ಗೈದು ।
ಶಿವ ಧನಸು ಮುರಿದ ರಾಮ ॥
ಶಕ್ತಿಶಾಲಿ ರಾವಣನನ್ನು ಸಂಹರಿಸಿ ಮೆರೆದ ರಾಮ ।
ಜನನ ಮರಣ ಒಂದೇ ಎಂದು ಸಾರಿ ಸಾರಿ ಹೇಳಿದ ನಾಮ ॥ ೧ ॥

ಚಂದ್ರಕಾಂತ ಮೆಚ್ಚಿದ ನಾಮ ।
ಜಾಂಬವಂತನು ಜಪಿಸಿದ ನಾಮ ॥
ಸುಗ್ರೀವನು ಸಾರಿದ ನಾಮ ।
ತಾಯಿ ಶಬರಿಯ ಹರಸಿದ ನಾಮ ॥
ಹರಿ ಹರರು ಒಂದೇ ಎಂದು ಸಾರಿ ಸಾರಿ ಹೇಳಿದ ನಾಮ ॥ ೨ ॥

# ನಾ ನಿನ್ನ ದಾಸನಯ್ಯ

ನಾ ನಿನ್ನ ದಾಸನಯ್ಯ ಸೀತಾರಾಮ । ನಾ ನಿನ್ನ ದಾಸನಯ್ಯ ॥
ನಾನು ನಿನ್ನಯ ದಾಸನೌದು । ನೀನು ಈ ಜಗದೀಶ ನೌದು ॥ ಪ ॥
ಭಾನು ಕೋಟಿ ಪ್ರಕಾಶನೇ ಸಂಗೀತಗಾನ ವಿನೋದ ರಂಗ ॥ ೧ ॥

ಮತಿಹೀನ ನಾನಾದೇನೈ ಶಾಶ್ವತ ದಾಸ ಗತಿಯಾ ಕಾಣದೆ ಪೋದೆನೈ ।
ಹಿತವ ಪಾಲಿಸಬೇಕು ಓಂ ಶ್ರೀ ಪತಿತ ಪಾವನ ರಂಗ ನಾಯಕ ।
ಶಶಿ ಶಿರೋಮಣಿ ಪರಮ ಸೀತ ಪತಿಯ ನಾಮದ ಸುತನು ತಾನೇ
॥ ೨ ॥

ಕಂದಯ್ಯ ಗಾರೋಗತಿ ನಿನ್ನಯ ಚೆಲುವ ದ್ವಂದ ಪಾದಗಳೇ ಶ್ರುತಿ ।
ಹಿಂದೆ ಮಾಡಿದ ಕೊಲೆಗಳೆಲ್ಲವೂ ಮುಂದೆ ಬಾರದಂತೆ ಹರಿಯೇ ।
ಇಂದಿರೇಶ ಮುಕುಂದಪರಮ ನಂದತುಳಸಿ ರಾಮದೇಶಿಕ
॥ ೩ ॥

# ಅಲ್ಲಿ ನೋಡಲು ರಾಮ

ಅಲ್ಲಿ ನೋಡಲು ರಾಮ ಇಲ್ಲಿ ನೋಡಲು ರಾಮ ।
ಎಲ್ಲೆಲ್ಲಿ ನೋಡಿದರೂ ಅಲ್ಲಿ ಶ್ರೀರಾಮ ॥ ಪ ॥

ರಾವಣನ ಮೂಲಬಲ ಕಂಡು ಕಪಿಸೇನೆ ।
ಆವಾಗಲೇ ಬೆದರಿ ಓಡಿದವು ॥
ಈವೇಳೆ ನರನಾಗಿ ಇರಬಾರದೆಂದೆಣಿಸಿ ।
ದೇವ ರಾಮಚಂದ್ರ ಜಗವೆಲ್ಲ ತಾನಾದ ॥ ೧ ॥

ಅವನಿಗೆ ಇವರಾಮ ಇವನಿಗೆ ಅವರಾಮ ।
ಅವನಿಯೊಳೀಪರಿ ರೂಪ ಉಂಟೆ ॥
ಲವ ಮಾತ್ರದಿ ಅಸುರ ದುರುಳರೆಲ್ಲರು ।
ಅವರವರು ಹೊಡೆದಾಡಿ ಹತರಾಗಿ ಹೋದರು ॥ ೨ ॥

ಹನುಮದಾದಿ ಸಾಧು ಜನರು ಅಪ್ಪಿಕೊಂಡು ।
ಕುಣಿಕುಣಿದಾಡಿದರು ಹರುಷದಿಂದ ॥
ಕ್ಷಣದಲ್ಲಿ ಪುರಂದರ ವಿಠಲರಾಯನು ।
ಕೊನೆಗೊಡೆಯನು ತಾನೊಬ್ಬನಾಗಿ ನಿಂತ ॥ ೩ ॥

# ಧನ್ಯನಾದೆನು ರಾಮ

ಧನ್ಯನಾದೆನು ರಾಮ ಧನ್ಯನಾದೆನು ।
ಧನ್ಯನಾದೆ ರಾಮ ನಿನ್ನ ಚರಣ ಕಮಲವನ್ನು ಕಂಡು ॥ ಪ ॥

ನಮ್ಮ ಮಾತೆ ಭೂಮಿದಾತೆ ಸೀತೆಯನ್ನು ಕೂಡಿಕೊಂಡು ।
ಹೋಗುವುದೆಲ್ಲಿಗೆ ರಾಮ ಸಾಗುವುದೆಲ್ಲಿಗೆ ॥ ೧ ॥

ತಮ್ಮನಾದ ಲಕ್ಷ್ಮಣನ ನಿರ್ಮಲದಿ ಕೂಡಿಕೊಂಡು ।
ಹೋಗುವುದೆಲ್ಲಿಗೆ ರಾಮ ಸಾಗುವುದೆಲ್ಲಿಗೆ ॥ ೨ ॥

ಅನುಜನಾದ ಭರತನಿಗೆ ಪಟ್ಟವನ್ನು ಕೊಟ್ಟು ನೀನು ।
ಹೋಗುವುದೆಲ್ಲಿಗೆ ರಾಮ ಸಾಗುವುದೆಲ್ಲಿಗೆ ॥ ೩ ॥

ಇಂದು ನಮ್ಮ ಮನೆಯಲಿದ್ದು ನಾಳೆ ಮುಂಜಾನೆ ಎದ್ದು ॥
ಹೋಗಬಹುದು ರಾಮ ಸಾಗಬಹುದು ॥ ೪ ॥

# ರಾಮ ರಾಮ ರಾಮ್ ರಾಮ್

ರಾಮ ರಾಮ ರಾಮ್ ರಾಮ್ ರಾಮ್ ।
ಜಯ ರಾಮ ರಾಮ ರಾಮ್ ರಾಮ್ ರಾಮ್ ॥ ಪ ॥

ದಶರಥ ನಂದನ ರಾಮ್ ರಾಮ್ ರಾಮ್ ।
ದಶಮುಖ ಮರ್ದನ ರಾಮ್ ರಾಮ್ ರಾಮ್ ॥
ಪಶುಪತಿ ರಂಜನ ರಾಮ್ ರಾಮ್ ರಾಮ್ ।
ಪಾಪ ವಿಮೋಚನ ರಾಮ್ ರಾಮ್ ರಾಮ್ ॥ ೧ ॥

ಅನಾಥ ರಕ್ಷಕ ರಾಮ್ ರಾಮ್ ರಾಮ್ ।
ಆಪತ್ಬಾಂಧವ ರಾಮ್ ರಾಮ್ ರಾಮ್ ॥
ಮೈಥಿಲಿ ನಂದನ ರಾಮ್ ರಾಮ್ ರಾಮ್ ।
ಮಾರುತಿ ವಂದಿತ ರಾಮ್ ರಾಮ್ ರಾಮ್ ॥ ೨ ॥

## ಶ್ರೀ ಕೃಷ್ಣ ಸ್ತೋತ್ರಂ

ಕರಾರವಿಂದೇನ ಪದಾರವಿಂದಂ ।
ಮುಖಾರವಿಂದೇನ ವಿನಿವೇಶಯಂತಮ್ ॥
ವಟಸ್ಯ ಪತ್ರಸ್ಯ ಪುಟೇ ಶಯಾನಂ ।
ಬಾಲಂ ಮುಕುಂದಂ ಮನಸಾ ಸ್ಮರಾಮಿ ॥
ವಸುದೇವ ಸುತಂ ದೇವಂ ಕಂಸ ಚಾಣೂರು ಮರ್ದನಮ್ ।
ದೇವಕೀಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಮ್ ॥

# ಕೃಷ್ಣ ಕೃಷ್ಣ ಬಾಲಕೃಷ್ಣ

ಕೃಷ್ಣ ಕೃಷ್ಣ ಬಾಲಕೃಷ್ಣ । ನಂದ ನಂದ ಗೋಪಿ ಕೃಷ್ಣ ।
ಗೋವರ್ಧನೋದ್ಧಾರ ಗೋಪಾಲನ ॥ ಪ ॥

ನವನೀತ ಚೋರ ನೀಲಮೇಘ ಶ್ಯಾಮ ।
ಕರುಣಾಕರಾ ಕೃಷ್ಣ ಮುರಳೀಧರ ॥ ೧ ॥

ಮಧುಸೂಧನಾ ಮೋಹನ.... ನಾರಾಯಣ ಕೇಶವ.... ।
ನಟವರಲಾಲ ಗಿರಿಧರ ಬಾಲ ॥
ಕರುಣಾಕರ ಕೃಷ್ಣ ಮುರಳೀಧರ ॥ ೨ ॥

ದಾಮೋದರಾ ವಿಠಲಾ । ಕೃಪಾಕರಾ ಮಾಧವ ।
ಅಭಯಪ್ರದಾ ಮುಕ್ತಿಪ್ರದಾ ॥
ಕರುಣಾಕರ ಕೃಷ್ಣ ಮುರಳೀಧರ ॥ ೩ ॥

# ಗೆಜ್ಜೆಯ ಕಟ್ಟಿ ಓಡಿ ಬಾ

ಗೆಜ್ಜೆಯ ಕಟ್ಟಿ ಓಡಿ ಓಡಿ ಬಾ ಬಾ ।
ಓ ಗೋಪಿಯ ಕೃಷ್ಣ ಆಡಿ ಓಡಿ ಬಾ ಬಾ ॥ ಪ ॥
ನಿನ್ನ ಪುಟ್ಟ ಪಾದ ತೋರಲೆಂದೆ ಬಾರೋ
ನಿನ್ನ ದಿವ್ಯ ನಾಮ ಪಾಡಿ ನಿಂತೆ ಬಾರೋ ॥ 1 ॥

ದೇವಕಿ ನಂದನ ಕಾನನ ವಾಸನೆ ।
ಕೇಶವಾ ಹರಿ ಮಾಧವ ॥
ಗೋಕುಲ ಬಾಲನೇ ಓಡಿ ಬಾರೋ ।
ಆನಂದ ಗೀತವಾ ಹಾಡಿ ಬಾರೋ ॥ 2 ॥

ಪಾಂಡವ ರಕ್ಷಕ ಪಾಪ ವಿನಾಶಕ ॥ ಕೇಶವಾ ॥
ಅರ್ಜುನ ಸಾರಥಿ ಅಜ್ಞಾನ ನಾಶಕ ॥ ಕೇಶವಾ ॥
ಗೀತ ಭೋಧಕ ಓಡಿ ಬಾರೋ ।
ಹೃದಯ ನಂದನ ಆಡಿ ಬಾರೋ ॥ 3 ॥

ಕಂಸ ವಿಮರ್ದನ ಕಾಳಿಂಗ ನರ್ತನ ॥ ಕೇಶವಾ ॥
ಆಶ್ರಿತ ವತ್ಸಲ ಆಪಾತ್‌ಬಾಂಧವ ॥ ಕೇಶವಾ ॥
ಓಂಕಾರ ನಾದವೇ ಓಡಿ ಬಾರೋ ।
ಆನಂದ ಗೀತವಾ ಹಾಡಿಬಾರೋ ॥ 4 ॥

# ಜಯ ಜಯ ಕೃಷ್ಣಾ

ಜಯ ಜಯ ಕೃಷ್ಣಾ ಮುಕುಂದಾ ಮುರಾರೇ ।
ಜೈ ಜೈ ಜೈ ಜೈ ಕೃಷ್ಣಾ ಮುಕುಂದಾ ಮುರಾರೇ ॥ ಪ ॥

ಜಯ ಜಯ ಕೃಷ್ಣಾ... ಜಯ ಜಯ ಮುಕುಂದಾ... ।
ಜಯ ಜಯ ಮುರಾರೇ... ಜೈ ಜೈ ಜೈ ಜೈ ಕೃಷ್ಣಾ ಮುಕುಂದಾ
ಮುರಾರೇ... ॥

ಜೈ ಜೈ ಜೈ ಜೈ ಜೈ ಜೈ ಜೈ ಜೈ ಕೃಷ್ಣಾ ಮುರಾರೇ ।
ಜೈ ಜೈ ಜೈ ಜೈ ಜೈ ಜೈ ಜೈ ಜೈ ಮುಕುಂದಾ ಮುರಾರೇ ॥

ಕರುಣಾ ಸಾಗರ ಕಮಲಾ ನಾಯಕ ।
ಕನಕಾಂಬರಧಾರೆ ಗೋಪಾಲ ॥ ೧ ॥

ಕಾಳಿಯ ಮರ್ಧನ ಕಂಸನಿಭೇಧನ ।
ಕುವಲಯದಳನಯನ ಗೋಪಾಲ ॥ ೨ ॥

ಗೋಪಿ ಜನಮನ ಮೋಹನ ವ್ಯಾಪಕ ।
ಗೋಪಿ ಮನೋಹಾರೆ ಗೋಪಾಲ ॥ ೩ ॥

# ಬೇಗ ಬಾರೋ ನೀಲ ಮೇಘ

ಬೇಗ ಬಾರೋ ಬೇಗ ಬಾರೋ ನೀಲ ಮೇಘ ವರ್ಣ ।
ಬೇಗ ಬಾರೋ ಬೇಗ ಬಾರೋ ಬೇಲಾಪುರ ಚೆನ್ನ ॥ ಪ ॥

ಇಂದಿರಾರಮಣ ಗೋವಿಂದ ಬೇಗ ಬಾರೋ ।
ನಂದನ ಕಂದ ಮುಕುಂದ ಬೇಗ ಬಾರೋ ॥ ೧ ॥

ರಂಗ ಉತ್ತುಂಗ ನರಸಿಂಗ ಬೇಗ ಬಾರೋ ॥
ಗಂಗೆಯ ಪಡೆದ ಪಾಂಡುರಂಗ ಬೇಗ ಬಾರೋ ॥ ೨ ॥

ಶುದ್ಧ ಅಘರುದ್ಧ ಅನಿರುದ್ಧ ಬೇಗ ಬಾರೋ ।
ಹದ್ದನೇರಿದ ಪ್ರಸಿದ್ಧ ಬೇಗ ಬಾರೊ ॥ ೩ ॥

ದೀರ ಉದಾರ ಗಂಭೀರ ಬೇಗ ಬಾರೋ ।
ಹಾರಾಲಂಕೃತ ರಘುವೀರ ಬೇಗ ಬಾರೋ ॥ ೪ ॥

ಅಯ್ಯ ಸಹಯ್ಯ ವಿಜಯ್ಯ ಬೇಗ ಬಾರೋ ।
ಉರಗದ್ರಿವಾಸ ಹಯವದನ ಬೇಗ ಬಾರೋ ॥ ೫ ॥

# ದಾನವ ಕದಳಿಯ

ದಾನವ ಕದಳಿಯ ಕಾನನ ಮುರಿಯುತ ।
ಆನೆ ಬಂತಾನೆ ಬಂತಾನೆ ಬಂತಮ್ಮಮ್ಮಾ ॥ ಪ ॥

ಗುಂಗುರು ಗುರುಳ ನೀಳಾಂಗ ಚೆಲುವಾನೆ ।
ಕಂಗೊಳಿಗೊಳೆವ ವ್ಯಾಘ್ರಾಂಗುಳಿ ಆನೆ ।
ಬಂಗಾರದಣು ಗಂಟೆ ಶೃಂಗಾರದಾನೆ ।
ಮಂಗಲ ತಿಲಕದ ರಂಗನೆಂಬಾನೆ ॥ ೧ ॥

ಕೆಳದಿ ಗೋಪಿಯರೊಳು ಗೆಳೆತನದಾನೆ ।
ಸುಲಭದಿಂದೊಲಿಯುವ ಎಳೆಮರಿ ಆನೆ ॥
ಘಲಿರು ಘಲಿರುರವದಿ ನಲಿದಾಡುವಾನೆ ।
ಮರೆತವರೆದೆ ಮ್ಯಾಲೆ ಕುಣಿದಾಡುವಾನೆ ॥ ೨ ॥

ನಳಿನಜಭವರಿಗೆ ನಿಲುಕದ ಆನೆ ।
ಒಲವಿಂದ ಭಕುತರ ಸಲಹುವ ಆನೆ ।
ಹಲವು ಕವಿಗಳಿಗೆ ಸಿಲುಕದ ಆನೆ ।
ಬಲಪ್ರಸನ್ನ ವೆಂಕಟ ನಿಲಯನೆಂಬಾನೆ ॥ ೩ ॥

# ಮೆಲ್ಲ ಮೆಲ್ಲನೆ ಬಂದನೆ

ಮೆಲ್ಲ ಮೆಲ್ಲ ಬಂದನೆ ಗೋಪಮಾಕೇಳೆ ಮೆಲ್ಲ ಮೆಲ್ಲ ಬಂದನೆ ।
ಮೆಲ್ಲ ಮೆಲ್ಲ ಬಂದು ಗಲ್ಲಕೆ ಗಲ್ಲ ಕೊಟ್ಟು ।
ನಿಲ್ಲದೆ ಓಡಿ ಪೋದ ಕಳ್ಳಗೆ ಬುದ್ಧಿ ಪೇಳೆ ॥ ಪ ॥

ಹಾಲು ಮಾರಲು ಪೋದರೆ ನಿನ್ನಯ ಕಂದ ಕಾಲಿಗಡ್ಡವ ಕಟ್ಟಿದ ।
ಹಾಲಾ ಸುಂಕವ ಬೇಡಿ ಕೋಲನ್ನೇ ಅಡ್ಡ ಕಟ್ಟಿ ॥
ಸೀರೆಯ ಸೆಳಕೊಂಡು ಹೇಳದೋಡಿದ ಕೃಷ್ಣಾ ॥ ೧ ॥

ಮೊಸರು ಮಾರಲು ಪೋದರೆ ನಿನ್ನಯ ಕಂದ ಹೆಸರು ಏನೆಂದು
ಕೇಳಿದ ।
ಹಸನಾದ ಹೆಣ್ಣ ಮೇಲೆ ಕುಸುಮವ ತಂದಿಕ್ಕಿ ॥
ಶಶಿಮುಖಿಯರನ್ನೆಲ್ಲಾ ವಶವ ಮಾಡಿದ ನೀತ ॥ ೨ ॥

ಹೋಗಿರೆ ರಂಗಯ್ಯನ ಮೇಲೆ ನೀವು ದೂರೇನು ಕೊಂಡು ಬಂದಿರಿ ।
ಯೋಗೀಶ ಪುರಂದರವಿಠಲ ರಾಯನ ॥
ಕೂಡಿಪಾಡಿರೆ ಬೇಗ ನಾಗವೇಣಿಯರೆಲ್ಲಾ ॥ ೩ ॥

# ರಂಗ ಕೊಳಲನೂದಲಾಗಿ

ರಂಗ ಕೊಳಲನೂದಲಾಗಿ ।
ಮಂಗಳಾಮಯವಾಯ್ತು ಧರೆಯು ॥ ಪ ॥
ಜಗಗಳುಂ ಚೈತನ್ಯ ಮರೆತು ।
ಅಂಗಪರವಶವಾದುವು ॥ ೧ ॥

ತಳಕ ತುದುಕವು ಕೇರಿ ಬಂದು ॥
ತುಳುಕಿ ಚೆಲ್ಲಾಡಿ ಮಿಂದಳು ಯಮುನೆ
ಮೇಲೆ ಮೇಲೋಡಿ ಮೇಗಾಳಿ ಬೀಸಿ
ಕಲ್ಲು ಕರಗಿ ನೀರಾದುವು ॥ ೨ ॥

ನಳಿನ ಚಂಪಕ ನಾಗ ಪುನಾಗ
ಪಟೀಲ ಸೇವಂತಿ ಕುಂದಬ ಕುಳವು
ಮಾಲತಿ ಜಾಜಿ ಪರಿಮಳಗೊಂಡಿತು
ನೀಲಾಂಗ ನಂಗ್ರಿಗೆ ಎರಗಿದವು ॥ ೩ ॥

ಅಚ್ಯುತನಾಕೃತಿ ನೋಡಲು ಸುರರಿಗೆ
ಆಶ್ಚರ್ಯ ವಾಯಿತು ನಾವು ಕಂಡೆವೆಂದು
ಮೆಚ್ಚಿ ಮುಕುಂದನ ಲೀಲಾ ವಿನೋದಕೆ
ಹೆಚ್ಚಿನ ಕುಸುಮವ ಸುರಿಸಿದರು ॥ ೪ ॥

ದಾಮ ವನಮಾಲೆ ಬಹಿರ್ಪೂಷಿತ
ಸ್ವಾಮಿ ಪುರಂದರ ವಿಠಲ ರಾಯನು
ನಾಮಕ್ರಿಯೆ ಮೇಘ ರಂಜಿನಿ ಪಾಡೆ
ಸಾಮ ವೇದ ನಮೋ ನಮೋ ॥ ೫ ॥

# ಜಯಜನಾರ್ಧನ

ಜಯಜನಾರ್ಧನ ಕೃಷ್ಣ ರಾಧಿಕಾಪತೇ ।
ಜನವಿಮೋಚನಾ ಕೃಷ್ಣ ಜನ್ಮ ಮೋಚನಾ ॥ ಪ ॥
ಗರುಡ ವಾಹನ ಕೃಷ್ಣ ಗೋಪಿಕಾಪತೇ ।
ನಯನಮೋಹನ ಕೃಷ್ಣ ನೀರಜೇಕ್ಷಣ ॥ ೧ ॥

ಸುಜನ ಬಾಂಧವ ಕೃಷ್ಣ ಸುಂದರಾಕೃತಿ ।
ಮದನ ಕೋಮಲ ಕೃಷ್ಣ ಮಾಧವಾಹರಿ ।
ವಸುಮತೀಪತಿ ಕೃಷ್ಣ ವಾಸವಾನುಜ ।
ವರಗುಣಾಕರ ಕೃಷ್ಣ ವೈಷ್ಣವಾಕೃತಿ ॥
ಸುರುಜಿರಾನನ ಕೃಷ್ಣ ಶೌರ್ಯವಾರಿಧಿ ।
ಮುರಹರಾವಿಭೋ ಕೃಷ್ಣ ಮುಕ್ತಿದಾಯಕ ॥
ವಿಮಲಪಾಲಕ ಕೃಷ್ಣ ವಲ್ಲಭಾಪತೇ ।
ಕಮಲಲೋಚನ ಕೃಷ್ಣ ಕಾಮ್ಯದಾಯಕ ॥ ೨ ॥

ವಿಮಲಗಾತ್ರನೇ ಕೃಷ್ಣ ಭಕ್ತವತ್ಸಲ ।
ಚರಣಪಲ್ಲವಂ ಕೃಷ್ಣ ಕರುಣಕೋಮಲಂ ॥
ಕುಬಲ ಈ ಕ್ಷಣ ಕೃಷ್ಣ ಕೋಮಲಾಕೃತಿ ।
ದವಪಾದಾಂಬುಜಂ ಕೃಷ್ಣ ಶರಣಾಮಾಶ್ರಯೇ ॥

ಭುವನನಾಯಕ ಕೃಷ್ಣ ಪಾವನಾಕೃತಿ ।
ಗುಣಗಣೋಜ್ವಲ ಕೃಷ್ಣ ನಳಿನಲೋಚನ ॥
ಪ್ರಣಯವಾರಿಧಿ ಕೃಷ್ಣ ಗುಣಗಣಾಕರ ।
ರಾಮಸೋದರ ಕೃಷ್ಣ ದೀನವತ್ಸಲಾ ॥ ೩ ॥

ಕಾಮಸುಂದರ ಕೃಷ್ಣ ಪಾಹಿಸರ್ವದಾ ।
ನರಕನಾಶನ ಕೃಷ್ಣ ನರಸಹಾಯಕ ॥
ದೇವಕೀಸುತ ಕೃಷ್ಣ ಕಾರುಣ್ಯಂಬುಧೆ ।
ಕಂಸನಾಶನ ಕೃಷ್ಣ ದ್ವಾರಕಾಸ್ಥಿತಾ ॥
ಪಾವನಾತ್ಮಕ ಕೃಷ್ಣ ದೇಹಿಮಂಗಳಂ ।
ಪದ್ಪದಾಂಬುಜಂ ಕೃಷ್ಣ ಶಾಮಕೋಮಲಂ ॥
ಭಕ್ತವತ್ಸಲಾ ಕೃಷ್ಣ ಕಾಮ್ಯದಾಯಕ ।
ಪಾಲಿಸೆನ್ನನೂ ಕೃಷ್ಣ ಶ್ರೀಹರಿ ನಮೋ ॥ ೪ ॥

ಭಕ್ತದಾಸನ ಕೃಷ್ಣ ಹರಸು ನೀ ಸದಾ ।
ಕಾದುನಿಂತೆನಾ ಕೃಷ್ಣ ಸಲಹೆಯಾ ವಿಭೋ ॥
ಗರುಡ ವಾಹನ ಕೃಷ್ಣ ಗೋಪಿಕಾಪತೇ ।
ನಯನಮೋಹನ ಕೃಷ್ಣ ನೀರಜೇಕ್ಷಣ ॥ ೫ ॥

# ಯಾದವ ನೀ ಬಾ

ಯಾದವ ನೀ ಬಾ ಯದುಕುಲ ನಂದನ ।
ಮಾಧವ ಮಧುಸೂದನ ಬಾರೊ ॥ ಪ ॥
ಸೋದರ ಮಾವನ ಮಧುರೆಲಿ ಮಡುಹಿದ ।
ಯಶೋಧೆ ಕಂದಾ ನೀ ಬಾರೊ ॥ ೧ ॥

ಶಂಖಚಕ್ರಗಳು ಕೈಯಲಿ ಹೊಳೆಯುತ ।
ಬಿಂಕದ ಗೋವಳ ನೀ ಬಾರೊ ॥
ಅಕಳಂಕ ಮಹಿಮನೆ ಆದಿನಾರಾಯಣ
ಬೇಕೆಂಬ ಭಕ್ತರಿಗೊಲಿ ಬಾರೊ ॥ ೨ ॥

ಕಾಲಂದುಗೆ ಗೆಜ್ಜೆ ಘಲುಘಲುರೆನುತಲಿ ।
ಝಣಝಣ ವೇಣುನಾದದಲಿ ॥
ಚಿಣ್ಣಿಕೋಲು ಚೆಂಡು ಬುಗುರಿಯನಾಡುತ ।
ಚಿಣ್ಣಗೋವಳರೊಡಗೂಡಿ ಬಾರೊ ॥ ೩ ॥

ಖಗವಾಹನನೆ ಬಗೆ ಬಗೆ ರೂಪನೆ ।
ನಗುಮೊಗದರಸನೆ ನೀ ಬಾರೊ ॥
ಜಗದೊಳು ನಿನ್ನಯ ಮಹಿಮೆಯ ಪೊಗಳುವೆ ।
ಪುರಂದರ ವಿಠಲ ನೀ ಬಾರೊ ॥ ೪ ॥

# ಪೋಪು ಪೋಗೋಣ

ಪೋಪು ಪೋಗೋಣ ಬಾರೋ ರಂಗ ।
ಕೂಡಿಯಮುನಾ ತೀರದಲ್ಲಿ ॥ ಪ ॥

ಜಾಹ್ನವಿಯ ತೀರವಂತೆ ಜನಕರಾಯನ ಕುವರಿಯಂತೆ ।
ಜಾನಕಿಯ ವಿವಾಹವಂತೆ ಜಾಣ ನೀನು ಬರಬೇಕಂತೆ ॥ ೧ ॥

ಕುಂಡಿನೀಯ ನಗರವಂತೆ ಭೀಷ್ಮಕನ ಕುವರಿಯಂತೆ ।
ಶಿಶುಪಾಲನ ಒಲ್ಲಳಂತೆ ನಿನಗೆ ಓಲೆ ಬರೆದಳಂತೆ ॥ ೨ ॥

ಪಾಂಡವರು ಕೌರವರೊಳು ಲೆತ್ತವಾಡಿ ಸೋತರಂತೆ ।
ರಾಜ್ಯವನ್ನು ಬಿಡಬೇಕಂತೆ ರಂಗವಿಠಲ ಬರಬೇಕಂತೆ ॥ ೩ ॥

# ದಯಾಮಾಡೋ ರಂಗಾ

ದಯಾಮಾಡೋ ದಯಾಮಾಡೋ ದಯಾಮಾಡೋ ರಂಗಾ ।
ದಯಾಮಾಡೋ ನಾ ನಿನ್ನ ದಾಸನು ಎಂದು ॥ ಪ ॥

ಹಲವು ಕಾಲದಿ ನಿನ್ನ ಹಂಬಲ ಎನಗೆ ।
ಒಲಿದು ಪಾಲಿಸಬೇಕು ವಾರಿಜನಾಭ ॥ ೧ ॥

ಇಹಪರ ಗತಿ ನೀನೇ ಇಂದಿರಾರಮಣ ।
ಸಹಾಯ ನಿನ್ನದೇ ತೋರು ಸರ್ವದಾ ಕರುಣಾ ॥ ೨ ॥

ಕರಿರಾಜವರದನೆ ಕಾಮಿತ ಫಲದ ।
ಪುರಂದರವಿಠಲನೆ ಹರಿಸಾರ್ವಭೌಮ ॥ ೩ ॥

# ಈ ಮುದ್ದು ಕೃಷ್ಣನ

ಈ ಮುದ್ದು ಕೃಷ್ಣನ ಕ್ಷಣದ ಸುಖವೆ ಸಾಕು ।
ಶ್ರೀ ಮಧ್ವಮುನಿಯ ಮನದ್ಯೆವ ಉಡುಪಿಯ ಕೃಷ್ಣನ ॥ ಪ ॥

ಚೆಲುವ ಚರಣದ್ವಂದ್ವ ಜಂಘೆ ಜಾನೂರು ಕಟಿ ।
ವಳಿಪಂಕ್ತಿ ಜಠರವಕ್ಷ ಕಂಬುಕಂದರದಿ ॥
ನಳಿತೋಳು ಮುದ್ದುಮುಖ ನಯನ ನಾಸಿಕ ಕರ್ಣ ।
ಸುಳಿಗುರುಳುಮಸ್ತಕದ ನಳಿನಭಾವನ ಸೊಬಗು ॥ ೧ ॥

ಕಿರು ಗೆಜ್ಜೆ ಕಡೆ ಪೆಂಡೆ ಗಂಟೆ ಕಟಿಸೂತ ।
ವರ ಹಾರ ಪದಕ ಶ್ರೀವತ್ಸ ಕೌಸ್ತುಭರತ್ನ ॥
ಉರುಮುದ್ರೆ ಕಂಕಣಾಂಗಣ ಕುಂಡಲ ಪ್ರಭೆಯ ।
ಸಿರಿನಾಮ ಮಕುಟ ನಾಸಿಕದ ವರಮಣಿಯ ॥ ೨ ॥

ಸಕಲ ದೇವೋತ್ತಮನೆ ಸರ್ವಗುಣ ಪೂರ್ಣನೆ ।
ಅಕಳಂಕ ಅಖಿಳಾಗಮಸ್ತುತನೆ ಅಪ್ರಾಕೃತನೆ ॥
ಅಖಿಳ ಜೀವೋತ್ತಮರ ಭಿನ್ನ ಹಯವದನೆ ।
ಮುಕುರ ಕಡೆಗೋಲು ನೇಣುಗಳ ಪಿಡಿದಿಪ್ಪನೆ ॥ ೩ ॥

# ಬಾರಯ್ಯ ಬಾರೋ

ಬಾರಯ್ಯ ಬಾರೋ ಬಾಲ ಗೋಪಾಲ ।
ನಿನ್ನ ಬಾಲರ ಬಾಯಿಂದ ಹಾಡು ಕೇಳಯ್ಯ ॥ ಪ ॥

ತಟ್ಟೆ ತುಂಬಾ ಹಾಲು ಉಂಟು । ಅದರ ಹೊರತು ಬೆಣ್ಣೆ ಉಂಟು ।
ಹೊಟ್ಟೆ ತುಂಬಾ ತಿಂದು ಹೋಗಯ್ಯ ॥ ೧ ॥

ಮಾವ ಕಂಸನನ್ನು ಕೊಂದೆ । ಬಾಲ್ಯದಲ್ಲಿ ಮಣ್ಣು ತಿಂದೆ ।
ಬಾಯಲ್ಲಿ ಜಗವ ತೋರಿದೆ ॥ ೨ ॥

ವೇಣು ರಾಗ ತೋರೋ ಬೇಗ । ಕಾಳಿಂಗಕ್ಕೆ ಹಾರೋ ಬೇಗ ।
ಕಾಳಿಂಗನ ಮೆಟ್ಟಿ ಕುಣಿಯೋ ॥ ೩ ॥

# ಮಧುಕರ ವೃತ್ತಿ ಎನ್ನದು

ಮಧುಕರ ವೃತ್ತಿ ಎನ್ನದು ಬಲು ಚೆನ್ನದು ।
ಪದುಮನಾಭನ ಪಾದ ಪದುಮ ಮಧುಪವೆಂಬ ॥ ಪ ॥

ಕಾಲಿಗೆ ಗೆಜ್ಜೆ ಕಟ್ಟಿ ನೀಲವರ್ಣನ ಗುಣ ।
ಆಲಾಪಿಸುತ ಬಲು ಓಲಗ ಮಾಡುವಂಥ ॥ ೧ ॥

ರಂಗನಾಥನ ಗುಣ ಹಿಂಗದೆ ಪಾಡುತ್ತ ।
ಶೃಂಗಾರ ನೋಡುತ್ತ ಕಂಗಳಾನಂದವೆಂಬ ॥ ೨ ॥

ಇಂದಿರಾಪತಿ ಪುರಂದರವಿಠಲನಲ್ಲಿ ।
ಚೆಂದದ ಭಕ್ತಿಯಿಂದಾನಂದವ ಪಡುವಂಥ ॥ ೩ ॥

# ನೋಡು ನೋಡು ಗೋಪಿ

ನೋಡು ನೋಡು ಗೋಪಿ ನಿನ್ನ ಮಗನ ಲೂಟಿಯ ।
ಮಾಡುತಾನೆ ಮನೆಗೆ ಬಂದು ಬಹಳ ಚೇಷ್ಟೆಯಾ ॥
ನಿನ್ನ ಮಗನ ಲೂಟಿಯಾ । ಬಹಳ ಚೇಷ್ಟೆಯಾ ॥ ಪ ॥

ಮಾನಿನೆಯರೊಳಗೆ ಮಹಾ ಕಾಟವೇನಿದೋ ।
ಮಾನವನ್ನು ಕಳೆದ ಪರಿ ಹೇಳತೀರದು ॥
ಮಹಾ ಕಾಟವೇನಿದೋ । ಹೇಳತೀರದು ॥ ೧ ॥

ಹಿಡಿದ ಸೆರಗ ಬಿಡಲು ಇನ್ನೇನು ಮಾಡಲೇ ।
ತಡೆಯಲಾರೆ ಅಮ್ಮಾ ಕೇಳು ಇವನ ಹಾವಲೇ ॥
ಇನ್ನೇನು ಮಾಡಲೇ । ಇವನ ಹಾವಳಿ ॥ ೨ ॥

ಇಂದು ಚೆನ್ನ ಕೇಶವ ಶ್ರೀ ರಂಗ ಧಾಮನ ।
ಭಿನ್ನನೆಯ ಮಾತ ಕೇಳಿ ಬಿಡುವ ಪುರುಷನ ॥
ಶ್ರೀ ರಂಗ ಧಾಮನ ಬಿಡುವ ಪುರುಷನ ॥ ೩ ॥

# ಪಿಳ್ಳಂಗೋವಿಯ ಚೆಲ್ವ ಕೃಷ್ಣನ

ಪಿಳ್ಳಂಗೋವಿಯ ಚೆಲ್ವ ಕೃಷ್ಣನ ಎಲ್ಲಿ ನೋಡಿದಿರಿ ।
ರಂಗನ ಎಲ್ಲಿ ನೊಡಿದಿರಿ ।
ಎಲ್ಲಿ ನೋಡಿದರಲ್ಲಿ ತಾನಿಲ್ಲ ದಿಲ್ಲವೆಂದು ಬಲ್ಲಜಾಣರೆ ॥ ಪ ॥

ನಂದಗೋಪನ ಮಂದಿರಂಗಳ ಸಂದುಗೊಂದಿನಲಿ ।
ಚೆಂದಚೆಂದದ ಗೋಪಬಾಲರ ವೃಂದವೃಂದದಲಿ ।
ಸುಂದರಾಂಗದ ಸುಂದರೀಯರ ಹಿಂದುಮುಂದಿನಲಿ ॥
ಅಂದದಾಕಳ ಕಂದಕರುಗಳ ಮಂದೆ ಮಂದೆಯಲಿ ॥ ೧ ॥

ಶ್ರೀ ಗುರೂಕ್ತ ಸದಾ ಮಂಗಳ ಯೋಗ ಯೋಗದಲಿ ।
ಆಗಮಾರ್ಥದೊಳಗೆ ಮಾಡುವ ಯಾಗ ಯಾಗದಲಿ ॥
ಶ್ರೀಗೆ ಭಾಗ್ಯನಾಗಿ ವರ್ತಿಪ ಭೋಗ ಭೋಗದಲಿ ।
ಭಾಗವತರು ಸದಾ ಬಾಗಿ ಪಾಡುವ ರಾಗ ರಾಗದಲಿ ॥ ೨ ॥

ಈ ಚರಾಚರದೊಳಗೆ ಅಜಂಡದ ಆಚೆ ಈಚೆಯಲಿ ।
ಖೇಚರೇಂದ್ರನ ಸುತನ ರಥದ ಚೌಕ ಪೀಠದಲಿ ॥
ನಾಚದೆ ಮಾಧವ ಕೇಶವ ಎಂಬ ವಾಚಕಂಗಳಲಿ ।
ಮೀಚುಕೊಂಡದ ಪುರಂದರವಿಠಲನ ಲೋಚನಾಗ್ರದಲಿ ॥ ೩ ॥

# ಹುಟ್ಟಿದೇಳು ದಿವಸದಲಿ

ಹುಟ್ಟಿದೇಳು ದಿವಸದಲೀ ದುಷ್ಟ ಪೂತನಿಯ ಕೊಂದೆ ॥ ಪ ॥
ಮುಟ್ಟಿ ವಿಷದ ಮೊಲೆಯುಂಡ ಕಾರಣ ॥
ದೃಷ್ಟಿ ತಾಕಿತೆ ರಂಗಯ್ಯ । ನಿನಗೆ ರಂಗಯ್ಯ ।
ದೃಷ್ಟಿ ತಾಕಿತೆ ರಂಗಯ್ಯ ॥
ಅಳುವುದ್ಯಾತಕೋ ರಂಗ, ಅಪರಂಜಿತಾ ಗುಮ್ಮ ॥ ೧ ॥

ಬಾಲಕತನದಿ ಗೋಪಾಲಕರೊಡಗೂಡಿ ।
ಕಾಳಿಂದಿ ಮಡುವನು ಕಲಕಿದ ಕಾರಣ ॥
ಕಾಲು ಉಳುಕಿತೆ ರಂಗಯ್ಯ । ನಿನಗೆ ರಂಗಯ್ಯ ।
ಕಾಲು ಉಳುಕಿತೆ ರಂಗಯ್ಯ ॥
ಅಳುವುದ್ಯಾತಕೋ ರಂಗ, ಅಪರಂಜಿತಾ ಗುಮ್ಮ ॥ ೨ ॥

ವಸುದೇವ ಸುತನಾಗಿ ಅಸುರರೆಲ್ಲರ ಮಡುಹಿ ।
ಹೆಸರಿನ ಮಲ್ಲರ ಮಡುಹಿದ ಕಾರಣ ॥
ಪಿಸುರು ತಾಕಿತೇ ರಂಗಯ್ಯ । ನಿನಗೆ ರಂಗಯ್ಯ ।
ಅಳುವುದ್ಯಾತಕೋ ರಂಗ, ಅಪರಂಜಿತಾ ಗುಮ್ಮ ॥ ೩ ॥

ಶರಣು ವೇಲಾಪುರದ ಚೆಲುವ ಚೆನ್ನಿಗರಾಯ ।
ಪರಿಪರಿ ವಿಧದಿಂದ ಶರಣರ ಪೊರೆಯುವ ॥
ವರದ ಪುರಂದರ ವಿಠ್ಠಲ । ರಾಯ ವಿಠ್ಠಲ ।
ವರದ ಪುರಂದರ ವಿಠ್ಠಲ
ಅಳುವುದ್ಯಾತಕೋ ರಂಗ, ಅಪರಂಜಿತಾ ಗುಮ್ಮ ॥ ೪ ॥

# ಕಂಡು ಕಂಡು ನೀಯೆನ್ನ

ಕಂಡು ಕಂಡು ನೀಯೆನ್ನ ಕೈ ಬಿಡುವರೇ ಕೃಷ್ಣ ।
ಪುಂಡರೀಕಾಕ್ಷ ಶ್ರೀ ಪುರುಷೋತ್ತಮ ॥ ಪ ॥

ಬಂಧುಗಳು ಎನಗಿಲ್ಲ ಬದುಕಿನಲಿ ಸುಖವಿಲ್ಲ ।
ನಿಂದೆಯಲಿ ನೊಂದೆನ್ನೈ ನೀರಜಾಕ್ಷ ॥
ತಂದೆ ತಾಯಿಯು ನೀನೆ ಬಂಧು ಬಳಗವು ನೀನೆ ।
ಎಂದೆಂದಿಗೂ ನಿನ್ನ ನಂಬಿದೆನೋ ಕೃಷ್ಣ ॥ ೧ ॥

ಕ್ಷಣವೊಂದು ಯುಗವಾಗಿ ತೃಣಕ್ಕಿಂತ ಕಡೆಯಾಗಿ ।
ಎಣಿಸಲಾರದ ಭವದಿ ನೊಂದೆನ್ನೈ ॥
ಸನಕಾದಿ ಮುನಿವಂದ್ಯ ವನಜಸಂಭವ ಜನಕ ।
ಫಣಿಶಾಹಿ ಪ್ರಹ್ಲಾದಗೊಲಿದ ಶ್ರೀಕೃಷ್ಣ ॥ ೨ ॥

ಭಕ್ತವತ್ಸಲನೆಂಬ ಬಿರುದು ಪೊತ್ತಿಹ ಮೇಲೆ ।
ಭಕ್ತರಾಧೀನರಾಗಿರಬೇಡವೇ ॥
ಮುಕ್ತಿದಾಯಕ ಹೊನ್ನೂರು ಪುರುವಾಸ ।
ಶಕ್ತಗುರು ಶ್ರೀ ಪುರಂದರವಿಠಲ ॥ ೩ ॥

# ಗುಮ್ಮನ ಕರೆಯದಿರೆ

ಗುಮ್ಮನ ಕರೆಯದಿರೇ ಅಮ್ಮಾ ನೀನು ।
ಸುಮ್ಮನೆ ಇದ್ದೇನು ಅಮ್ಮಿಯ ಬೇಡೆನು ।
ಮಮ್ಮು ಉಣ್ಣುತ್ತೇನೆ ಅಮ್ಮ ಅಳುವುದಿಲ್ಲ ॥ ಪ ॥

ಹೆಣ್ಣುಗಳಿರುವಲ್ಲಿಗೆ ಪೋಗಿ ಅವರ ಕಣ್ಣ ಮುಚ್ಚುವುದಿಲ್ಲ ।
ಚೆಣ್ಣರ ಬಡಿಯೆನು ಅಣ್ಣನ ಬೈಯೆನು ।
ಬೆಣ್ಣೆಯ ಬೇಡೆನು ಮಣ್ಣು ತಿನ್ನುವುದಿಲ್ಲ ॥ ೧ ॥

ಬಾವಿಗೆ ಪೋಗೆ ಕಾಣೆ ಅಮ್ಮ ನಾನು ಹಾವಿನೊಳಾಡೆ ಕಾಣೆ ।
ಹಾವಿನ ಮೊಲೆಯೊಡೆ ಕರುಗಳ ಬಿಡೆ ನೋಡೆ ।
ದೇವರಂತೆ ಒಂದು ಠಾವಿಲಿ ಕೂಡುವೆ ॥ ೨ ॥

ಮಗನ ಮಾತು ಕೇಳುತ ಗೋಪಿದೇವಿ ಮುಗುಳು ನಗೆಯ ನಗುತ ।
ಜಗದೊಡೆಯನ ಶ್ರೀ ಪುರಂದರವಿಠಲನ ।
ಬಿಗಿದಪ್ಪಿಕೊಂಡಳು ಮೋಹದಿಂದಳಾಗ ॥ ೩ ॥

# ಕಂಡೆ ನಾ ಗೋವಿಂದನಾ

ಕಂಡೆ ನಾ ಗೋವಿಂದನಾ । ಗೋವಿಂದನಾ ।
ಪುಂಡರೀಕಾಕ್ಷ ಪಾಂಡವಪಕ್ಷ ಕೃಷ್ಣನ ॥ ಪ ॥

ಕೇಶವ ನಾರಾಯಣ ಶ್ರೀಕೃಷ್ಣನ ।
ವಾಸುದೇವ ಅಚ್ಯುತಾಅನಂತನ ॥
ಸಾಸಿರ ನಾಮದ ಶ್ರೀಹೃಷೀಕೇಶನ ।
ಶೇಷಶಯನ ನಮ್ಮ ವಸುದೇವಸುತನ ॥ ೧ ॥

ಮಾಧವ ಮಧುಸೂತನ ತ್ರಿವಿಕ್ರಮ ।
ಯಾದವಕುಲವಂದ್ಯನ ॥
ವೇದಾಂತವೇದ್ಯನ ಇಂದಿರಾರಮಣನ ।
ಆದಿಮೂರುತಿ ಪ್ರಹ್ಲಾದವರದನ ॥ ೨ ॥

ಪುರುಷೋತ್ತಮ ನರಹರಿ ಶ್ರೀಕೃಷ್ಣನ ।
ಶರಣಾಗತ ಜನ ರಕ್ಷಕನ ॥
ಕರುಣಾಕರ ನಮ್ಮ ಪುರಂದರವಿಠಲನ ।
ನೆರೆ ನಂಬಿದೆನು ಬೇಲೂರ ಚೆನ್ನಿಗನ ॥ ೩ ॥

# ದೇವಕಿ ಕಂದ ಮುಕುಂದ

ದೇವಕಿ ಕಂದ ಮುಕುಂದ ಕೃಷ್ಣಾ । ದೇವಕಿ ಕಂದ ಮುಕುಂದ ॥
ಹಾಲ್‌ಬೆಣ್ಣೆ ಕದ್ದ ಮೊಸರೆಲ್ಲ ಮೆದ್ದ ।
ತಾಯಿಗೆ ಬಾಯಲ್ಲಿ ಜಗವ ತೋರಿದ ॥ ಪ ॥

ನಿಗಮೋದ್ಧಾರ ನವನೀತ ಚೋರ ।
ಖಗಪತಿ ವಾಹನ ಜಗದೋದ್ಧಾರ ॥ ೧ ॥

ಕಂಸ ಮರ್ಧನ ಕೌಸ್ತುಭಾ ಭರಣ ।
ಹಂಸವಾಹನ ಪೂಜಿತ ಚರಣ ॥ ೨ ॥

ವರವೇಲಾಪುರ ಚೆನ್ನಪ್ರಸನ್ನ ।
ಪುರಂದರವಿಠಲನ ಗುಣಪೂರ್ಣ ॥ ೩ ॥

# ನಂದಗೋಪ ನಂದನ

ನಂದಗೋಪ ನಂದನ ನಾದಲೋಲ ।
ಬೃಂದಾವನ ಮಂದಿರ ಚಂದಿರ ॥
ರಾಸಲೀಲೆ ನರ್ತನ ನಾದಲೋಲ ಮೋಹನ ॥ ಪ ॥

ವೇಣುಗಾನದಿಂದ ಮೋದ ತಂದ ಚೇತನ ।
ಗೋಪ ಗೋಪಿ ಮನವ ಗೆದ್ದ ಪರಮ ಪಾವನ ॥
ನೀಲ ಮೇಘ ಸುಂದರ ವೇಣು ಮಾಧವ ।
ಹಾರ ಪದಕ ಕಂಕಣ ಸುಂದರ ॥
ರಾಸಲೀಲೆ ನರ್ತನ ನಾದಲೋಲ ಮೋಹನ ॥ ೧ ॥

ಕೊರಳ ತುಂಬ ತುಳಸಿ ಮಾಲೆ ಗಂಧ ಘಮ ಘಮ ।
ಹೆರಳಲಿಟ್ಟ ನವಿಲ ಗರಿಯ ಸೊಬಗು ಸಂಭ್ರಮ ॥
ರಾಧಿಕ ಮನೋಹರ ವಾಸುದೇವ ।
ಪೀತಾಂಬರ ಸುಂದರ ಚಂದಿರ ॥
ರಾಸಲೀಲೆ ನರ್ತನ ನಾದಲೋಲ ಮೋಹನ ॥ ೨ ॥

# ಎಲ್ಲಿರುವೆ ಮುದ್ದು ಕೃಷ್ಣ

ಎಲ್ಲಿರುವೆ ಮುದ್ದು ಕೃಷ್ಣ ಬಾ. ಬಾ. ಬಾ. ।
ನಿನ್ನನೊಮ್ಮೆ ನೋಡಬೇಕು ಬಾ. ಬಾ. ಬಾ. ॥ ಪ ॥

ಕೊಳಲಗಾನ ಮಾಡಿಕೊಂಡು ಬಾ. ಬಾ. ಬಾ. ।
ಗೆಳೆಯರೊಡನೆ ಕೂಡಿಕೊಂಡು ಬಾ. ಬಾ. ಬಾ. ॥ ೧ ॥

ಕದಿಯ ಹೋಗ ಬೇಡ ಸಾಕು ಬಾ. ಬಾ. ಬಾ. ।
ನಿನಗೆ ತಿನ್ನಲೇನು ಬೇಕು ಬಾ. ಬಾ. ಬಾ. ॥ ೨ ॥

ಕೈಯ ಮುಗಿದು ಕರೆಯುತ್ತಿರುವೆ ಬಾ. ಬಾ. ಬಾ. ।
ಹಾಲು ಮೊಸರು ಬೆಣ್ಣೆ ಕೊಡುವೆ ಬಾ. ಬಾ. ಬಾ. ॥ ೩ ॥

ದಿವ್ಯ ವರವನಿತ್ತು ಹರಸು ಬಾ. ಬಾ. ಬಾ. ।
ಎನ್ನ ಆತ್ಮದಲ್ಲಿ ನೆಲೆಸು ಬಾ. ಬಾ. ಬಾ. ॥ ೪ ॥

# ನಾನೇ ಎಂಬ ಭಾವ

ನಾನೇ ಎಂಬ ಭಾವ ನಾಶವಾಯಿತು ।
ನೀನೇ ಎಂಬ ನೀತಿ ನಿಜವಾಯಿತು । ಶ್ರೀ ಕೃಷ್ಣಾ ॥ ಪ ॥

ಹೇಳಿದ ನೀತಿಯ ಕೇಳದೆ ಹೋದೆ ।
ಕೇಳಿ ನಡೆಯದೆ ಅವಿವೇಕಿಯಾದೆ ॥ ೧ ॥

ಎಲ್ಲವೂ ನಾನು ನನ್ನದು ಎಂದು ನಂಬಿದೆನಯ್ಯ ।
ಶಾಶ್ವತ ಸುಖವು ಎಲ್ಲಾ ಸುಳ್ಳು ಎಲ್ಲಾವು ಸುಳ್ಳು ॥
ತಿಳಿದೆನು ಇಂದು ನಾನು ಮಿಥ್ಯ ನೀನು ಸತ್ಯ ॥ ೨ ॥

ಹೆಂಡತಿ ಮಕ್ಕಳು ಬಂಧು ಬಳಗ ।
ರಾಗ ಭೋಗಗಳ ವೈಭೋಗ ॥
ಕಾಲನು ಬಂದು ಬಾ ಎಂದಾಗ ।
ಎಲ್ಲವು ಶೂನ್ಯ ಚಿತೆ ಏರುವಾಗ ।
ಎಲ್ಲಾ ಶೂನ್ಯ ಎಲ್ಲಾವೂ ಶೂನ್ಯ ॥
ಉಳಿಯುವುದೊಂದೇ ದಾನ ಧರ್ಮ ತಂದ ಪುಣ್ಯ ॥ ೩ ॥

# ಈ ಪರಿಯ ಸೊಬಗಾವ

ಈ ಪರಿಯ ಸೊಬಗಾವ ದೇವರಲಿ ಕಾಣೆ ।
ಗೋಪೀಜನಪ್ರಿಯ ಗೋಪಾಲಗಲ್ಲದೆ ॥ ಪ ॥

ದೊರೆಯತನದಲ್ಲಿ ನೋಡೆ ಧರಣಿದೇವಿಗೆ ರಮಣ ।
ಸಿರಿಯತನದಲಿ ನೋಡೆ ಶ್ರೀಕಾಂತನು ॥
ಹಿರಿಯತನದಲಿ ನೋಡೆ ಸರಸಿಜನೋದ್ಭವನಯ್ಯ ।
ಗುರುವುತನದಲಿ ನೋಡೆ ಜಗದಾದಿ ಗುರುವು ॥ ೧ ॥

ಪಾವನತ್ವದಿ ನೋಡೆ ಅಮರಗಂಗಾಜನಕ ।
ದೇವತ್ವದಲಿ ನೋಡೆ ದಿವಿಜರೊಡೆಯ ॥
ಲಾವಣ್ಯದಲ್ಲಿ ನೋಡೆ ಲೋಕಮೋಹಕನಯ್ಯ ।
ಆವ ಧೈರ್ಯದಿ ನೋಡೆ ಅಸುರಾಂತಕ ॥ ೨ ॥

ಗಗನದಲಿ ಸಂಚರಿಪ ಗರುಡದೇವನೆ ತುರಗ ।
ಜಗತೀಧರ ಶೇಷ ಪರಿಯಂಕ ಶಯನ ॥
ನಿಗಮಗೋಚರ ಪುರಂದರವಿಠಲಗಲ್ಲದೆ ।
ಮಿಗಿಲಾಗಿ ದೈವಗಳಿಗೀ ಭಾಗ್ಯವುಂಟೆ ॥ ೩ ॥

# ತಲೆಯ ಮೆಟ್ಟಿ ನಾಟ್ಯವಾಡಿದ

ತಲೆಯ ಮೆಟ್ಟಿ ನಾಟ್ಯವಾಡಿದ ಕೃಷ್ಣಾ ।
ತಲೆಯ ಮೆಟ್ಟಿ ನಾಟ್ಯವಾಡಿದ ॥
ಕಾಳಿಂಗನ ತಲೆಯ ಮೆಟ್ಟಿ ನಾಟ್ಯವಾಡಿದ ॥ ಪ ॥

ಕೊಳಲೊಂದು ಗೆಜ್ಜೆ ಕೊಳಲನ್ನೇ ಪಿಡಿಯುತ ।
ನಲಿಯುತಲಿ ಪಾಡುತಲಿ ಕೊಳಲನ್ನೇ ಪಿಡಿಯುತ ॥ ೧ ॥

ಯಮುನಾ ತೀರದಲಿ ಮಿಂದು ಅಮಿತಾಜಿವವ ಕೊಂದು ।
ರಮಿಸುವನ ಫನಿವರನ ಯಮುನಾ ತೀರದಲಿ ಮಿಂದು ॥ ೨ ॥

ಗುರುಮಲ್ಲಿ ನಾಥನು ವರದ ಶ್ರೀ ಕೃಷ್ಣನು ।
ಕುರುಹುಗಳ ಕರುಣಿಸುತ ವರದ ಶ್ರೀ ಕೃಷ್ಣನು ॥ ೩ ॥

# ಲಾಲಿಸಿದಳು ಮಗನ

ಲಾಲಿಸಿದಳು ಮಗನ ಯಶೋದೆ ।
ಲಾಲಿಸಿದಳು ಮಗನ ॥ ಪ ॥

ಅರಳೆಲೆ ಮಾಗಾಯಿ ಬೆರಳಿಗುಂಗುರವಿಟ್ಟು ।
ತರಳನ ಮೈಸಿರಿ ತರುಣಿ ನೋಡುತ ಹಿಗ್ಗಿ ॥ ೧ ॥

ಬಾಲಕನೆ ಕೆನೆ ಹಾಲು ಮೊಸರನೀವೆ ।
ಲೀಲೆಯಿಂದಲಿ ಎನ್ನ ತೋಳಮೇಲ್ಮಲಗೆಂದು ॥ ೨ ॥

ಮುಗುಳು ನಗೆಯಿಂದ ಮುದ್ದು ತಾ ತಾರೆಂದು ।
ಜಗದೊಡೆಯನ ಶ್ರೀ ಪುರಂದರವಿಠಲನ ॥ ೩ ॥

# ಕೃಷ್ಣಾ ನೀ ಬೇಗನೇ ಬಾರೋ

ಕೃಷ್ಣಾ ನೀ ಬೇಗನೇ ಬಾರೋ ।
ಬೇಗನೇ ಬಾರೋ ಮುಖವನೆ ತೋರೊ ॥ ಪ ॥

ಕಾಶಿ ಪೀತಾಂಬರ ಕೈಯಲ್ಲಿ ಕೊಳಲು ।
ಪೂಸಿದ ಶ್ರೀಗಂಧ ಮೈಯೊಳಗಮ್ಮ ॥ ೧ ॥

ಉಡಿಯಲಿ ಉಡುಗೆಜ್ಜೆ ಬೆರಳಲಿ ಉಂಗುರ ।
ಕೊರಳಲಿ ಹಾಕಿದ ವೈಜಯಂತಿ ಮಾಲೆ ॥ ೨ ॥

ತಾಯಿಗೆ ಬಾಯೊಳು ಜಗವನೆ ತೋರಿದ ।
ಜಗದೋದ್ಧಾರಕ ನಮ್ಮ ಉಡುಪಿಯ ಶ್ರೀಕೃಷ್ಣ ॥ ೩ ॥

# ಯಾರೇ ರಂಗನ ಕರೆಯ ಬಂದವರು

ಯಾರೇ ರಂಗನ ಕರೆಯ ಬಂದವರು ।
ಯಾರೇ ಕೃಷ್ಣನ ಕರೆಯ ಬಂದವರು ॥ ಪ ॥
ಯಾರೇ ರಂಗನ । ಯಾರೇ ಕೃಷ್ಣನ । ಕರೆಯ ಬಂದವರು ॥

ಗೋಪಾಲಕೃಷ್ಣನ ಪಾಪವಿನಾಶನ ।
ಈ ಪರಿಯಿಂದಲೀ ಕರೆಯ ಬಂದವರು ॥ ೧ ॥

ವೇಣು ವಿನೋದನ ಪ್ರಾಣ ಪ್ರಿಯನ ।
ಜಾಣೆಯರರಸನ ಕರೆಯ ಬಂದವರು ॥ ೧ ॥

ಕರಿರಾಜವರದನ ಪರಮ ಪುರುಷನ ।
ಪುರಂದರವಿಠಲನ ಕರೆಯ ಬಂದವರು ॥ ೩ ॥

# ಭಕುತ ಜನ ಮುಂದೆ

ಭಕುತ ಜನ ಮುಂದೆ ನೀನವರ ಹಿಂದೆ ।
ಯುಕುತಿ ಕೈ ಗೊಳ್ಳದೋಗ ಯಾಗಧಾದರನೆ ॥ ಪ ॥

ಕಟ್ಟೆರಡು ಬಿಗಿದು ನದಿಸೂಸಿ ಹರಿಯುತಿರಲು ।
ಕಟ್ಟಳೆಯಲಿ ಹರಿಗೋಲು ಹಾಕಿ ॥
ನೆಟ್ಟನಾಚೆಗೀಚೆಗೆ ಹೋಗಿ ಬರುವಾಗ ।
ಹುಟ್ಟು ಮುಂದಲ್ಲದೆ ಹರಿಗೋಲು ಮುಂದೇಯೇ ॥ ೧ ॥

ಕಾಳೆ ಹೆಗ್ಗಾಳೆ ದುಂದುಭಿ ಭೇರಿ ತಮ್ಮಟೆ ।
ನಿಸ್ಸಾಳೆ ನಾನಾ ವಾದ್ಯ ಘೋಷಂಗಳು ॥
ಸಾಲಾಗಿ ಬಳಿವಿಡಿದು ಸಂಭ್ರಮದಿ ಬರುವಾಗ ।
ಆಳು ಮುಂದಲ್ಲದೆ ಅರಸು ತಾ ಮುಂದೇಯೇ ॥ ೨ ॥

ಉತ್ಸಹದಿ ವಾಹನವು ಬೀದಿಯಲು ಮೆರೆಯುತಿರಲು ।
ಸತ್ಸಂಗತಿಗೆ ಹರಿದಾಸರೆಲ್ಲಾ ॥
ಭಕ್ತವತ್ಸಲ ಸಿರಿ ವಿಜಯ ವಿಠಲಾ ವೆಂಕಟಾಧೀಶ ।
ವತ್ಸಮುಂದಲ್ಲದೆ ಧೇನುತಾ ಮುಂದೆಯೇ ॥ ೩ ॥

## ಶ್ರೀ ವಿಷ್ಣು ಸ್ತೋತ್ರಂ

**ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ**
**ವಿಶ್ವಾಕಾರಂ ಗಗನಸದೃಶಂ ಮೇಘವರ್ಣಂ ಶುಭಾಂಗಮ್ ।**
**ಲಕ್ಷ್ಮೀಕಾಂತಂ ಕಮಲನಯನಂ ಯೋಗಿಹೃದ್ಧ್ಯಾನಗಮ್ಯಂ**
**ವಂದೇ ವಿಷ್ಣುಂ ಭವಭಯಹರಂ ಸರ್ವಲೋಕೈಕ ನಾಥಮ್ ॥**

# ಹರಿ ಕುಣಿದಾ ನಮ್ಮ

ಹರಿ ಕುಣಿದಾ ನಮ್ಮ ಹರಿ ಕುಣಿದ ॥ ಪ ॥
ಅಕಳಂಕಚರಿತ ಮಕರಕುಂಡಲಧರ ।
ಸಕಲರ ಪಾಲಿಪ ಹರಿ ಕುಣಿದ ॥ ಪ ॥

ಅರಳೆಲೆ ಮಾಗಾಯಿ ಕೊರಳ ಮುತ್ತಿನ ಸರ ।
ತರಳೆಯ ರೊಡಗೂಡಿ ಹರಿ ಕುಣಿದ ॥ ೧ ॥

ಅಂದಿಗೆ ಪಾಡಗ ಬಿಂದಲಿ ಬಾಪುರಿ ।
ಚೆಂದದಿ ನಲಿಯುತ್ತ ಹರಿ ಕುಣಿದ ॥ ೨ ॥

ಉಟ್ಟ ಪಟ್ಟೆಯ ದಟ್ಟಿ ಇಟ್ಟ ಕಾಂಚಿಯ ಧಾಮ ।
ದಿಟ್ಟ ಮಲ್ಲರ ಗಂಡ ಹರಿ ಕುಣಿದ ॥ ೩ ॥

ಪರಮಭಾಗವತರ ಕೇರಿಯೊಳಾಡುವ ।
ಪುರಂದರವಿಠಲ ಹರಿ ಕುಣಿದ ॥ ೪ ॥

# ಕಾಪಾಡು ಶ್ರೀ ಸತ್ಯನಾರಾಯಣ

ಕಾಪಾಡು ಶ್ರೀ ಸತ್ಯನಾರಾಯಣ ।
ನಾರಾಯಣ ಸತ್ಯನಾರಾಯಣ ॥ ಪ ॥
ನಾರಾಯಣ ಲಕ್ಷ್ಮೀನಾರಾಯಣ ।
ಪನ್ನಗ ಶಯನ ಪಾವನ ಚರಣ ॥
ನಂಬಿದೆ ನಿನ್ನಾ । ಕಾಪಾಡು ಶ್ರೀ ಸತ್ಯನಾರಾಯಣ ॥ ೧ ॥

ಮನವೆಂಬ ಮಂಟಪ ಬೆಳಕಾಗಿದೆ ।
ಹರಿನಾಮದ ಮಂತ್ರವೇ ತುಂಬಿದೆ ॥
ಎಂದೆಂದು ಸ್ಥಿರವಾಗಿ ನೀನಿಲ್ಲಿರೊ ।
ನಮ್ಮಲ್ಲಿ ಒಂದಾಗಿ ಉಸಿರಾಗಿರು ॥ ೨ ॥

ನನಗಾಗಿ ಏನನ್ನು ನಾ ಬೇಡೆನು ।
ಧನಕನಕ ಬೇಕೆಂದು ನಾ ಕೇಳೆನು ॥
ಈ ಮನೆಯು ನೀನಿರುವ ಗುಡಿಯಾಗಲಿ ।
ಸುಖ ಶಾಂತಿ ನೆಮ್ಮದಿಯ ನೆಲೆಯಾಗಲಿ ॥ ೩ ॥

ಕಣ್ಣೀರ ಅಭಿಷೇಕ ನಾ ಮಾಡಿದೆ ।
ಕರುಣಾಳು ನೀ ಎನ್ನ ಕಾಪಾಡಿದೆ ॥
ಬರಿದಾದ ಮಡಿಲನ್ನು ನೀ ತುಂಬಿದೆ ।
ನಾ ಕಾಣದಾನಂದ ನೀ ನೀಡಿದೆ ॥ ೪ ॥

# ನಂಬದಿರು ಈ ದೇಹ

ನಂಬದಿರು ಈ ದೇಹ ನಿತ್ಯವಲ್ಲ ।
ಅಂಬುಜಾಕ್ಷನ ಭಜಿಸಿ ಸುಖಿಯಾಗು ಮನವೇ ॥ ಪ ॥

ಎಲುಬು ರಕ್ತ ಮಾಂಸಗಳ ಮೇಲೆ ಚರ್ಮದ ಹೊದಿಕೆ ।
ಒಳಗೆ ಮಲ ಮೂತ್ರಾದಿ ಕ್ರಿಮಿಗಳಿಹವು ॥
ಹಲವು ವ್ಯಾಧಿಯ ಬೀಡು ಪಂಚಭೂತದ ನಾಡು ।
ಬಲುಹು ದೇಹವ ನೆಚ್ಚಿ ಕೆಡಬೇಡ ಮನವೇ ॥ ೧ ॥

ಸತಿ ಸುತರು ಹಿತರೆಂದು ಮತಿ ಮರೆತು ಮಮತೆಯಲಿ ।
ಅತಿಕಾಂಕ್ಷೆಯೆಂಬ ದುರ್ವಿಷಯ ಬಲಿದು ॥
ಸತತ ಲಕ್ಷ್ಮೀಪತಿಯ ಶರಣೆನ್ನದಿಹಪರದ ।
ಗತಿ ಶೂನ್ಯನಾಗಿ ನೀ ಕೆಡಬೇಡ ಮನವೇ ॥ ೨ ॥

ಪರರ ನಿಂದಿಸದೆ ಪರ ವಧುಗಳನು ಬಯಸದೆ ।
ಗುರುವಿಪ್ರ ಸೇವೆಯನು ಮಾಡು ಬಿಡದೆ ॥
ಹರಿಸ್ತುತಿಯ ನೀ ಕೇಳು ಹರಿ ಕೀರ್ತನೆಯ ಮಾಡು ।
ಸಿರಿ ಪುರಂದರ ವಿಠಲ ನೊಲಿದು ಪಾಲಿಸುವ ॥ ೩ ॥

# ಬಾಗಿಲನು ತೆರೆದು ಸೇವೆಯನು

ಬಾಗಿಲನು ತೆರೆದು ಸೇವೆಯನು ಕೊಡುಹರಿಯೇ ।
ಕೂಗಿದರು ಧ್ವನಿ ಕೇಳಲಿಲ್ಲವೆ ನರಹರಿಯೇ ॥ ಪ ॥

ಪರಮಪದದೊಳಗೆ ವಿಷಧರನ ತಲ್ಪದಲಿ ।
ನೀ ಸಿರಸಹಿತ ಕ್ಷೀರವಾರಿಧಿ ಯೊಳಿರಲು ॥
ಕರಿರಾಜ ಕಷ್ಟದಲಿ ಆದಿಮೂಲ ಎಂದು ।
ಕರೆಯಲಾಕ್ಷಣ ಬಂದು ಒದಗಿದೆಯೋ ನರಹರಿಯೇ ॥ ೧ ॥

ಕಡುಕೋಪದಿಂ ಖಳನು ಖಡುಗವನೆ ಪಿಡಿದು ।
ನಿನ್ನೊಡೆಯನೆಲ್ಲಿಹನು ಎಂದು ನುಡಿಯೇ ॥
ದೃಡಭಕುತಿಯಲಿ ಶಿಶುವು ಬಿಡದೆ ನಿನ್ನನ್ನು ಭಜಿಸೆ ।
ಸಡಗರದಿ ಸ್ತಂಭದಿಂದೊಡೆದೆ ನರಹರಿಯೇ ॥ ೨ ॥

ಯಮಸುತನ ರಾಣಿಗಕ್ಷಯವಸನವನಿತ್ತೆ ।
ಸಮಯದಲಿ ಅಜಮಿಳನ ಪೊರೆದೆ ॥
ಸಮಯಾಸಮಯವುಂಟೆ ಭಕ್ತವತ್ಸಲ ನಿನಗೆ ।
ಕಮಲಾಕ್ಷ ಕಾಗಿನೆಲೆ ಆದಿಕೇಶವನೆ ॥ ೩ ॥

# ದೇವ ಬಂದ ನಮ್ಮ

ದೇವ ಬಂದ ನಮ್ಮ ಸ್ವಾಮಿ ಬಂದ ।
ದೇವರ ದೇವ ಶಿಖಾಮಣಿ ಬಂದನೋ ॥ ಪ ॥

ಉರಗಶಯನ ಬಂದ ಗರುಡಗಮನ ಬಂದ ।
ನರಗೊಲಿದವ ಬಂದ ನಾರಾಯಣ ಬಂದ ॥ ೧ ॥

ಮಂದರೋದ್ಧರ ಬಂದ ಮಾಮನೋಹರ ಬಂದ ।
ವೃಂದಾವನಪತಿ ಗೋವಿಂದ ಬಂದನೋ ॥ ೨ ॥

ಚಕ್ರಧರನು ಬಂದ ನಕ್ರಹರನು ಬಂದು ।
ಅಕ್ರೂರಗೊಲಿದ ತ್ರಿವಿಕ್ರಮ ಬಂದನೋ ॥ ೩ ॥

ಪಕ್ಷಿವಾಹನ ಬಂದ ಲಕ್ಷ್ಮೀರಮಣ ಬಂದ ।
ಅಕ್ಷಯಫಲದಾ ಲಕ್ಷ್ಮಣಾಗ್ರಜ ಬಂದ ॥ ೪ ॥

ಪೂತನಿ ಸಂಹರಣ ಬಂದ ಪುರುಹೂತವಂದ್ಯ ಬಂದ ।
ಮಾತುಳನ ಮಡುಹಿದ ಗೋವಿಂದ ಬಂದನೋ ॥ ೫ ॥

ನಿಗಮಗೋಚರ ಬಂದ ನಿತ್ಯತೃಪ್ತನು ಬಂದ ॥
ನಗೆಮುಖ ಪುರಂದರ ವಿಠಲನು ಬಂದನೋ ೬ ॥

# ಇಷ್ಟು ದಿನ ಈ ವೈಕುಂಟ

ಇಷ್ಟು ದಿನ ಈ ವೈಕುಂಠ ಎಷ್ಟು ದೂರವೊ ಎನ್ನುತಲಿದ್ದೆ ।
ದೃಷ್ಟಿಯಿಂದಲಿ ನಾನು ಕಂಡೆ । ಸೃಷ್ಟಿಗೀಶನೆ ಶ್ರೀ ರಂಗಶಾಯಿ ॥ ಪ ॥

ಎಂಟು ಏಳನು ಕಳೆದುದರಿಂದೆ ।
ಬಂಟರೈವರ ತುಳಿದುದರಿಂದೆ ।
ತುಂಟಕನೊಬ್ಬನ ತರಿದುದರಿಂದೆ ।
ಬಂಟನಾಗಿ ಬಂದೆನೋ ರಂಗಶಾಯಿ ॥ ೧ ॥

ವಜ್ರ ವೈಡೂರ್ಯದ ತೊಲೆಗಳ ಕಂಡೆ ।
ಪ್ರಜ್ವಲಿಪ ಮಹಾದ್ವಾರವ ಕಂಡೆ ।
ನಿರ್ಜರಾದಿ ಮುನಿಗಳ ನಾ ಕಂಡೆ ।
ದುರ್ಜನಾಂತಕನೆ ಶ್ರೀ ರಂಗಶಾಹಿ ॥ ೨ ॥

ರಂಭೆ ಊರ್ವಶಿ ಮೇಳವ ಕಂಡೆ ।
ತುಂಬುರು ಮುನಿ ನಾರದರನು ಕಂಡೆ ।
ಅಂಬುಜೋದ್ಭವ ರುದ್ರರ ಕಂಡೆ ।
ಶಂಬರಾರಿ ಪಿತನೇ ರಂಗಶಾಯಿ ॥ ೩ ॥

ನಾಗಶಯನನ ಮೂರುತಿ ಕಂಡೆ ।
ಭೋಗಿ ಭೂಷಣ ಶಿವನನು ಕಂಡೆ ।
ಭಾಗವತರ ಸಮ್ಮೇಳವ ಕಂಡೆ ॥
ಕಾಗಿ ನೆಲೆಯಾದಿ ಕೇಶವನ ನಾ ಕಂಡೆ ॥ ೪ ॥

# ನೀನ್ಯಾಕೋ ನಿನ್ನ ಹಂಗ್ಯಾಕೋ

ನೀನ್ಯಾಕೋ ನಿನ್ನ ಹಂಗ್ಯಾಕೋ ।
ನಿನ್ನಾ ನಾಮದ ಬಲವೊಂದಿದ್ದರೆ ಸಾಕು ॥ ಪ ॥

ಪ್ರಹ್ಲಾದನ ಪಿತ ಬಾಧಿಸುತಿರುವಾಗ ।
ನರಸಿಂಹನೆಂಬ ನಾಮವೇಕಾಯ್ತೋ ॥ ೧ ॥

ಆ ಮರ ಈ ಮರ ಧ್ಯಾನಿಸುತ್ತಿರುವಾಗ ।
ರಾಮ ರಾಮ ಎಂಬ ನಾಮವೇಕಾಯ್ತೋ ॥ ೨ ॥

ಬಾಲೆಯ ಸಭೆಯಲಿ ಸೀರೆಯ ನೆಳೆವಾಗ ।
ಕೃಷ್ಣ ಕಷ್ಣಾ ಎಂಬ ನಾಮವೇಕಾಯ್ತೋ ॥ ೩ ॥

ಯಮನ ದೂತರು ಬಂದು ಅಜಮಿಳನೆಳೆವಾಗ ।
ನಾರಾಯಣನೆಂಬ ನಾಮವೇಕಾಯ್ತೋ ॥ ೪ ॥

ಕರಿಮಕರಿಗೆ ಸಿಕ್ಕಿ ಮೊರೆಯಿಡುತ್ತಿರುವಾಗ ।
ಆದಿಮೂಲನೆಂಬ ನಾಮವೇಕಾಯ್ತೋ ॥ ೫ ॥

ಹಸುಳೆ ಆ ದ್ರುವರಾಯ ಅಡವಿಗೆ ಪೋಪಾಗ ।
ವಾಸುದೇವನೆಂಬ ನಾಮವೇಕಾಯ್ತೋ ॥ ೬ ॥

ನಿನ್ನಾ ನಾಮಕೆ ಸರಿ ಕಾಣೆನು ಜಗದೊಳು ।
ಘನಮಹಿಮೆ ಸಿರಿ ಪುರಂದರವಿಠಲ ॥ ೭ ॥

# ನೀ ಮಾಯೆಯೊಳಗೋ

ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ ।
ನೀ ದೇಹದೊಳಗೋ ನಿನ್ನೊಳು ದೇಹವೋ ಹರಿಯೆ ॥ ಪ ॥

ಬಯಲೊಳಗೆ ಆಲಯವೊ ಆಲಯದೊಳಗೆ ಬಯಲೊ ।
ಬಯಲು ಆಲಯವೆರಡು ನಯನದೊಳಗೊ ॥
ನಯನ ಬುದ್ಧಿಯ ಒಳಗೊ ಬುದ್ಧಿ ನಯನದೊಳಗೊ ।
ನಯನ ಬುದ್ಧಿಗಳೆರಡು ನಿನ್ನೊಳಗೊ ಹರಿಯೆ ॥ ೧ ॥

ಸವಿಯು ಸಕ್ಕರೆಯೊಳಗೊ ಸಕ್ಕರೆಯು ಸವಿಯೊಳಗೊ ।
ಸವಿಯು ಸಕ್ಕರೆಯೆರಡು ಜಿಹ್ವೆಯೊಳಗೊ ॥
ಜಿಹ್ವೆ ಮನಸಿನ ಒಳಗೊ ಮನಸು ಜಿಹ್ವೆಯ ಒಳಗೊ ।
ಜಿಹ್ವೆ ಮನಸುಗಳೆರಡು ನಿನ್ನೊಳಗೊ ಹರಿಯೆ ॥ ೨ ॥

ಕುಸುಮದಲಿ ಗಂಧವೊ ಗಂಧದಲಿ ಕುಸುಮವೊ ।
ಕುಸುಮ ಗಂಧಗಳೆರಡು ಆಘ್ರಾಣದೊಳಗೊ ॥
ಅಸಮಭವ ಕಾಗಿನೆಲೆಯಾದಿ ಕೇಶವರಾಯ ।
ಉಸುರಲೆನ್ನಳವಲ್ಲ ಎಲ್ಲ ನಿನ್ನೊಳಗೊ ಹರಿಯೆ ॥ ೩ ॥

# ಕಣ್ಣಿನೊಳಗೆ ನೋಡು

ಕಣ್ಣಿನೊಳಗೆ ನೋಡೋ ಹರಿಯ । ಕಣ್ಣಿನೊಳಗೆ ನೋಡೋ ॥
ಕಣ್ಣಿನೊಳಗೆ ನೋಡೋ ಒಳಗಣ್ಣಿನೊಳಗೆ ನೋಡೋ ॥ ಪ ॥

ಆಧಾರ ಮೊದಲಾದ ಆರು ಚಕ್ರ ಶೋಧಿಸಿ ।
ಬಿಡಬೇಕು ಈ ಕ್ಷಣ ಮೂರು ।
ಸಾಧಿಸಿ ಸುಶುಂಭ ಏರು ।
ಅಲ್ಲಿ ಬೇಧಿಸಿ ಪರಬ್ರಹ್ಮ ಸೇರು ॥ ೧ ॥

ಎದೆ ಹಾಕದೆ ಮೇಲೆ ನೋಡಿ ।
ಬೇಗ ಪವನದಿಂದಲಿ ವಾಯು ಬಂಧನ ಮಾಡಿ ।
ಸವಿದು ಪನವನಿ ಮಾಡಿ ।
ಅಲ್ಲಿ ನವವಿಧ ಭಕ್ತಿಲಿ ನಲಿದಾಡಿ ॥ ೨ ॥

ಅಂಡಜದೊಳಾಡುತ್ತಾನೆ ।
ಬಾನುಮಂಡಲ ನಾರಾಯಣ ನೆಂಬವನೆ ।
ಕುಂಡಲಿ ತುದಿಯೊಳಿದ್ದಾನೆ ।
ಪುರಂದರ ವಿಠ್ಠಲ ಪಾಲಿಸುತ್ತಾನೆ ॥ ೪ ॥

# ಯಮನೆಲ್ಲೂ ಕಾಣನೆಂದು

ಯಮನೆಲ್ಲೂ ಕಾಣನೆಂದು ಹೇಳಬೇಡ ।
ಯಮನೇ ಶ್ರೀರಾಮನು ಸಂದೇಹಬೇಡ ॥ ಪ ॥

ನಂಬಿದಾ ವಿಭೀಷಣಗೆ ರಾಮನಾದ ।
ನಂಬದಿದ್ದ ರಾವಣಗೆ ಯಮನಾದ ॥ ೧ ॥

ನಂಬಿದ ಅರ್ಜುನಗೆ ಬಂಟನಾದ ।
ನಂಬದಿದ್ದ ಕೌರವಗೆ ಕಂಟಕನಾದ ॥ ೨ ॥

ನಂಬಿದ ಉಗ್ರಸೇನೆಗೆ ಮಿತ್ರನಾದ ।
ನಂಬದಿದ್ದ ಕಂಸನಿಗೆ ಶತ್ರುವಾದ ॥ ೩ ॥

ನಂಬಿದ ಬಾಲಕಗೆ ಹರಿಯಾದ ।
ನಂಬದಿದ್ದ ಅವನ ಪಿತಗೆ ಅರಿಯಾದ ॥ ೪ ॥

ನಂಬಿದವರ ಸಲಹುವ ನಮ್ಮ ದೊರೆಯು ।
ಅಂಬುಜಾಕ್ಷ ಪುರಂದರವಿಠಲರಾಯನು ॥ ೫ ॥

# ಯಾರಿಗೆ ಯಾರುಂಟು

ಯಾರಿಗೆ ಯಾರುಂಟು ಎರವಿನ ಸಂಸಾರ ।
ನೀರ ಮೇಲಿನ ಗುಳ್ಳೆ ನಿಜವಲ್ಲ ಹರಿಯೇ ॥ ಪ ॥

ಬಾಯಾರಿತು ಎಂದು ಬಾವಿ ನೀರಿಗೆ ಪೋದೆ ।
ಬಾವಿ ಜಲವು ಬತ್ತಿ ಬರಿದಾಯ್ತು ಹರಿಯೇ ॥ ೧ ॥

ಬಿಸಿಲು ಗಾಳಿಗಾಗಿ ಮರದ ನೆರಳಿಗೆ ಪೋದೆ ।
ಮರ ಬಗ್ಗಿ ಶಿರದ ಮೇಲೊರಗಿತು ಹರಿಯೇ ॥ ೨ ॥

ಅಡವಿಯೊಳ್ಮನೆಮಾಡಿ ಮರಕೆ ತೊಟ್ಟಿಲ ಕಟ್ಟಿ ।
ತೊಟ್ಟಿಲಿನ ಶಿಶು ಮಾಯವಾಯಿತು ಹರಿಯೇ ॥ ೩ ॥

ತಂದೆ ಶ್ರೀ ಪುರಂದರ ವಿಠಲ ನಾರಾಯಣ ।
ನಾ ಸಾಯೋ ಹೊತ್ತಿಗೆ ನೀ ಕಾಯೋ ಹರಿಯೇ ॥ ೪ ॥

# ಅಂಬಿಗಾ ನಾ ನಿನ್ನ

ಅಂಬಿಗಾ ನಾ ನಿನ್ನ ನಂಬಿದೆ ।
ಜಗ ದಂಬಾರಮಣ ನಿನ್ನ ನಂಬಿದೆ ॥ ಪ ॥

ತುಂಬಿದ ಹರಿಗೋಲಂಬಿಗ ।
ಅದ ಕೊಂಬತ್ತು ಛಿದ್ರಗಳಂಬಿಗ ॥
ಸಂಭ್ರಮದಿಂದ ನೋಡಂಬಿಗ ।
ಅದ ರಿಂಬು ನೋಡಿ ನಡೆಸಂಬಿಗ ॥ ೧ ॥

ಹೊಳೆಯ ಭರವ ನೋಡಂಬಿಗ ।
ಅದಕೆ ಸೆಳೆವು ಘನವಯ್ಯ ಅಂಬಿಗ ॥
ಸುಳಿಯೊಳು ಮುಳುಗಿದೆ ಅಂಬಿಗ ।
ಎನ್ನ ಸೆಳೆದು ಕೊಂಡಯ್ಯೊ ನೀನಂಬಿಗ ॥ ೨ ॥

ಆರು ತೆರೆಯ ನೋಡಂಬಿಗ ।
ಅದು ಮೀರಿ ಬರುತಲಿದೆ ಅಂಬಿಗ ।
ಯಾರಿಂದಲಾಗದು ಅಂಬಿಗ ।
ಅದ ನಿವಾರಿಸಿ ದಾಟಿಸೊ ಅಂಬಿಗ ॥ ೩ ॥

ಹೊತ್ತು ಹೋಯಿತು ನೋಡಂಬಿಗ ।
ಅಲ್ಲಿ ಮತ್ತ್ಯೈವರೀರ್ವರು ಅಂಬಿಗ ।
ಒತ್ತಿ ನಡೆಸು ನೋಡಂಬಿಗ ।
ಎನ್ನ ಸತ್ಯ ಲೋಕಕೆ ಒಯ್ಯೊ ಅಂಬಿಗ ॥ ೪ ॥

ಸತ್ಯವೆಂಬುದೇ ಹುಟ್ಟಂಬಿಗ ।
ಸದಾ ಭಕ್ತಿ ಎಂಬುದೇ ಪಥವಂಬಿಗ ॥
ನಿತ್ಯಮೂರುತಿ ನಮ್ಮ ಪುರಂದರವಿಠಲ ।
ನಮ್ಮ ಮುಕ್ತಿ ಮಂಟಪ ಕೊಯ್ಯೊ ಅಂಬಿಗ ॥ ೫ ॥

# ಆಚಾರವಿಲ್ಲದ ನಾಲಿಗೆ

ಆಚಾರವಿಲ್ಲದ ನಾಲಿಗೆ ನಿನ್ನಾ ।
ನೀಚ ಬುದ್ಧಿಯಬಿಡು ನಾಲಿಗೆ ॥
ವಿಚಾರವಿಲ್ಲದೆ ಪರರದೂಷಿಸುವುದಕ್ಕೆ ।
ಚಾಚಿಕೊಂಡಿರುವಂಥ ನಾಲಿಗೆ ॥ ೧ ॥

ಪ್ರಾತಃಕಾಲದೊಳೆದ್ದು ನಾಲಿಗೆ ಸಿರಿ ।
ಪತಿಯೆನ್ನಬಾರದೆ ನಾಲಿಗೆ ।
ಪತಿತಪಾವನ ನಮ್ಮ ರತಿಪತಿ ಜನಕನ ॥
ಸತತವು ನುಡಿ ಕಂಡ್ಯ ನಾಲಿಗೆ ॥ ೧ ॥

ಚಾಡಿ ಹೇಳಲು ಬೇಡ ನಾಲಿಗೆ ನಿನ್ನ ।
ಬೇಡಿಕೊಂಬುವೆನು ನಾಲಿಗೆ ॥
ರೂಢಿಗೊಡೆಯ ಶ್ರೀ ರಾಮನ ನಾಮವ ।
ಪಾಡುತಲಿರು ಕಂಡ್ಯಾ ನಾಲಿಗೆ ॥ ೨ ॥

ಹರಿಯ ಸ್ಮರಣೆ ಮಾಡು ನಾಲಿಗೆ ।
ನರ ಹರಿಯ ಭಜಿಸು ಕಂಡ್ಯಾ ನಾಲಿಗೆ ॥
ವರದ ಪುರಂದರ ವಿಠಲ ರಾಯನ ।
ಚರಣ ಕಮಲ ನೆನೆ ನಾಲಿಗೆ ॥ ೩ ॥

# ರಘುರಾಮ ಚಂದಿರನೆ

ರಘುರಾಮ ಚಂದಿರನೆ ಶ್ರೀಲೋಲ ಸುಂದರನೆ ।
ಶ್ರೀ ಮನ್ನಾರಾಯಣನೇ ರಾಮ್ ರಾಮ್ ರಾಮ್ ॥ ಪ ॥

ಅತ್ತ ನೋಡಲು ರಾಮ ಇತ್ತ ನೋಡಲು ರಾಮ ।
ಅತ್ತ ಇತ್ತ ನೋಡಿದರೂ ಶ್ರೀರಾಮ ॥ ೧ ॥

ಕೆಳಗೆ ನೋಡಲು ರಾಮ ಮೇಲೆ ನೋಡಲು ರಾಮ ।
ಮೇಲೆ ಕೆಳಗೆ ನೋಡಿದರೂ ಶ್ರೀರಾಮ ॥ ೨ ॥

ಎಡಕೆ ನೋಡಲು ರಾಮ ಬಲಕೆ ನೋಡಲು ರಾಮ ।
ಎಡಕೆ ಬಲಕೆ ನೋಡಿದರೂ ಶ್ರೀರಾಮ ॥ ೩ ॥

ಹಿಂದೆ ನೋಡಲು ರಾಮ ಮುಂದೆ ನೋಡಲು ರಾಮ ।
ಹಿಂದೆ ಮುಂದೆ ನೋಡಿದರೂ ಶ್ರೀರಾಮ ॥ ೪ ॥

# ಹಕ್ಕಿಯ ಹೆಗಲೇರಿ ಬಂದವಗೆ

ಹಕ್ಕಿಯ ಹೆಗಲೇರಿ ಬಂದವಗೆ ।
ನೋಡಕ್ಕಾ ಮನಸೋತೆ ನಾನವಗೆ ॥ ಪ ॥

ಸತ್ರಾರ್ಜಿತನ ಮಗಳೆತ್ತಿದಾ ।
ಉನ್ಮತ್ತ ನರಕನೊಳು ತಾ ಕಾದಿದಾ ॥
ಮತ್ತೆ ಕೆಡಹಿದ ಅವನಂಗವ ।
ಸತಿಗಿತ್ತನು ತಾ ಆಲಿಂಗನವಾ ॥ ೧ ॥

ಹದಿನಾರು ಸಾವಿರ ನಾರಿಯರ ।
ಸೆರೆ ಮುದದಿಂದ ಬಿಡಿಸಿ ಮನೋಹರ ॥
ಅದಿತಿಯ ಕುಂಡಲ ಗಳಿಸಿದ ।
ಹರವಿಧಿಸುರ ನೃಪರನು ಸಲಹಿದ ಧೀರ ॥ ೨ ॥

ನರಕ ಚತುರ್ದಶಿ ಪರ್ವದ ।
ದಿನ ಹರುಷಾದಿ ಪ್ರಕಟಾದನು ದೇವಾ ॥
ಶರಣಾಗತ ಜನ ವತ್ಸಲ ।
ರಂಗ ಪರಮ ಭಾಗವತರ ಪರಿಪಾಲ ॥ ೩ ॥

ಹೊಗಳಿ ಕೃಷ್ಣಯ್ಯನ ಮಹಿಮೆಯ ।
ಮುಕ್ತಿ ನಗರಾದ ಅರಸನ ಕೀರ್ತಿಯ ॥
ಜಗದೀಶ ಪ್ರಸನ್ವೆಂಕಟೇಶನು ।
ಭಕ್ತ ನರಹರಿ ರವಿ ಕೋಟಿ ಪ್ರಕಾಶನು ॥ ೪ ॥

# ಭೂಷಣಕೆ ಭೂಷಣ

ಭೂಷಣಕೆ ಭೂಷಣ ಇದು ಭೂಷಣ ।
ಶೇಷಗಿರಿವಾಸ ಶ್ರೀ ವರ ವೆಂಕಟೇಶ ॥ ಪ ॥

ನಾಲಿಗೆಗೆ ಭೂಷಣ ನಾರಾಯಣನ ನಾಮ ।
ಕಾಲಿಗೆ ಭೂಷಣ ಹರಿಯಾತ್ರೆಯು ॥
ಆಲಯಕೆ ಭೂಷಣ ತುಳಸಿ ವೃಂದಾವನವು ।
ಶಾಲ ಕರ್ಣಕೆ ಭೂಷಣ ವಿಷ್ಣು ಕಥೆಯು ॥ ೧ ॥

ದಾನವೇ ಭೂಷಣ ಎರಡು ಹಸ್ತಂಗಳಿಗೆ ।
ಮಾನವೇ ಭೂಷಣ ಮಾನವರಿಗೆ ॥
ಜ್ಞಾನವೇ ಭೂಷಣ ಮುನಿಯೋಗಿವರರಿಗೆ ।
ಮಾನಿನಿಗೆ ಭೂಷಣ ಪತಿಭಕ್ತಿಯು ॥ ೨ ॥

ರಂಗನನು ನೋಡುವುದೇ ಕಂಗಳಿಗೆ ಭೂಷಣ ।
ಮಂಗಳಾಂಗಗೆ ಮಣಿವ ಶಿರಭೂಷಣ ॥
ಶೃಂಗಾರ ತುಳಸಿಮಣಿ ಕೊರಳಿಗೆ ಭೂಷಣ ।
ರಂಗವಿಠಲ ನಿನ್ನ ನಾಮವೇ ಭೂಷಣ ॥ ೩ ॥

# ತಿರುಪತಿ ವೆಂಕಟರಮಣ

ತಿರುಪತಿ ವೆಂಕಟರಮಣಾ । ನಿನಗೇತಕೆ ಬಾರದು ಕರುಣಾ ॥
ನಂಬಿದೆ ನಿನ್ನಯ ಚರಣಾ । ಪರಿಪಾಲಿಸಬೇಕು ಕರುಣಾ ॥ ಪ ॥

ಅಳಗಿರಿಯಲಿ ಬಂದಾ । ಸ್ವಾಮಿ ಅಂಜನಗಿರಿಯಲಿ ನಿಂದಾ ।
ಕೊಳಲ ಧ್ವನಿಯದೋ ಚೆಂದಾ । ನಮ್ಮ ಕುಂಡಲರಾಯ ಮುಕುಂದ...
ಮುಕುಂದಾ....॥ ೧ ॥

ಮೂಡಲಗಿರಿಯಲ್ಲಿ ನಿಂದಾ । ಮುದ್ದು ವೆಂಕಟಪತಿ ಬಲವಂತಾ ॥
ಈಡಿಲ್ಲ ನಿನಗೆ ಶ್ರೀಕಾಂತ । ಈರೇಳು ಲೋಕ ಅನಂತಾ ಅನಂತಾ ॥ ೨ ॥

ಕಾಶೀ ರಾಮೇಶ್ವರದಿಂದಾ । ಅಲ್ಲಿ ಕಾಣಿಕೆ ಬರುವುದು ಚಂದಾ ॥
ದಾಸರ ಕೂಡೆ ಗೋವಿಂದಾ । ಅಲ್ಲಿ ದಾರಿ ನಡೆವುದೇ
ಚೆಂದಾ ಚೆಂದ ಚೆಂದ ॥ ೩ ॥

ಪಾಪ ವಿನಾಶಿನಿ ಸ್ನಾನ । ಹರಿ ಪಾದೋದಕವೇ ಪಾನ ॥
ಕೋಪ ತಾಪ ನಿಧಾನ । ನಮ್ಮ ಪುರಂದರ ವಿಠಲನ ಧ್ಯಾನ ಧ್ಯಾನ
॥ ೪ ॥

# ಎಕ್ಕಲಾರೆ ಕೈ ಎಂಜಲು

ಎಕ್ಕಲಾರೆ ಕೈ ಎಂಜಲು ಚಿಕ್ಕ ।
ಮಕ್ಕಳು ಅಳುತಾರೆ ಹೋಗೋ ದಾಸಯ್ಯ ॥ ಪ ॥

ಮಡಕೆ ತೊಳೆಯುತೇನೆ ಮನೆಯ ಸಾರಿಸುತೇನೆ ।
ಹುಡುಗರೊಬ್ಬರ ಕಾಣೆ ಹೋಗೋ ದಾಸಯ್ಯ ॥
ತೊಡೆಯಮೇಲಿನ ಕೂಸು ಮೊಲೆಯನುಣ್ಣುತಲಿದೆ ।
ಹುಡುಗಾಟ ಮಾಡದೆ ಹೋಗೋ ದಾಸಯ್ಯ ॥ ೧ ॥

ಅಟ್ಟದಮೇಲಿನ ಅಕ್ಕಿ ತೆಗೆಯಬೇಕು ।
ಹೊಟ್ಟೆ ನೋಯುತಲಿದೆ ಹೋಗೋ ದಾಸಯ್ಯ ॥
ಮುಟ್ಟಾಗಿ ಇದ್ದೇನೆ ಮನೆಯೊಳಗಾರಿಲ್ಲ ।
ನಿಷ್ಠೂರ ಮಾಡದೆ ಹೋಗೋ ದಾಸಯ್ಯ ॥ ೨ ॥

ವೀಸಿದ ಕಾಸಿಗೆ ದವಸವ ನಾ ತಂದೆ ।
ಕೂಸಿಗೆ ಸಾಲದು ಹೋಗೋ ದಾಸಯ್ಯ ॥
ಆಸೆಕಾರ ನೀನು ದೋಷಕಾರಿ ನಾನು ।
ಶೇಷಾಚಲ ವಾಸ ಪುರಂದರವಿಠಲ ॥ ೩ ॥

## ಶ್ರೀ ಮುಖ್ಯಪ್ರಾಣ ಸ್ತೋತ್ರಂ

ಆಂಜನೇಯ ಮತಿಪಾಟಲಾನನಂ ।
ಕಾಂಚನಾದ್ರಿ ಕಮನೀಯ ವಿಗ್ರಹಮ್ ॥
ಪಾರಿಜಾತ ತರುಮೂಲವಾಸಿನಂ ।
ಭಾವ ಯಾಮಿ ಪವಮಾನ ನಂದನಮ್ ॥

# ನಂಬಿ ಬಂದೆ ಮುಖ್ಯಪ್ರಾಣ

ನಂಬಿ ಬಂದೆ ಮುಖ್ಯಪ್ರಾಣ । ತುಂಬಿಕೊಂಡೆ ರಾಮಧ್ಯಾನ ।
ಶಂಭು ಶಿವನ ಅಂಶದೇವಾ । ಇಂಬು ನೀಡಿ ಕಾಯೋ ತಂದೆ ॥ ಪ ॥

ಮಧುರ ಭಾಷಿ ಆಂಜನೇಯ । ಮದವಿನಾಶಿ ವಜ್ರಕಾಯ ।
ರಾಮ ಚರಣ ಶರಣ ನಿನ್ನ ನಾಮ ಭಜಿಪೆ ಕಾಯೋ ಎನ್ನ ॥ 1 ॥

ಅಂಬುದಿ ಜಿಗಿತ ಅಮಿತ ಪ್ರಾಣ । ಶುಭವ ನೀಡೋ ಮುಖ್ಯಪ್ರಾಣ ।
ಸ್ವಾಮಿ ಭಕ್ತ ವಾಯುಜಾತ ಪ್ರೇಮದಿಂದ ಸಲಹೋ ದೇವ ॥ 2 ॥

ಅಗಜೆಗೊಲಿದ ಕದನವೀರ ಜಗದಿ ಮೆರೆದ ನಿಜ ಉದಾರ ॥
ಅಷ್ಟಸಿದ್ಧಿಯಿಂದ ನಲಿದ ಇಷ್ಟದೇವ ನೆನೆವೆ ನಿನ್ನ ॥ 3 ॥

ನುಡಿಸು ನಡೆಸು ಮುಖ್ಯಪ್ರಾಣ । ಒಡೆಯೂರೊಡೆಯ
ಶರಣು ಬಂದೆ ॥
ಖಳನ ರೂಪ ಜ್ಞಾನ ದೀಪ ಗುಡಿಯ ಬೆಳಗೊ ಬಾಗಿ ನಿಂದೆ ॥ 4 ॥

# ಕೂಸಿನ ಕಂಡೀರಾ

ಕೂಸಿನ ಕಂಡೀರಾ ಮುಖ್ಯಪ್ರಾಣನ ಕಂಡೀರಾ ।
ಬಾಲನ ಕಂಡೀರಾ ಬಲವಂತನ ಕಂಡೀರಾ ॥ ಪ ॥

ಅಂಜನೆ ಉದರದಿ ಜನಿಸಿತು ಕೂಸು ।
ರಾಮನ ಚರಣಕೆ ಎರಗಿತು ಕೂಸು ॥
ಸೀತೆಗೆ ಉಂಗುರ ಕೊಟ್ಟಿತು ಕೂಸು ।
ಲಂಕಾಪುರವನೆ ಸುಟ್ಟಿತು ಕೂಸು ॥ ೧ ॥

ಬಂಡಿ ಅನ್ನವ ನುಂಗಿತು ಕೂಸು ।
ಬಕನ ಪ್ರಾಣವ ಕೊಂದಿತು ಕೂಸು ॥
ವಿಷದ ಲಡ್ಡುಗೆಯ ಮೆದ್ದಿತು ಕೂಸು ।
ಮಡದಿಗೆ ಪುಷ್ಪವ ಕೊಟ್ಟಿತು ಕೂಸು ॥ ೨ ॥

ಮಾಯಾವೆಲ್ಲವ ಗೆದ್ದಿತು ಕೂಸು ।
ದ್ವೈತಮತವನ್ನುದ್ಧರಿಸಿತು ಕೂಸು ॥
ಮಧ್ವರಾಯರೆಂಬ ಹೆಸರಿನ ಕೂಸು ।
ಪುರಂದರ ವಿಠಲನ ಪ್ರೇಮದ ಕೂಸು ॥ ೩ ॥

# ಎಲ್ಲಿ ಹನುಮನೋ ಅಲ್ಲೇ

ಎಲ್ಲಿ ಹನುಮನೋ ಅಲ್ಲೇ ರಾಮನು ।
ಎಲ್ಲಿ ರಾಮನೋ ಅಲ್ಲೇ ಹನುಮನು ॥ ಪ ॥
ರಾಮನ ಉಸಿರೇ ಹನುಮ ।
ಹನುಮನ ಪ್ರಾಣವೇ ರಾಮ ॥ ೧ ॥

ಎಲ್ಲಿ ನೆನೆದರು ಅಲ್ಲೇ ಇರುವನು ।
ಎಲ್ಲಿ ಕರೆದರು ಅಲ್ಲೇ ಬರುವನು ॥
ನೆರಳಿನಂತೆಯೇ ಬಳಿಯಲಿರುವನು ।
ಕರುಣೆಯಿಂದ ಸುಖಶಾಂತಿ ನೀಡುವ ಮುಖ್ಯಪ್ರಾಣ ॥ ೨ ॥

ಸ್ತೋತ್ರ ಮಾಡುತ ನನ್ನ ಹೊಗಳು ಎನ್ನನು ।
ಪ್ರೇಮದಿಂದ ನೀ ಕರೆಯ ಬರುವನು ॥
ಭಕ್ತನೊಬ್ಬನೇ ಅವನ ಗೆಲುವನು ಎಂದೆಂದು ।
ಸ್ಮರಣೆ ಮಾತ್ರದಿ ಮನದಿ ಬೆರೆವನು ॥
ಕಾಮಕ್ರೋಧವೆಲ್ಲದಹಿಸಿ ಬಿಡುವನು ।
ಶಾಂತಿ ಕೊಡುವನು ನೆಮ್ಮದಿಯ ತರುವನು ।
ಮನಸಿಗೆ ಮಹದಾನಂದ ನೀಡುವ ಮುಖ್ಯಪಾಣ ॥ ೩ ॥

# ಜೈ ಜೈ ಹನುಮಾನ್

ಮನೋಜವಂ ಮಾರುತ ತುಲ್ಯ ವೇಗಂ । ಜಿತೇಂದ್ರಿಯಂ ।
ಬುದ್ಧಿ ಮತಾಂ ವರಿಷ್ಠಂ । ವಾತಾತ್ಮಜಂ ವಾನರಯೂಥ ಮುಖ್ಯಂ ।
ಶ್ರೀ ರಾಮದೂತಂ ಶಿರಸಾನಮಾಮಿ ॥
ಬುದ್ಧಿರ್ಬಲಂ ಯಶೋಧೈರ್ಯಂ । ನಿರ್ಭಯತ್ವ ಮರೋಗತಾ ।
ಅಜಾಡ್ಯಂ ವಾಕಟುತ್ವಂಚ । ಹನುಮಾನ್ ಸ್ಮರಣಾ ಭವೇತ್ ॥

**ಜೈ ಜೈ ಹನುಮಾನ್ ಜೈಗುರು ಜೈ ಜೈ ಪವಮಾನ್ ॥ 4 ॥**
ಪವನಪುತ್ರ ಹನುಮಾನ್‌ಕೀ **ಜೈ** ।
ಆಂಜನೇಯ **ಜೈ** । ಬಲಭೀಮ **ಜೈ** ।
ಭಕ್ತವರ ಅತುಲಿತ ಬಲಧಾಮ **ಜೈ** । ಹನುಮಂತಾ **ಜೈ** ।
ಎಮ್ಮ ರಕ್ಷಿಸೋ ನೀ । ರಾಮವಿರೋಧಿಗಳನ್ನು **ಶಿಕ್ಷಿಸೋ** ।
**ಜೈ ಜೈ ಹನುಮಾನ್ ಜೈಗುರು ಜೈ ಜೈ ಪವಮಾನ್ ॥ 2 ॥**
ಪವನಪುತ್ರ ಹನುಮಾನ್‌ಕೀ **ಜಯ್** । **॥ ಪ ॥**

ಬುದ್ಧಿರ್ಬಲ ಧೈರ್ಯಗಳ ಕರುಣಿಸು ।
**ಜೈ ಜೈ ಹನುಮಾನ್ ಜೈಗುರು ಜೈ ಜೈ ಪವಮಾನ್**
ನಿರ್ಭಯತ್ವ ಆರೋಗ್ಯ ಕರುಣಿಸು ।
**ಜೈ ಜೈ ಹನುಮಾನ್ ಜೈಗುರು ಜೈ ಜೈ ಪವಮಾನ್**
ವಾಕ್‌ಪಟುತ್ವ ಹರಿ ಸ್ಮರಣೇ ಕರುಣಿಸೋ ।
**ಜೈ ಜೈ ಹನುಮಾನ್ ಜೈಗುರು ಜೈ ಜೈ ಪವಮಾನ್**
ಶ್ರೀರಾಮ ದರ್ಶನ ಭಾಗ್ಯ ಕರುಣಿಸೊ ।
**ಜೈ ಜೈ ಹನುಮಾನ್ ಜೈಗುರು ಜೈ ಜೈ ಪವಮಾನ್ ॥**

ಬುದ್ಧಿರ್ಬಲ ಧೈರ್ಯಗಳ । **ಕರುಣಿಸು** ।
ನಿರ್ಭಯತ್ವ ಆರೋಗ್ಯ । **ಕರುಣಿಸು** ।
ವಾಕ್‌ಪಟುತ್ವ ಹರಿ ಸ್ಮರಣೇ । **ಕರುಣಿಸೊ** ।
ಶ್ರೀರಾಮ ದರ್ಶನ ಭಾಗ್ಯ । **ಕರುಣಿಸೊ** ।
**ಜೈ ಜೈ ಹನುಮಾನ್ ಜೈಗುರು ಜೈ ಜೈ ಪವಮಾನ್** ॥ 2 ॥
ಪವನಪುತ್ರ ಹನುಮಾನ್‌ಕೀ **ಜೈ** ॥ ॥ **ಪ** ॥

ರಾಮಸ್ಮರಣೆ ಕೊಡು । **ಶ್ರೀ ರಾಮ್ ಜೈ ರಾಮ್ ಜೈ ಜೈ ರಾಮ್** ।
ರಾಮಸೇವೆಯ ಕೊಡು । **ಶ್ರೀ ರಾಮ್ ಜೈ ರಾಮ್ ಜೈ ಜೈ ರಾಮ್** ।
ರಾಮಾಯಣದ ಕಥೆಯೊಳು ಬಂದು ಕೂಡು ।
**ಜೈ ಜೈ ಹನುಮಾನ್ ಜೈಗುರು ಜೈ ಜೈ ಪವಮಾನ್** ॥ 2 ॥
ರಾಮಸ್ಮರಣೆ ಕೊಡು । **ಶ್ರೀರಾಮ್ ಜೈರಾಮ್ ಜೈ ಜೈ ರಾಮ್** ।
ರಾಮಸೇವೆಯ ಕೊಡು । **ಶ್ರೀರಾಮ್ ಜೈರಾಮ್ ಜೈ ಜೈ ರಾಮ್** ।
ರಾಮಾಯಣದ ಕಥೆಯೊಳು ಬಂದು ಕೂಡು
**ಜೈ ಜೈ ಹನುಮಾನ್ ಜೈಗುರು ಜೈ ಜೈ ಪವಮಾನ್** ॥ 2 ॥

ದಾಸ ಕೇಶವ ಕೃತ ಮಾರುತಿ ಹನುಮ ।
**ಹನುಮಂತ ಗುಣವಂತ ಮಾರುತಿರಾಯ ಬಲವಂತ** ॥
ದಾಸ ಗ್ರೇಸರ ಜೈ ಬಲಭೀಮ
**ಜೈ ಜೈ ಹನುಮಾನ್ ಜೈಗುರು ಜೈ ಜೈ ಪವಮಾನ್** ॥ 2 ॥
ಪವನಪುತ್ರ ಹನುಮಾನ್‌ಕೀ **ಜೈ** ॥ ॥ **ಪ** ॥

## ಶ್ರೀ ವಿಠಲ ಸ್ತೋತ್ರಂ

ಮಹಾಯೋಗ ಪೀಠೇ ತಟೇ ಭೀಮರಥ್ಯಾಂ ।
ವರಂ ಪುಂಡರೀಕಾಯ ದಾತುಂ ಮುನೀಂದ್ರೈಃ ॥
ಸಮಾಸತ್ಯನಿಷತಮಾನಂದ ಕಂದಃ ।
ಪರಬ್ರಹ್ಮ ಲಿಂಗಂ ಭಜೇ ಪಾಂಡುರಂಗಂ ॥

# ಡಂಗುರವ ಸಾರಿರಯ್ಯ

ಡಂಗುರವ ಸಾರಿರಯ್ಯ ಡಿಂಗರಿಗರೆಲ್ಲರು ।
ಭೂ ಮಂಡಲಕ್ಕೆ ಪಾಂಡುರಂಗ ವಿಠಲಪರ ದೈವವೆಂದು ॥ ಪ ॥

ಹರಿಯು ಮುಡಿದ ಹೂವ ಹರಿವಾಣದಲ್ಲಿ ಇಟ್ಟುಕೊಂಡು।
ಹರುಷದಿಂದ ಹಾಡಿಪಾಡಿ ಕುಣಿದು ಚಪ್ಪಳಿಕ್ಕುತ ॥ ೧ ॥

ಒಡಲ ಜಾಗಟೆಯ ಮಾಡಿ ನುಡಿವ ನಾಲಗೆಯ ಪಿಡಿದು ।
ಬಿಡದೆ ಥಣ ಥಣರೆಂದು ಹೊಡೆದು ಚಪ್ಪಳಿಕ್ಕುತ ॥ ೨ ॥

ಇಂತು ಲೋಕಕೆಲ್ಲಾ ಲಕ್ಷ್ಮೀಕಾಂತನಲ್ಲದಿಲ್ಲವೆಂದು ।
ಸಂತತ ಶ್ರೀಪುರಂದರ ವಿಠಲ ಪರ ದೈವವೆಂದು ॥ ೩ ॥

# ಚಿಂತ್ಯಾಕೆ ಮಾಡುತ್ತಿದ್ದಿ

ಚಿಂತ್ಯಾಕೆ ಮಾಡುತ್ತಿದ್ದಿ ಚಿನ್ಮಯನಿದ್ದಾನೆ । ಸ್ವಾಮಿ ಚಿನ್ಮಯನಿದ್ದಾನೆ ।
ನಿನ್ನಾ ಚಿಂತೆಯ ಬಿಡಿಸುವ ಗೌರೀ ಕಾಂತನಿದ್ದಾನೆ ॥ ಪ ॥

ಎಳ್ಳು ಕೊನೆಯು ಮುಳ್ಳು ಮೊನೆಯು ।
ಪೊಳ್ಳು ಬಿಡದಾ ಒಳಗೂ ಹೊರಗೂ ॥
ಎಲ್ಲಾ ತಾವಿನಲ್ಲಿ ಗೌರಿ ವಲ್ಲಭನಿದ್ದಾನೆ ॥ ೧ ॥

ಹಿಂದೆ ನಿನ್ನ ಸಲಹಿದರ್‍ಯಾರೋ ।
ಮುಂದೆ ನಿನ್ನ ಸಲಹುವರ್‍ಯಾರೋ ॥
ಅಂದಿನಿಂದಲೂ ಇಂದಿನವರೆಗೂ ಕಾಂತನಿದ್ದಾನೆ । ಸ್ವಾಮಿ
ಚಿನ್ಮಯನಿದ್ದಾನೆ ॥ ೨ ॥

ನಾನು ನೀನು ಎಂಬೊ ಉಭಯ ।
ಹೀನ ಗುಣಗಳೆಲ್ಲಾ ಕಳೆದು ।
ಜ್ಞಾನಿ ಚಿದಾನಂದ ಸುಖ ಸಂಪೂರ್ಣನಿದ್ದಾನೆ ॥ ೩ ॥

# ನಾ ಡೊಂಕಾದರೆ ನಿನ್ನ ನಾಮ

ನಾ ಡೊಂಕಾದರೆ ನಿನ್ನ ನಾಮ ಡೊಂಕೆ ವಿಠ್ಠಲ ॥ ಪ ॥

ನದಿಯು ಡೊಂಕಾದರೇನು । ಉದಕ ಡೊಂಕೆ ವಿಠ್ಠಲ ॥
ಹಾವು ಡೊಂಕಾದರೇನು । ವಿಷವು ಡೊಂಕೆ ವಿಠ್ಠಲ ॥ ೧ ॥

ಕಬ್ಬು ಡೊಂಕಾದರೇನು । ಸವಿಯು ಡೊಂಕೆ ವಿಠ್ಠಲ ॥
ಆಕಳು ಡೊಂಕಾದರೇನು । ಹಾಲು ಡೊಂಕೆ ವಿಠ್ಠಲ ॥ ೨ ॥

ಬಿಲ್ಲು ಡೊಂಕಾದರೇನು । ಬಾಣ ಡೊಂಕೆ ವಿಠ್ಠಲ ॥
ಪುಷ್ಪ ಡೊಂಕಾದರೇನು । ಪರಿಮಳ ಡೊಂಕೆ ವಿಠ್ಠಲ ॥ ೩ ॥

ನಾನು ಹೊಲೆಯನಾದರೆ । ನಿನ್ನ ನಾಮ ಹೊಲೆಯೆ ವಿಠ್ಠಲ ॥
ಅಜ್ಞಾನನಾದರೇನು ಕಾಯೋ । ಸುಜ್ಞ ಪುರಂದರ ವಿಠ್ಠಲ ॥ ೪ ॥

# ಜಯತು ಜಯ ವಿಠಲಾ

ಜಯತು ಜಯ ವಿಠಲಾ... ।
ನಿನ್ನ ನಾಮವು ಶಾಂತಿಧಾಮವು ಸೌಖ್ಯಧಾರಾಮ ॥ ಪ ॥

ಪಾವನಾಂಗ ಪಂಡರಿನಾಥ । ಪಾದ ಸೇವಾ ಪುಣ್ಯವ ನೀತಾ ।
ಕರುಣಿಸಿ ಬಾರಯ್ಯ ದರುಶನ ತೋರಯ್ಯ ॥
ನೀ ಎನ್ನ ಭಾಗ್ಯವಯ್ಯ ಪಾಂಡುರಂಗ ಪಾಂಡುರಂಗಯ್ಯ ॥ ೧ ॥

ಕನಸು ಮನಸಿನ ಜೀವವು ನೀನೆ । ಅಂತರಾತ್ಮದ ಭಾವವು ನೀನೆ ॥
ಅನ್ಯವು ಇಲ್ಲವಯ್ಯ ಎಲ್ಲವೂ ನಿನ್ನದಯ್ಯಾ ॥
ತುಕ ಎಂಬ ಮಾತಿದಯ್ಯ ಪಾಂಡುರಂಗ ಪಾಂಡುರಂಗಯ್ಯ ॥ ೨ ॥

# ಜೈ ಜೈ ವಿಠಲ

ಜೈ ಜೈ ವಿಠಲ ಪಾಂಡುರಂಗ ।
ಜಯಹರಿ ವಿಠಲ ಪಾಂಡುರಂಗ ॥ ಪ ॥

ಭಕ್ತ ಪೋಷಕ ಪಾಂಡುರಂಗ ।
ಮುಕ್ತಿ ಪ್ರದಾಯಕ ಪಾಂಡುರಂಗ ॥ ೧ ॥

ತಂದೆ-ತಾಯಿಯು ಪಾಂಡುರಂಗ ।
ಬಂಧು-ಬಳಗವು ಪಾಂಡುರಂಗ ॥ ೨ ॥

ಹೊಂದಿ ಬರುವನು ಪಾಂಡುರಂಗ ।
ರಘು ರಾಮ ವಿಠಲನೆ ಪಾಂಡುರಂಗ ॥ ೩ ॥

# ಮಂಗಳಂ ಶ್ರೀ ಪಂಚದುರ್ಗೆ

ಮಂಗಳಂ ಶ್ರೀ ಪಂಚದುರ್ಗೆಗೆ ।
ಜಯ ಮಂಗಳಾರತಿ ಎತ್ತಿ ಶ್ರೀ ಮಹೇಶ್ವರಿಗೆ ॥ ಪ ॥

ಶಂಖಚಕ್ರ ಶೂಲಾಂಕುಶ ಪಾಣಿಗೆ । ಶಂಖನಾಲಂಕರಿಗೆ ।
ಕುಂಕುಮಬೊಟ್ಟು ಕಸ್ತೂರಿ ಲಲಾಟೆಗೆ ।
ಪಂಕಜಗಂಧಿ ಶ್ರೀ ಪಾರ್ವತಿಗೆ ॥ ೧ ॥

ಕೋಕಿಲಗಾನೆಗೆ ಕೋಕಪಲೋಚಗೆ ।
ಶ್ರೀ ಕಂಠನಾರ್ಧಂಗಿ ಗೌರಿಗೆ ।
ಏಕದಂತನ ಜನನಿಗೆ ಜಗದಂಬೆಗೆ ।
ಲೋಕನಾಯಕಿ ಶ್ರೀ ಮಹಾಕಾಳಿಗೆ ॥ ೨ ॥

ಕಂಜದಳಾಕ್ಷಿಗೆ ಕಲದೌತ್ರಗಾತ್ರೆಗೆ ।
ಕುಂಜರಗಮನೆ ಕುದುರ ಜಾತೆಗೆ ॥
ಮಂಜಿರನುರಪುರ ರಣಿತ ಪದಾಬ್ಜೆಗೆ ।
ನಂಜುಂಡಗೆ ಶ್ರೀ ಮಂಗಳೆಗೆ ॥ ೩ ॥

ಅಂಗಜರೂಪಗೆ ಮಂಗಳದಾತ್ರೆಗೆ ।
ಭೃಂಗಕುಂತಳೆ ಸರ್ವಮಂಗಳೆಗೆ ।
ಬಂಗಾರ ಮುಕುಟದ ಮಾಂಗಲ್ಯ ಧರಿಸಿದ ।
ಸಂಗೀತ ಲೋಲೆಗೆ ಶರ್ವಾಣಿಗೆ ॥ ೪ ॥

ರೂಢಿಗಧಿಕ ಬಪ್ಪನಾಡಗೊಡತಿಯಾಗಿ ।
ಮುಡಿತೋರಿದ ಶ್ರೀ ಮೂಕಾಂಬಿಕೆಗೆ ।
ಕ್ರೋಡವತಾರ ಲಕ್ಷ್ಮೀನಾರಾಯಣನ ಸೊಸೆ ।
ಬೇಡಿದಿಷ್ಟಾರ್ಥವ ನೀವ ಸರ್ವೇಶಗೆ ॥ ೫ ॥

# ಮಂಗಳಂ ಜಯ ಮಂಗಳಂ

ಮಂಗಳಂ ಜಯ ಮಂಗಳಂ ।
ಮಂಗಳಂ ನಿತ್ಯ ಶುಭ ಮಂಗಳಂ ॥ ಪ ॥

ಚಲಿಸುವ ಜಲದಲಿ ಮತ್ಸ್ಯನಿಗೆ ।
ಗಿರಿಯ ಬೆನ್ನಲಿ ಪೊತ್ತ ಕೂರ್ಮನಿಗೆ ॥
ಧರೆಯನು ಧರಿಸಿದ ವರಹವತಾರಗೆ ।
ತರಳನ ಕಾಯ್ದ ಶ್ರೀ ನರಸಿಂಹಗೆ ॥ ೧ ॥

ಭೂಮಿಯ ದಾನವ ಬೇಡಿದಗೆ ।
ಆ ಮಹಾ ಕ್ಷತ್ರಿಯರ ಗೆಲಿದವಗೆ ॥
ಶ್ರೀ ರಾಮಚಂದ್ರನೆಂಬ ದಶರಥ ಸುತನಿಗೆ ।
ಸತ್ಯಭಾಮೆಯರಸ ಗೋಪಾಲ ಕೃಷ್ಣನಿಗೆ ॥ ೨ ॥

ಬತ್ತಲೆ ನಿಂತಿಹ ಬೌದ್ಧನಿಗೆ ।
ಉತ್ತಮ ಹಯವೇರಿದ ಕಲ್ಕನಿಗೆ ॥
ಹತ್ತವತಾರದಿ ಭಕ್ತರ ಸಲಹುವ ।
ಶ್ರೀ ಸತ್ಯ ಪುರಂದರ ವಿಠಲನಿಗೆ ॥ ೩ ॥

ನಮೋ ಪುಂಡಲೀಕ ವರದ ಪಾಂಡುರಂಗಾ... **ಹರಿವಿಠ್ಠಲ್** ।

ಸೀತಾಕಾಂತ ಸ್ಮರಣ ಜಯ ಜಯ... **ರಾಮ್** ।

ರಾಧಾ ಕಾಂತ ಸ್ಮರಣ ಜಯ ಜಯ... **ಗೋಪಾಲ್** ।

ಶಂಖಚಕ್ರ ಪೀತಾಂಬರಧಾರೀ... **ಶ್ರೀಹರೀ** ।

ನಮೋ ಪಾರ್ವತೀ ಪತೇ ಹರ ಹರ... **ಮಹಾದೇವ್** ।

ಶ್ರೀ ಮದ್ರಾ ರಮಣ ಗೋವಿಂದಾರಿ... **ಗೋವಿಂದ** ॥

~~~ **ಸಮಾಪ್ತಿ** ~~~
~~~